ಪ್ರಬುದ್ಧ ಕರ್ಣಾಟಕ

ಸಂಪುಟ ೩೩—ಸಂಚಿಕೆ ೨

೧೨೮

ಖರ ಸಂವತ್ಸರ

ಆಷಾಢ ಸಂಚಿಕೆ

•

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೧

…ಚಿಕೆ

ಪ್ರಬುದ್ಧ ಕರ್ಣಾಟಕ

ಖರ ಸಂವತ್ಸರ | ೧೨೮ | ಆಷಾಢ ಸಂಚಿಕೆ

ವ್ಯಾಸಂಗದ ಹವ್ಯಾಸ*

"ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಶಾಸ್ತ್ರಂಗಳಂ ನೋಡುತಂ" ಎಂದು ಪುಲಿಗೆರೆಯ ಸೋಮೇಶ್ವರನ ಮಾತು. ಬಲ್ಲವರಿಂದ ಕಲಿಯುವ ವಿಚಾರವಂತೂ ಅತಿ ಶ್ರೇಷ್ಠವಾದದ್ದೇ. ಹೀಗೆ ಕಲಿಯಲು ಸಾಧ್ಯವಿಲ್ಲದಿರುವಾಗ "ಶಾಸ್ತ್ರಂಗಳನ್ನು ನೋಡಿ ಕಲಿಯುವ ಮಾರ್ಗವೇ ಸುಲಭವಾದದ್ದು, ಇಲ್ಲಿ "ಶಾಸ್ತ್ರಂಗಳಂ" ಎಂಬ ಮಾತನ್ನು ಕವಿ ಎಲ್ಲ ರೀತಿಯ ಗ್ರಂಥಸಮುದಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಬಳಸಿದ್ದಾನೆ. ಇದರಲ್ಲಿ ರಸಭಾವ ಪ್ರಧಾನವಾದ ಕಾವ್ಯ ನಾಟಕಾದಿ ಗ್ರಂಥಗಳೂ ವಿಜ್ಞಾನಶಾಸ್ತ್ರಗಳೂ ರಾಜಕೀಯ ಸಾಮಾಜಿಕ ಗ್ರಂಥಗಳೂ ಚರಿತ್ರೆಗಳೂ ಯಂತ್ರೋಪಕರಣ ವಿಷಯದ ಗ್ರಂಥಗಳೂ ಸೇರಿವೆ. ಅಲ್ಲದೆ ರೈಲ್ವೆ ಗೈಡಿನಂಥ ಗ್ರಂಥಗಳೂ, ಸರ್ಕಾರದ ಆಡಳಿತ ವಿಷಯಕವಾದ ಪ್ರಕಟನೆಗಳೂ, ಇನ್ನೂ ಹಲವಾರು ರೀತಿಯ ಲೌಕಿಕ ಪಾರಮಾರ್ಥಿಕ ಜ್ಞಾನದಾಯಕವಾದ ಗ್ರಂಥಗಳೂ ಇವೆ. ಈ ಎಲ್ಲ ಗ್ರಂಥಗಳನ್ನೂ ಒಬ್ಬನೇ ತನ್ನ ಜೀವಮಾನದಲ್ಲಿ ಓದಿ ಮುಗಿಸುವುದು ತೀರ ಅಸಾಧ್ಯವಾದದ್ದು. ತನಗೆ ಯಾವ ವಿಷಯದಲ್ಲಿ ಆಸಕ್ತಿ ಇದೆಯೋ, ಯಾವುದರಲ್ಲಿ ತನ್ನ ಬುದ್ಧಿ ಚುರುಕಾಗಿ ಓಡುತ್ತದೆಯೋ ಆ ವಿಷಯವನ್ನು ಕುರಿತ ಗ್ರಂಥಗಳನ್ನು ಮಾತ್ರ ತಾನು ಆರಿಸಿಕೊಂಡು ಓದಬೇಕಾಗುತ್ತದೆ. ಇದೂ ಕೂಡ

---

* ಮೈಸೂರು ಆಕಾಶವಾಣಿಯ ಕೃಪೆಯಿಂದ: ಭಾಷಣ ೨೭-೬-೧೯೫೦.

ಕಷ್ಟಸಾಧ್ಯವಾದದ್ದೇ. ಏಕೆಂದರೆ, ಯಾವ ಅಲ್ಪವಿಷಯವೇ ಆಗಲಿ ಅದನ್ನು ಕುರಿತ ಗ್ರಂಥಗಳ ಸಂಖ್ಯೆ ಪ್ರಪಂಚದ ನಾನಾ ಭಾಷೆಗಳಲ್ಲಿ ಅಪಾರವಾಗಿದೆ. ಆದ್ದರಿಂದ ಇದರಲ್ಲಿ ಕೂಡ ವ್ಯಕ್ತಿ ವಿವೇಕವನ್ನು ಉಪಯೋಗಿಸಿ ಮುಖ್ಯವೆಂದು ಕಾಣುವ ಗ್ರಂಥಗಳನ್ನು ಮಾತ್ರ ನೋಡಬೇಕಾಗುತ್ತದೆ. ಹೀಗೆ ಗ್ರಂಥಗಳನ್ನು ಅವಲೋಕನ ಮಾಡಿ ಜ್ಞಾನವನ್ನು ಗಳಿಸುವುದಕ್ಕೆ ವ್ಯಾಸಂಗವೆಂದು ಹೆಸರು. ಎತ್ತಿಕೊಂಡ ವಿಷಯವನ್ನು ಪಟ್ಟುಹಿಡಿದು ಆಸಕ್ತಿಯಿಂದ ಅಭ್ಯಾಸಮಾಡುವುದು ನಿಜವಾದ ವ್ಯಾಸಂಗ. ಆದರೆ ಇಲ್ಲಿ ಆ ಪದದ ಅರ್ಥವನ್ನು ಸ್ವಲ್ಪ ಸಡಿಲಮಾಡಿ ವಿನೋದಕ್ಕಾಗಿ ಓದುವುದನ್ನೂ ಒಳಕೊಳ್ಳುವಂತೆ ಅದನ್ನು ಬಳಸಿದೆ.

ಹವ್ಯಾಸವೆಂದರೆ ಗೀಳು, ಆಸಕ್ತಿ, ಅಭಿಲಾಷೆ. ಒಬ್ಬನಿಗೆ ಒಂದೆರಡು ವಿಷಯಗಳಲ್ಲಿ ಮಾತ್ರ ತೀವ್ರವಾದ ಆಸಕ್ತಿ ಇರುತ್ತದೆ. ಮಿಕ್ಕ ವಿಷಯಗಳಲ್ಲಿ ದಿನಚರಿಯ ವ್ಯವಹಾರಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತಿಳಿದುಕೊಂಡಿದ್ದರೆ ಸಾಕು. ಹೀಗೆ ತಿಳಿಯುವುದು ಹವ್ಯಾಸವೆನಿಸಿಕೊಳ್ಳುವುದಿಲ್ಲ. ಕೆಲವರ ಬಾಳಿನಲ್ಲಿ ಓದುವುದು ದಿನಚರಿಯ ಕೆಲಸಗಳಲ್ಲಿ ಒಂದು ಅಂಶವಾಗಿರುತ್ತದೆ. ಎಂದಾದರೂ ಒಂದು ದಿನ ಏನೋ ಕಾರಣದಿಂದ ಓದಲಾಗದಿದ್ದರೆ ಅವರ ಮನಸ್ಸಿಗೆ ನೆಮ್ಮದಿಯಿರುವುದಿಲ್ಲ. ಕಾಫಿ ಕುಡಿಯದಿದ್ದರೆ, ನಸ್ಯ ಏರಿಸದಿದ್ದರೆ ಹೇಗೆ ಬಾಳು ಬರಿದಾಗಿ ಕಾಣುತ್ತದೋ, ಹಾಗೆಯೇ ಓದದೇ ಇದ್ದರೆ ಕೆಲವು ಜೀವಿಗಳಿಗೆ ಹಿತವಾಗುವುದಿಲ್ಲ. ಇಂಥವರಿಗೆ ಓದುವುದು ದಿನಚರಿಯ ರೂಢಿಯಾಗಿರುತ್ತದೆ. ಹವ್ಯಾಸವೆಂಬ ಪದವನ್ನು ಈ ಅರ್ಥದಲ್ಲಿಯೂ ಬಳಸುವುದು ನಮ್ಮ ಜನರಲ್ಲಿ ಕಾಣುತ್ತದೆ. ಏನಾದರೂ ಒಂದು ಹವ್ಯಾಸ ಪ್ರತಿಯೊಬ್ಬನಿಗೂ ಇರುತ್ತದೆ. ಕೆಲವು ಹವ್ಯಾಸಗಳು ಅವನ್ನುಳ್ಳ ವ್ಯಕ್ತಿಗಳಿಗೆ ಮಾತ್ರ ಹಿತವನ್ನೋ, ಅಹಿತವನ್ನೋ ಮಾಡಬಹುದು; ಕೆಲವು ಸುತ್ತಲಿನ ಸಮಾಜಕ್ಕೆ ಮಾತ್ರ ಒಳ್ಳೆಯದಾಗಿಯೋ, ಕೆಟ್ಟದಾಗಿಯೋ ಪರಿಣಮಿಸಬಹುದು; ಮತ್ತೆ ಕೆಲವು ಹವ್ಯಾಸಗಳು ವ್ಯಕ್ತಿಗೂ, ಸಮಾಜಕ್ಕೂ, ಏಕಕಾಲದಲ್ಲಿ ಕ್ಷೇಮವನ್ನೋ, ಕ್ಷೋಭೆಯನ್ನೋ ಎಸಗಬಹುದು. ವ್ಯಾಸಂಗದ ಹವ್ಯಾಸಕ್ಕೂ ಈ ಎಲ್ಲ ಲಕ್ಷಣಗಳುಂಟು. ಕಲಿತದ್ದು ಒಳ್ಳೆಯದಾಗಿದ್ದರೆ ಅದರಿಂದ ಯಾರಿಗೂ ಕೇಡುಕಾಗುವುದಿಲ್ಲ. ತಸ್ಕರ ಶಾಸ್ತ್ರವನ್ನು ಕಲಿತರೆ, ಕಲಿತದ್ದನ್ನು ಕಾರ್ಯತಃ ತೋರಿಸಿದರೆ ಯಾರಿಗೂ ಕಷ್ಟ ತಪ್ಪುವುದಿಲ್ಲ; ತುಬ್ಬುಗಾರನಿಗೆ ಇದರಿಂದ ಪ್ರಯೋಜನವಿದ್ದೇ ಇದೆ. ಮೋಚಿಯಿಂದ ಹಿಡಿದು ಮಂತ್ರಿಯ ವರೆಗೆ, ರಾಕ್ಷಸನಿಂದ ಹಿಡಿದು ತಪಸ್ವಿಯ ವರೆಗೆ, ಅವರವರು ವ್ಯಾಸಂಗಮಾಡಬೇಕಾದ ವಿಷಯಗಳು ಬಹಳವಾಗಿವೆ. ಇವನ್ನೆಲ್ಲ ಕುರಿತು ಇಲ್ಲಿ ವಿವರಿಸಲು ಸಾಧ್ಯವಿಲ್ಲ. ಹೊತ್ತು ಕಳೆಯುವುದಕ್ಕೋ, ವಿನೋದಕ್ಕೋ,

ಅಲ್ಪಸ್ವಲ್ಪ ಜ್ಞಾನಾರ್ಜನೆ ಮಾಡುವುದಕ್ಕೋ ಬೇಕಾದ ಗ್ರಂಥವ್ಯಾಸಂಗವನ್ನು ಮಾತ್ರ ಕುರಿತು ಇಲ್ಲಿ ಕೊಂಚ ಹೇಳಿದೆ.

ಸ್ವಂತ ಅನುಭವದಿಂದ ಬರುವ ತಿಳುವಳಿಕೆಯೇ ಉತ್ಕೃಷ್ಟವಾದ ಜ್ಞಾನವಾಗಿದ್ದರೂ ಅದು ಎಲ್ಲರಿಗೂ, ಎಲ್ಲ ವಿಷಯುಗಳಲ್ಲೂ ಲಭ್ಯವಾಗುವುದಿಲ್ಲ. ಪ್ರತಿಯೊಬ್ಬನ ಅನುಭವಕ್ಕೂ ಮಿತಿ ಇರುತ್ತದೆ. ಈ ಮಿತಿಯನ್ನು ಕೊಂಚ ವಿಸ್ತರಿಸಿಕೊಳ್ಳಬೇಕಾದರೆ ವ್ಯಾಸಂಗವು ಅವಶ್ಯಕ. ಈ ವಿಸ್ತರಣ ಕಾರ್ಯ ಒಂದು ದಿನದಲ್ಲಿ ನಡೆಯುವಂಥದಲ್ಲ. ಪ್ರತಿದಿನವೂ ಕೊಂಚ ಕೊಂಚ ಅಗಲವಾಗುತ್ತಾ ಹೋಗುತ್ತದೆ. ಆದ್ದರಿಂದ ವ್ಯಾಸಂಗವು ಹವ್ಯಾಸವಾಗಲೇ ಬೇಕು. ಮನುಷ್ಯ ಸ್ವಭಾವವನ್ನು ಚೆನ್ನಾಗಿ ತಿಳಿಯಬೇಕಾದರೆ ವ್ಯಕ್ತಿಯೊಬ್ಬನು ನೂರಾರು ಜನರೊಡನೆ ಕಲೆತು ಓಡಾಡಿ ಪರೀಕ್ಷೆಮಾಡಬೇಕು. ಇದು ಎಷ್ಟು ಜನರಿಗೆ ಸಾಧ್ಯ? ಲೋಕದಲ್ಲಿ ಎಷ್ಟೋ ಜನರಿದ್ದರೂ ವ್ಯಕ್ತಿಯ ಪಾಲಿಗೆ ಅವರು ಇಲ್ಲದಂತೆಯೇ; ಎಲ್ಲರೊಡನೆಯೂ, ಅವನು ನಿಕಟವಾದ ಸಂಬಂಧವನ್ನು ಬೆಳಸುವುದು ಆಗದ ಕೆಲಸ. ಅವನ ಪ್ರಪಂಚದಲ್ಲಿ ಬೀದಿಯಲ್ಲಿ ಹೊರಟರೆ "ಏನ್ರಿ, ಚೆನ್ನಾಗಿದ್ದೀರಾ" ಎಂದು ಕೇಳುವವರ ಸಂಖ್ಯೆ ಹೆಚ್ಚಾಗಿ ಇರುತ್ತದೆ. ಅವರಲ್ಲಿ ಇವನಿಗೆ ಬೇಕಾದವರು, ಕಷ್ಟ ಸುಖಗಳಲ್ಲಿ ನೆರವಾಗುವವರು ತೀರ ಕಡಿಮೆ. ಆತ್ಮೀಯವಾದ ಸಂಪರ್ಕವನ್ನು ಹೊಂದುವವರಂತೂ ಎಣಿಕೆಗೆ ಸಿಕ್ಕಬಲ್ಲರು. ವ್ಯಕ್ತಿಯ ಪ್ರಪಂಚ ಇಷ್ಟು ಸಣ್ಣದು. ಇದರಿಂದ ಬರುವ ಅನುಭವವು ವಿಶಾಲವಾಗಿಯೂ ಆಳವಾಗಿಯೂ ಹೇಗೆ ತಾನೇ ಇದ್ದೀತು? ಆದರೆ ಇದು ನೇರವಾದ ಅನುಭುವವಾಗಿರುವುದರಿಂದ ಬೆಲೆಯುಳ್ಳದ್ದು. ಇದನ್ನು ವಿಸ್ತರಿಸಿಕೊಳ್ಳಬೇಕಾದರೆ ವ್ಯಾಸಂಗಕ್ಕಿಂತ ಉತ್ಕೃಷ್ಟವಾದ ಮಾರ್ಗವಿಲ್ಲ. ಕಥೆ, ಕಾದಂಬರಿ, ನಾಟಕಗಳನ್ನು ಓದಿದರೆ ಮನುಷ್ಯಸ್ವಭಾವದ ಪರಿಜ್ಞಾನ ಹೆಚ್ಚು ಹೆಚ್ಚಾಗಿ ಉಂಟಾಗುತ್ತದೆ. ನಮ್ಮ ಅನುಭವದಲ್ಲಿ ಎದುರುಗೊಳ್ಳಲಾಗದ ವ್ಯಕ್ತಿಗಳನ್ನು ನಾವು ಅಲ್ಲಿ ನೋಡುತ್ತೇವೆ; ನಾವು ಕಾಣದ ಸಮಸ್ಯೆಗಳೂ ಧರ್ಮಸಂಕಟಗಳೂ ನಮಗೆ ಅಲ್ಲಿ ದೊರೆಯುತ್ತವೆ. ನಮಗಿಂತಲೂ ನೂರರಷ್ಟು ಅನುಭವಶಾಲಿಯಾದ ಕವಿಯ ಜ್ಞಾನಭಂಡಾರ ನಮ್ಮ ವಶವಾಗುತ್ತದೆ. ಕವಿಯ ಮಾತು ಅಂತಿರಲಿ. ನ್ಯಾಯಸ್ಥಾನದಲ್ಲಿ ನಡೆಯುವ ಮೊಕದ್ದಮೆಗಳ ವರದಿಗಳನ್ನೋದಿದರೂ ಸಾಕು. ಲೋಕದಲ್ಲಿ ಎಂತೆಂತಹ ಚಿತ್ರ ವಿಚಿತ್ರ ಸ್ವಭಾವದವರಿದ್ದಾರೆಂಬ ವಿಷಯ ಗೊತ್ತಾಗುತ್ತದೆ; ಲೋಕಲೀಲೆಯನ್ನು ಕಂಡು ವಿಸ್ಮಯಗೊಳ್ಳುತ್ತೇವೆ. ಹೀಗೆ ವ್ಯಾಸಂಗದಿಂದ ಬರುವ ಜ್ಞಾನ ನೇರವಾದ ಅನುಭವಕ್ಕೆ ಸಾಟಿಯಲ್ಲದಿದ್ದರೂ ಅದಕ್ಕಿರುವ ಎಲ್ಲೆಯನ್ನು ವಿಸ್ತರಗೊಳಿಸುತ್ತದೆ. ಅನುಭವದ ಜ್ಞಾನಕ್ಕೆ ವ್ಯಾಸಂಗದ ಜ್ಞಾನ ಪೂರಕವಾಗಿರುತ್ತದೆ.

ವ್ಯಾಸಂಗವನ್ನು ಹವ್ಯಾಸವಾಗಿ ಉಳ್ಳವರಿಗೆ ತಮ್ಮ ಜ್ಞಾನವನ್ನು ಬೆಳಸಿಕೊಳ್ಳಬೇಕೆಂಬ ಒಂದೇ ಒಂದು ಉದ್ದೇಶವಿರುವುದಿಲ್ಲ. ಕೆಲವರು ತಾವು ಕಲಿತದ್ದನ್ನು ಬೇರೆಯವರಿಗೆ ತಿಳಿಸಬೇಕೆಂದು ಬಯಸಿ ಗ್ರಂಥರಚನೆ ಮಾಡುತ್ತಾರೆ. ಇತರರು ತಿಳಿಯಲಿ ಬಿಡಲಿ, ಬರೆದ ಗ್ರಂಥ ಖರ್ಚಾಗಿ, ಕೊಂಚ ಹಣ ಕೈಗೆ ಬಂದರೆ ಯಾರನ್ನು ಕೆಡಿಸಿತು ಎಂಬ ಮನೋಧರ್ಮ ಕೆಲವರದು. ಕೀರ್ತಿಗಾಗಿ ಬರೆಯುವವರು ಮತ್ತೆ ಕೆಲವರು; ಮನಸ್ಸಿನಲ್ಲಿ ತಾಕಲಾಡುತ್ತಿರುವ ಆಲೋಚನೆಗಳ ಹೊರೆಯನ್ನು ಹೊರಕ್ಕೆ ಕೆಡವಿ ಚಿತ್ತಸಮಾಧಾನವನ್ನು ಪಡೆಯಬೇಕೆಂದು ಬರೆಯುವವರು ಕೆಲವರು; ಸಮಾಜದಲ್ಲಿನ ಅನ್ಯಾಯಗಳಿಂದ ಕೊರಗಿ ಕ್ರುದ್ಧರಾಗಿ ಜನಮನವನ್ನು ಉದ್ರೇಕಗೊಳಿಸಿ ಕ್ರಾಂತಿಯನ್ನೆಬ್ಬಿಸಬೇಕೆಂದು ಬರೆಯುವವರು ಮತ್ತೆ ಕೆಲವರು; "ಕಾವ್ಯಂ ಯಶಸೇ, ಅರ್ಥಕೃತೇ ವ್ಯವಹಾರವಿದೇ, ಶಿವೇತರಕ್ಷತಯೇ| ಸದ್ಯಃ ಪರನಿರ್ವೃತಯೇ, ಕಾಂತಾಸಮ್ಮಿತತಯೋಪದೇಶಯುಜೇ" ಎಂದು ಮಮ್ಮಟಭಟ್ಟರು ಕಾವ್ಯ ವ್ಯಾಸಂಗದ ಉದ್ದೇಶಗಳನ್ನು ವಿಂಗಡಿಸಿ ಹೇಳಿಬಿಟ್ಟಿದ್ದಾರೆ. ಈ ಮಾತನ್ನು ಎಲ್ಲ ರೀತಿಯ ಗ್ರಂಥವ್ಯಾಸಂಗಕ್ಕೂ ಅನ್ವಯಿಸಬಹುದು. ಉದ್ದೇಶವಿಲ್ಲದ ವ್ಯಾಸಂಗದ ಹವ್ಯಾಸ ಅರ್ಥಹೀನವಾದದ್ದು. ಕಲೆಗಾಗಿ ಕಲೆ, ವ್ಯಾಸಂಗಕ್ಕಾಗಿ ವ್ಯಾಸಂಗ ಎಂಬ ಸಿದ್ಧಾಂತಗಳಲ್ಲಿ ನನಗೆ ನಂಬಿಕೆ ಕಡಮೆ. ಪ್ರಯೋಜನದ ಅಭಿಲಾಷೆಯಿಲ್ಲದೆ ಯಾವ ಕೆಲಸವನ್ನೂ ಯಾವ ದಡ್ಡನೂ ಕೂಡ ಮಾಡನೆಂಬುದು ಹಿರಿಯರ ಹೇಳಿಕೆ. ಇದು ಅನುಭವದ ಸತ್ಯ. ಆದ್ದರಿಂದ ವ್ಯಾಸಂಗದ ಹವ್ಯಾಸಕ್ಕೂ ಇರಲೇಬೇಕಾದ ಉದ್ದೇಶಗಳನ್ನೂ, ಪ್ರಯೋಜನಗಳನ್ನೂ ಪರಿಶೀಲಿಸುವುದು ಅತ್ಯವಶ್ಯಕ.

ನಮಗುಂಟಾಗುವ ಸುಖದುಃಖಗಳು ಇಬ್ಬಗೆಯಾಗಿವೆ. ಒಂದನೆಯದು ದೈಹಿಕವಾದದ್ದು, ಎರಡನೆಯದು ಮಾನಸಿಕವಾದದ್ದು; ಒಂದು ಸ್ಥೂಲ, ಇನ್ನೊಂದು ಸೂಕ್ಷ್ಮ. ದೈಹಿಕ ಸುಖಕ್ಕಿಂತ ಮಾನಸಿಕ ಸುಖಕ್ಕೆ ಹೆಚ್ಚು ಬೆಲೆ. ಒಂದೊಂದು ಸಲ ಮಾನಸಿಕ ಸುಖ ಅಧಿಕವಾಗಿದ್ದರೆ ದೈಹಿಕ ದುಃಖ ಕೂಡ ಮರೆತುಹೋಗಬಹುದು. ವ್ಯಾಸಂಗದಿಂದ ನಾವು ಪ್ರಮುಖವಾಗಿ ಪಡೆಯುವುದು ಮಾನಸಿಕ ಸುಖವನ್ನು. ಅದರಲ್ಲೂ ರಸಭಾವಗಳ ರಸಾಯನವಾದ ಕಾವ್ಯ ನಾಟಕಾದಿಗಳನ್ನು ಓದಿದರೆ ನಮ್ಮ ಮನಸ್ಸಿನ ಸುಖ ಆನಂದದ ಅಂತಸ್ತಿಗೆ ಏರಿಬಿಡುತ್ತದೆ. ಇದಕ್ಕೆ ಕುಮಾರವ್ಯಾಸನಿಂದ ಒಂದು ಸಣ್ಣ ಉದಾಹರಣೆಯನ್ನು ಕೊಡಬಹುದು. ದ್ರೌಪದಿಯ ಸೌಂದರ್ಯಶ್ರೀಯ ವಿಲಾಸವನ್ನು ವರ್ಣಿಸುತ್ತ "ಹೊರೆಯ ಸಖಿಯರ ನೋಟ ಮೈಯಲಿ ಹರಿದು ಬಳಲದು, ಚಿತ್ತವೀಕೆಯಧರಿಸಿ ಕುಸಿಯದು, ಕಿವಿಗಳಿಗೆ ಮೆಲ್ನುಡಿಯ ಸವಿಸವಿದು ಅರುಚಿಯಾಗದು, ನಾಸಿಕವು ಮೈಪರಿಮಳದ

ಪೂರದಲಿ ಗಂಧಾಂತರಕೆ ನೆರೆಯದು ; ರೂಪನೇನೆಂಬೆನು " ಎಂದು ವಿಸ್ಮಯಗೊಂಡಿದ್ದಾನೆ. ನೋಟಕರ ಪಂಚೇಂದ್ರಿಯಗಳಿಗೆ ಅನುಭವಿಸಿದಷ್ಟೂ ಇನ್ನೂ ಬೇಕೆನ್ನಿಸುವ ದೈಹಿಕ ಸೌಂದರ್ಯದ ಪರಮಾವಧಿಯನ್ನು ಇಲ್ಲಿ ಕವಿ ಸೂಚಿಸಿದ್ದಾನೆ. ಇಂಥ ಚೆಲುವು ಸ್ವಯಂವರಮಂಟಪದಲ್ಲಿ ಹೆಜ್ಜೆಯಿಡುತ್ತ ನಡೆತರುವಾಗ ನೆರೆದು ನೋಡುವ ರಾಜಚೆನ್ನಿಗರ ಅವಸ್ಥೆ ಏನಾಗಿರಬಹುದು ? ತಮ್ಮನ್ನು ತಾವೇ ಮರೆತು ನಿಶ್ಚೇಷ್ಟರಾದರಂತೆ ಅವರು. " ಮಡಿಸಿದೆಲೆ ಬೆರಳೊಳಗೆ, ಬಾಯೊಳಗಡಸಿದೆಲೆ ಬಾಯೊಳಗೆ, ಸಚಿವರ ನುಡಿಯ ಕೇಳರು, ಸುಳಿವ ಕಾಣರು ಲೋಚನಾಗ್ರದಲಿ " ಎಂದು ಕವಿಯ ರಸಸೂಕ್ತಿ. ನೃಪರು ಎಲೆಮಿಡುಕದೆ ಬಿಡುಗಣ್ಣರಾಗಿ ಕುಳಿತುಬಿಟ್ಟರು. ಇಂಥ ಪರವಶತೆಯ ಭಾವ ಅವರ ಮನಸ್ಸಿನಲ್ಲಿ ಹೊನಲಿಟ್ಟಿತು ; ಮಾನಸಿಕ ಸುಖದ ಜೊಮ್ಮು ಅವರ ಮೇಲೆ ಬೀಸಿತು. ಕಾವ್ಯ ವ್ಯಾಸಂಗದಿಂದ ಆಗುವ ಪರಿಣಾಮವೂ ಇಂಥದೇ. ಇದನ್ನೇ " ಸದ್ಯಃ ಪರನಿರ್ವೃತಿ " ಎಂದು ಮಮ್ಮಟಭಟ್ಟರು ಕರೆದಿರುವುದು. " ಶ್ರವಣಕೆ ಸಿಲುಕದ ಲಲಿತಾರವಸುಖಮಂ ರಸನೆಗೊದವದಮೃತದ್ರವಮಂ " ಪಡೆಯಬೇಕಾದರೆ ಕಾವ್ಯದಂಥ ಕಲೆಗಳಿಂದ ಮಾತ್ರವೇ ಸಾಧ್ಯ. ಕಾವ್ಯ ವ್ಯಾಸಂಗದ ಪರಮಾರ್ಥವೇ ಇದು. ಇದನ್ನು ಹವ್ಯಾಸವಾಗಿ ಉಳ್ಳವರು ನಿಜವಾಗಿಯೂ ಸುಖಿಗಳು. ಅವರ ಪಾಲಿಗೆ ದುಃಖವು ಕೂಡ ಆನಂದದಾಯಕವಾಗುತ್ತದೆ. ಲೋಕದ ನೋವು ಕಾವ್ಯದಲ್ಲಿ ಮೈದೋರಿದಾಗ, ಹೇಳಲಾಗದ ಯಾವುದೋ ರಸಾಯನಿಕ ಕ್ರಿಯೆಯಿಂದ, ಆನಂದ ಸ್ಯಂದಿಯಾಗಿ ಮಾರ್ಪಡುತ್ತದೆ. ಇಂಥ ಆನಂದದ ಎದುರಿಗೆ ದೈಹಿಕಸುಖ ಸತ್ವಹೀನವಾಗಿ ಕಾಣುವುದು ಅಚ್ಚರಿಯೇನಲ್ಲ.

ಶಾಸ್ತ್ರವ್ಯಾಸಂಗದಿಂದಲೂ, ಇಂಥ ಮಾನಸಿಕ ಸುಖವನ್ನು ಹೊಂದಬಹುದು. ಇಲ್ಲಿ ರಾಗಭಾವಗಳು ಉದ್ರೇಕಗೊಳ್ಳುವ ಪ್ರಸಂಗವಿಲ್ಲ. ಬುದ್ಧಿಯ ಕಾರ್ಯವೇ ಇಲ್ಲಿ ಪ್ರಧಾನ. ಪ್ರಕೃತಿಯ ರಹಸ್ಯವನ್ನು ಭೇದಿಸಲು ಬುದ್ಧಿ, ಬಂದೂಕದಿಂದ ಹೊರಚಿಮ್ಮುವ ಗುಂಡಿನಂತೆ ಮುನ್ನುಗ್ಗುತ್ತಿರುವಾಗ ಇತರ ವಿಷಯಗಳ ಪರಿವೆಯೇ ಅದಕ್ಕೆ ಬರುವುದಿಲ್ಲ. ತಾನೇ ತಾನಾಗಿ ತನ್ನ ಸಾಹಸದಲ್ಲಿ ಅದು ಆಗ ಸುಖಿಸುತ್ತದೆ. ರಹಸ್ಯವನ್ನು ಕಂಡುಹಿಡಿದಾಗಲಂತೂ ಅದಕ್ಕೆ ಬರುವ ಆನಂದ ವರ್ಣಿಸಲಸದಳ. ಕಠಿನವಾಗಿರುವ ಗಣಿತದ ಸಮಸ್ಯೆಯೊಂದನ್ನು ಬುದ್ಧಿಪರಿಶ್ರಮದಿಂದ ಬಿಡಿಸಿದಾಗ ಸಂತೋಷವುಂಟಾಗುವುದು ಎಲ್ಲರ ಅನುಭವವಾಗಿದೆ. ಆರ್ಕಿಮಿಡೀಸನು ಅವನ ಹೆಸರಿನಿಂದ ಪ್ರಸಿದ್ಧವಾಗಿರುವ ತತ್ವವನ್ನು ಕಂಡುಹಿಡಿದಾಗ " ನಾನು ಕಂಡುಹಿಡಿದೆ, ನಾನು ಕಂಡುಹಿಡಿದೆ " ಎಂದು ಕೂಗುತ್ತ ಕುಣಿದಾಡಿದನಂತೆ. ಅವನ ಮನಸ್ಸಿಗೆ

ಅಷ್ಟು ಸುಖದ ಸ್ಪರ್ಶವುಂಟಾಯಿತು. ಅಲ್ಪವಾದ ಇಂಥ ಪರಿಶೋಧನೆಯಿಂದ ಇಷ್ಟು ಹರ್ಷ ಬರುವುದಾದರೆ ಅತಿ ಗಹನವಾದ ಪ್ರಕೃತಿ ರಹಸ್ಯಭೇದನದಿಂದ ಆಗುವ ಆನಂದಕ್ಕೆ ಮಿತಿಯಿದೆಯೇ ? ಅಣು ಪರಮಾಣುಗಳ ರಚನೆಯನ್ನು ಕಂಡುಹಿಡಿಯುವುದು, ಅಣುವನ್ನು ಸೀಳುವುದು, ಗ್ರಹನಕ್ಷತ್ರ ನೀಹಾರಿಕೆಗಳ ಚಲನವಲನ ನಿಯಮಗಳನ್ನು ತಿಳಿಯುವುದು, ಅಗಾಧವಾದ ಭೌತಶಕ್ತಿಗಳನ್ನು ವಶಪಡಿಸಿಕೊಂಡು ಅವನ್ನು ಆಳುವುದು—ಇವೇ ಮುಂತಾದ ಸಾಹಸಗಳಲ್ಲಿ ಜಯವನ್ನು ಗಳಿಸಿರುವ ಮಾನವಬುದ್ಧಿ ಎಷ್ಟು ಪ್ರಚಂಡವಾದುದು ! ಇಂಥ ಬುದ್ಧಿ ಪೌರುಷದಿಂದ ಬರುವ ಆನಂದವೂ ಮಿಗಿಲಾದದ್ದು. ಹಲವು ಶತಮಾನಗಳಿಂದ ಮನುಷ್ಯಬುದ್ಧಿ ನಿರಂತರವಾಗಿ ಪರಿಶ್ರಮಿಸಿ, ಶೇಖರಿಸಿಟ್ಟಿರುವ ವಿಜ್ಞಾನಭಂಡಾರದ ಪರಿಚಯವನ್ನು ವ್ಯಾಸಂಗದ ಮೂಲಕ ಹೊಂದುವ ಆಸಕ್ತಿಯುಳ್ಳವನಿಗೂ ಆ ಬುದ್ಧಿಯಾತ್ರೆಯಲ್ಲಿ ಆನಂದವೂ ಲಭಿಸುತ್ತದೆ.

ವಿಜ್ಞಾನದ ಪರಿಶೋಧನೆಗಳಲ್ಲಿ ಬಹುಭಾಗ ಬುದ್ಧಿಯ ತರ್ಕಶಕ್ತಿಯಿಂದ ಬಂದಿರುವ ಸಿದ್ಧಿಗಳು. ಅತಿ ಮುಖ್ಯವೂ, ಮುಂದೆ ನೂರಾರು ಸಂಶೋಧನೆಗಳಿಗೆ ಬೀಜಭೂತವೂ, ಆದ ಕೆಲವು ತತ್ವಗಳು ವಿಜ್ಞಾನಿಗಳಿಗೆ ಮಿಂಚಿನಂತೆ ಹೊಳೆದುಬಿಡುತ್ತವೆ. ಇದನ್ನು ತರ್ಕಾತೀತಜ್ಞಾನವೆಂದೋ—ಸ್ವಯಂಪ್ರಕಾಶಿತಜ್ಞಾನವೆಂದೋ (Intusion) ಕರೆಯಬಹುದು. "ರೆಲಟಿವಿಟಿ" ಸಿದ್ಧಾಂತವು ಐನ್‌ಸ್ಟೀನ್ ವಿಜ್ಞಾನಿಗೆ ಈ ರೀತಿ ಗೋಚರವಾಯಿತಂತೆ. ಇಂಥ ಸಂದರ್ಭಗಳಲ್ಲಿ ವಿಜ್ಞಾನಿ ಋಷಿ ಸದೃಶನಾಗುತ್ತಾನೆ. ಕವಿಯ ದಿವ್ಯ ಭವ್ಯಸೃಷ್ಟಿಗೆ ಕಾರಣ ಹೇಗೆ ಅವನ ಪ್ರತಿಭೆಯೋ ಹಾಗೆ ವಿಜ್ಞಾನಿಯ ಗಹನಸಿದ್ಧಿಗೆ ಅವನ ಸ್ವಯಂಪ್ರಕಾಶಿತ ಜ್ಞಾನಕಾರಣ. ಇಂಥ ವಿಷಯಗಳನ್ನೆಲ್ಲಾ ವ್ಯಾಸಂಗಮಾಡುತ್ತ ಹೊರಟರೆ ಯಾರಿಗೆ ತಾನೇ ರೋಮಾಂಚವಾಗುವುದಿಲ್ಲ.

ಹೀಗೆ ಕಾವ್ಯಶಾಸ್ತ್ರಗಳೆರಡೂ, ಅವನ್ನು ವ್ಯಾಸಂಗಮಾಡುವವನಿಗೆ ಆನಂದವನ್ನು ದೊರಕಿಸಕೊಡಬಲ್ಲುವು. ಕಾವ್ಯದಲ್ಲಿ ರಾಗಭಾವಗಳ ಮೂಲಕ ಆನಂದದ ನೆಲೆ ದೊರೆತರೆ ಶಾಸ್ತ್ರದಲ್ಲಿ ಬುದ್ಧಿಯ ಮೂಲಕ ಅದೇ ನೆಲೆ ಸಿಕ್ಕುತ್ತದೆ. ಈ ಆನಂದದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅದರ ಕಡೆಗೆ ಪ್ರಯಾಣಮಾಡಲು ಕಾವ್ಯಶಾಸ್ತ್ರಗಳು ಬೇರೆ ಬೇರೆ ಮಾರ್ಗಗಳು. ವಿಜ್ಞಾನಿಯಾದವನು ಕಲಾಭ್ಯಾಸದ ಹವ್ಯಾಸವನ್ನೂ, ಕಲೆಗಾರನು ವಿಜ್ಞಾನಾಭ್ಯಾಸವನ್ನೂ ಇಟ್ಟುಕೊಂಡರೆ ಬಹಳ ಒಳ್ಳೆಯದು. ಇಬ್ಬರ ಮನಸ್ಸೂ ಪರಿಪೂರ್ಣವಾಗುತ್ತದೆ. ಐನ್‌ಸ್ಟೀನ್ ವಿಜ್ಞಾನಿ ಪಿಟೀಲುವಾದನದಲ್ಲಿ ಅತಿ ನಿಪುಣನಂತೆ. ಟಿ. ಎಸ್. ಎಲಿಯಟ್ ಎಂಬ ಕವಿ

ವಿಜ್ಞಾನದಿಂದ ಕಾವ್ಯರಚನೆಗೆ ಪ್ರೇರಣೆಯನ್ನು ಪಡೆಯುತ್ತಾನಂತೆ. ಆಲ್ಡಸ್ ಹಕ್ಸ್ಲಿ ಎಂಬ ಕವಿ ಪ್ರವಾಸವನ್ನು ಕೈಕೊಂಡಾಗಲೆಲ್ಲ ತನ್ನ ಹತ್ತಿರ ವಿವಿಧ ಜ್ಞಾನಗಳ ಗಣಿಯಾದ "ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ" ಎಂಬ ಮಹಾಗ್ರಂಥವನ್ನು ಇಟ್ಟುಕೊಂಡಿರುತ್ತಾನಂತೆ. ಹೊಟ್ಟೆಯಪಾಡಿಗಾಗಿ ಯಾವುದಾದರೂ ವಿದ್ಯೆಯನ್ನು ಮನುಷ್ಯ ಕಲಿಯಲೇ ಬೇಕು. ಇದಕ್ಕೆ ಸಂಬಂಧಪಡದ ಯಾವುದಾದರೂ ಇನ್ನೊಂದು ವಿದ್ಯೆಯ ವ್ಯಾಸಂಗ ಹವ್ಯಾಸವಾಗಬೇಕು. ಇದರಿಂದ ವ್ಯಕ್ತಿಯ ಬಾಳು ತುಂಬುತ್ತದೆ.

ಮನುಷ್ಯನು ಸುಖಾಪೇಕ್ಷಿ. ಈ ಸುಖ ಅವನಿಗೆ ಹೊರಗಣ ಪ್ರಪಂಚದಿಂದ ದೊರೆಯಬಹುದು. ತನ್ನಲ್ಲಿಯೇ ಅದನ್ನು ಕಾಣಬಹುದು. ಮನಸ್ಸಿಗೆ ಬೇಸರವಾದಾಗ ಇಸ್ಪೀಟ್ ಆಡಬಹುದು, ಸಿನಿಮಾ ನೋಡಬಹುದು. ಸಂಗೀತವನ್ನು ಕೇಳಬಹುದು; ಇಂಥ ಹಲವು ಕ್ರೀಡೆಗಳಲ್ಲಿ ಮನವನ್ನು ಮುಳುಗಿಸಿ ಬೇಸರವನ್ನು ತೇಲಿಸಬಹುದು. ಆದರೆ ಹೋದಕಡೆಯಲೆಲ್ಲಾ ಇಂಥ ಅನುಕೂಲ್ಯಗಳು ದೊರೆಯುವ ಭರವಸೆ ಇಲ್ಲ. ನಮ್ಮ ಊರನ್ನು ಬಿಟ್ಟು ಯಾವುದೋ ಹಳ್ಳಿಗೆ ಹೋದರೆ ಇಸ್ಪೀಟಿನ ಗೆಳೆಯರು, ಮನದನ್ನರು, ಅಲ್ಲಿ ದೊರೆಯುತ್ತಾರೆಯೇ? ಸಿನಿಮಾ ಮಂದಿರಗಳು ಅಲ್ಲಿ ಇರುತ್ತವೆಯೇ? ಸಂಗೀತಕಛೇರಿ ಸಿಕ್ಕುತ್ತದೆಯೇ? ಪರಾವಲಂಬಿಯಾದ ಸುಖ ನಮಗೆ ಎಲ್ಲಾ ಕಾಲದಲ್ಲೂ ಒಂದೇ ಸಮನಾಗಿ ದೊರೆಯುವುದು ಅಸಂಭವ. ಆದ್ದರಿಂದ ತನ್ನಲ್ಲಿಯೇ ತಾನು ಸುಖಪಡುವ ಸಾಮಗ್ರಿಯನ್ನು ಹೊಂದಿರುವುದು ಉತ್ತಮವಾದುದು. ಸಂಗೀತವನ್ನೋ ವಾದ್ಯವಾದನವನ್ನೋ, ಹವ್ಯಾಸವಾಗಿ ಕಲಿತವನು ಎಲ್ಲಿಗೆ ಹೋದರೂ, ಯಾವಾಗ ಬೇಕಾದರೂ, ಒಂಟಿಯಾಗಿದ್ದರೂ, ಗುಂಪಿನಲ್ಲಿದ್ದರೂ, ನಿಮಿಷಮಾತ್ರದಲ್ಲಿ ತನ್ನ ಕಲೆಯ ಚಿಪ್ಪಿನ ಕೆಳಗೆ ಸುಖಪಡುವ ಜೀವಿಯಾಗಬಹುದು. ಜೇಬಿನಲ್ಲಿ ತನಗೆ ಪ್ರಿಯವಾದ ಗ್ರಂಥವೊಂದು ಇದ್ದರೆ ನೂರು ಜನ ಗೆಳೆಯರು ಜೊತೆಯಲ್ಲಿ ಇದ್ದಂತೆ. ಆದ್ದರಿಂದ ವ್ಯಾಸಂಗದ ಹವ್ಯಾಸವು ಮನುಷ್ಯನನ್ನು ಆತ್ಮಾರಾಮನನ್ನಾಗಿ ಮಾಡಬಲ್ಲುದು. ಇದಕ್ಕಿಂತಲೂ ಮಿಗಿಲಾದ ಸುಖ ಬೇರೆ ಏನುಂಟು?

ವ್ಯಾಸಂಗದ ಹವ್ಯಾಸದಿಂದ ಆಗುವ ಪರಮಪ್ರಯೋಜನವನ್ನು ಕುರಿತು ಇದುವರೆಗೆ ನೋಡಿದ್ದಾಯಿತು. ಇದರಿಂದ ಸಂಭವಿಸಬಹುದಾದ ಕೆಲವು ಅನರ್ಥಗಳನ್ನು ಇನ್ನು ವಿಚಾರಿಸಬಹುದು. "ಓದಿ ಓದಿ ಮರುಳಾದ ಕೂಚಿಭಟ್ಟ" ಎಂಬುದೊಂದು ಗಾದೆ. ಈ ಕೂಚಿಭಟ್ಟನು ಯಾರೋ ಸರಿಯಾಗಿ ತಿಳಿಯದು. ಕೂಚಿಭಟ್ಟಾರಕನೆಂಬ ಪ್ರಾಚೀನ ಜೈನಾಚಾರ್ಯನೊಬ್ಬನಿದ್ದನು. ಅವನು ಪರಮಪಂಡಿತನೆಂಬುದರಲ್ಲಿ ಸಂದೇಹವಿಲ್ಲ. ಅವನಿಗೆ ಆಗದವರೋ ಭಿನ್ನಮತಗಳವರೋ ಅವನನ್ನು

ಪರಿಹಾಸಮಾಡುವ ಸಲುವಾಗಿ ಈ ಗಾದೆಯನ್ನು ಸೃಷ್ಟಿಸಿರಬಹುದು. ಅಶೋಕ ಚಕ್ರವರ್ತಿ ಅಕ್ಕರೆಯಿಂದ ತನ್ನನ್ನು "ದೇವನಾಂ ಪ್ರಿಯಃ" ಎಂದು ಕರೆದು ಕೊಂಡಿದ್ದರೆ, ಅದಕ್ಕೆ ಕುಹಕಿಗಳಾದವರು ಮೂರ್ಖ ಎಂದು ಅರ್ಥ ಕಲ್ಪಿಸಿದರು. ಹೀಗೆ ಕೂಚಿಭಟ್ಟಾರಕನಿಗೂ ಆಗಿದ್ದಿರಬಹುದು; ಇರಲಿ, ಗಾದೆಯು ಕೂಚಿಭಟ್ಟ ಮರುಳಾದನೆಂದೂ ಅದಕ್ಕೆ ಕಾರಣ ಓದುವ ಹವ್ಯಾಸವೆಂದೂ ಸ್ಪಷ್ಟವಾಗಿದೆ. ವ್ಯಾಸಂಗದ ಹವ್ಯಾಸ ಅತಿಯಾದರೆ ಅದು ಹುಚ್ಚಾಗಿ ತಿರುಗಿಬಿಡಬಹುದು. ಆದ್ದರಿಂದ ಈ ವಿಷಯದಲ್ಲಿ ಮಿತಿಯನ್ನು ಮೀರದೆ ಎಚ್ಚರಿಕೆಯಿಂದಿರಬೇಕು. ಓದುವ ಹವ್ಯಾಸ ನಮ್ಮ ಮನೋಬುದ್ಧಿಬಲಗಳನ್ನು ಆಕ್ರಮಿಸಿಕೊಂಡು ನಮ್ಮನ್ನು ದಾಸ್ಯಕ್ಕೆ ತುಳಿದುಬಿಡಬಹುದು. ಹೀಗಾಗಲು ಬಿಡದೆ ಓದುಗಾರಿಕೆಯ ಮೇಲೆ ನಮ್ಮ ಯಾಜಮಾನ್ಯ ಸಂತತವಾಗಿ ಸ್ಥಾಪಿತವಾಗಿರುವಂತೆ ನೋಡಿಕೊಳ್ಳಬೇಕು. ವ್ಯಾಸಂಗದ ಹವ್ಯಾಸ ಹಲವುವೇಳೆ ಸ್ವತಂತ್ರ ಆಲೋಚನಾಶಕ್ತಿಯನ್ನು ಕುಗ್ಗಿಸಿಬಿಡಬಹುದು. ಹೊಸ ಸಮಸ್ಯೆ ತಲೆದೋರಿದಾಗ ಸ್ವಂತವಾಗಿ ಆಲೋಚನೆ ಮಾಡುವುದನ್ನು ಬಿಟ್ಟು ಇನ್ನೊಬ್ಬನು ಏನು ಹೇಳಿದ್ದಾನೆ ಎಂದು ತಡಕಾಡುವುದರಲ್ಲೇ ವ್ಯಕ್ತಿ ತೊಳಲಬಹುದು. ಇದರಿಂದ ಅವನು ತನ್ನ ಬುದ್ಧಿಬಲವನ್ನು ನೀಗಿಕೊಂಡಂತಾಗುತ್ತದೆ. ಅವಶ್ಯಕವಾದುದೆಷ್ಟೊ ಅಷ್ಟನ್ನು ಮಾತ್ರ ಓದು, ಅಧಿಕವಾಗಿ ಚಿಂತನೆ ಮಾಡು ಎಂದು ಕೆಲವರು ಹೇಳುತ್ತಾರೆ. ಇದು ಉಚಿತವಾದ ಉಪದೇಶವೇ ಆದರೂ, ವ್ಯಾಸಂಗದ ಹವ್ಯಾಸವುಳ್ಳವರಿಗೆ ಇದು ಅಷ್ಟಾಗಿ ರುಚಿಸಲಾರದು. ಬೇರೆಯವರ ಆಲೋಚನೆಗಳನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತಿರುವಾಗಲೇ ಅವುಗಳ ವಿಷಯದಲ್ಲಿ ಕೊಂಚ ಸಂದೇಹವನ್ನು ಹೊಂದಿರುವುದೂ, ಸರಿಯೋ ತಪ್ಪೋ, ಎಂದು ವಿಮರ್ಶೆ ಮಾಡುತ್ತ ಹೊರಡುವುದೂ ಇದ್ದರೆ ಸಾಕು, ನಮ್ಮ ಬುದ್ಧಿಯನ್ನು ಇನ್ನೊಬ್ಬನಿಗೆ ಮಾರಿಬಿಡುವ ಪ್ರಸಂಗ ಒದಗಲಾರದು. ಇನ್ನೊಬ್ಬನ ಆಲೋಚನೆಯ ಸಾಣೆಕಲ್ಲಿನ ಮೇಲೆ ನಮ್ಮ ಬುದ್ಧಿಯನ್ನು ಅತ್ತಿತ್ತ ಓಡಾಡಿಸಿದರೆ ಅದು ಹರಿತವಾಗುತ್ತದೆ. ತೀಕ್ಷ್ಣವಾಗಿ ತೊಳಗುತ್ತದೆ. ಆದ್ದರಿಂದ ವ್ಯಾಸಂಗದ ಹವ್ಯಾಸವುಳ್ಳವರು ಯಾವಾಗಲೂ ತಮ್ಮ ಬುದ್ಧಿಯನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿರಬೇಕು. ಹೀಗಿದ್ದರೆ ಸ್ವಂತ ಆಲೋಚನಾಶಕ್ತಿ ಎಂದಿಗೂ ಬತ್ತಿಹೋಗಲಾರದು. ವ್ಯಾಸಂಗದ ಹವ್ಯಾಸದಿಂದ ಬುದ್ಧಿಗೆ ಒದಗಬಹುದಾದ ಸೋಮಾರಿತನದ ಈ ಅನರ್ಥವನ್ನು ಪರಿಹರಿಸಿಕೊಳ್ಳುವ ವಿವೇಕ ಇರಬೇಕು ಮನುಷ್ಯನಿಗೆ.

ಸುಲಭವಾಗಿ ಕಾಲಕ್ಷೇಪಮಾಡುವುದಕ್ಕೆ ವ್ಯಾಸಂಗದ ಹವ್ಯಾಸ ಉತ್ತಮವಾದ ಮಾರ್ಗ. ಕೆಲವರಿಗೆ ಕಾಲಕಳೆಯುವುದೇ ಅತಿ ಕಷ್ಟವಾಗಿ ತೋರುತ್ತದೆ.

ಚಟುವಟಿಕೆಯಿಂದ ಕೆಲಸಮಾಡುವ ಸ್ವಭಾವವುಳ್ಳವನು ತನ್ನ ನೌಕರಿಯಿಂದ ನಿವೃತ್ತನಾಗಿಬಿಟ್ಟರೆ "ಏನಪ್ಪ ಗತಿ, ಕಾಲವನ್ನು ಹೇಗೆ ನೂಕಲಿ" ಎಂದು ದಿಗಿಲು ಪಡುತ್ತಾನೆ. ಕೆಲಸದಿಂದ ವಿಶ್ರಾಂತಿಗೊಂಡ ಸಬ್‌ಜಡ್ಜಿಗಳೊಬ್ಬರು ಬೀಡಿ ಸಿಗರೇಟ್, ಸೋಡಾವಾಟರ್ ಬೆಂಕೀಪೊಟ್ಟಣ ಮುಂತಾದುವನ್ನು ಮಾರುವ ಚಿಲ್ಲರೆ ಅಂಗಡಿಯನ್ನು ಇಟ್ಟುಕೊಂಡಿದ್ದರು. ಹಣಸಂಪಾದನೆ ಅವರ ಉದ್ದೇಶವಾಗಿರಲಿಲ್ಲ. ಅಧಿಕವಾದ ಆಸ್ತಿ ಅವರಿಗೆ ಇತ್ತು; ವಿಶ್ರಾಂತಿವೇತನವೂ ಕೈತುಂಬ ಬರುತ್ತಿತ್ತು, ಯಾರಾದರೂ ರಿಟೈರ್ ಆದ ನೌಕರರು ಅವರ ಅಂಗಡಿಗ ಹೋದರೆ ನೀವೂ ನನ್ನ ಹಾಗೆಯೇ ಮಾಡಿ ಸುಖವಾಗಿ ಕಾಲಕಳೆಯಬಹುದು ಎಂದು ಉಪದೇಶಮಾಡು ತ್ತಿದ್ದರು. ಬೆಳಗಿನಿಂದ ಸಂಜೆಯವರೆಗೆ ಅಂಗಡಿಯಲ್ಲಿ ಕುಳಿತು ನೊಣ ಹೊಡೆಯು ತ್ತಿದ್ದ ಆ ಪ್ರಾಣಿಯನ್ನು ನೆನೆದುಕೊಂಡಾಗಲೆಲ್ಲ ನನಗೆ ದುಃಖವಾಗುತ್ತದೆ. ಓದುವ ಹವ್ಯಾಸವನ್ನಾದರೂ ಅವರು ಇಟ್ಟುಕೊಂಡಿದ್ದರೆ ಅವರಿಗೆ ಈ ಪಾಡು ಬರುತ್ತಿರಲಿಲ್ಲ. ರಾಮಾಯಣವನ್ನೋ, ಭಾರತವನ್ನೋ ಓದುತ್ತಿದ್ದರೆ, ಕಾಲಕ್ಷೇಪದ ಜೊತೆಗೆ ಮನಶ್ಯಾಂತಿಯನ್ನೂ ಸಂಪಾದಿಸಬಹುದಿತ್ತು. ಮೊದಲಿಂದಲೂ ಇಲ್ಲದೆ ರಿಟೈರ್ ಆದಮೇಲೆ ವ್ಯಾಸಂಗದ ಹವ್ಯಾಸವನ್ನು ಹಚ್ಚಿಸಿಕೊಳ್ಳುತ್ತೇನೆಂದು ಹೇಳುವವರ ಮಾತಿನಲ್ಲಿ ಹುರುಳಿಲ್ಲ. ಏಕೆಂದರೆ ಅವರಿಗೆ ಅತ್ತಕಡೆ ಒಲವೇ ಇರುವುದಿಲ್ಲ. ಮೊದಲಿಂದ ಬಂದದ್ದು ನಡುವೆ ನಿಲ್ಲದೆ ನಡೆದುಬರುತ್ತದೆ. ನಡುವೆ ಬಂದದ್ದು ಯಾವಾಗಬೇಕಾದರೂ ನಿಂತುಹೋಗಬಹುದು. ಆದ್ದರಿಂದ ಚಿಕ್ಕಂದಿನಿಂದಲೂ ವ್ಯಾಸಂಗದ ಹವ್ಯಾಸವನ್ನು ಇಟ್ಟುಕೊಂಡಿದ್ದರೆ ಜೀವನದ ಕೊನೆಯ ಭಾಗದಲ್ಲಿ ಅದು ನಮ್ಮನ್ನು ಕಾಪಾಡುತ್ತದೆ. ಆಗ ಬೇಕಾದ ಕಾಲಕ್ಷೇಪಕ್ಕೆ ಅದು ಸಹಕಾರಿ: ಮನಸ್ಸಿನ ಚಾಂಚಲ್ಯವನ್ನು ಹೋಗಲಾಡಿಸಿ ಅದಕ್ಕೆ ಸ್ಥಿರತೆಯನ್ನೂ, ಸಮಾಧಾನ ವನ್ನೂ ಕೊಡುತ್ತದೆ.

ಗ್ರಂಥರಚನೆ ಮಾಡುವ ಉದ್ದೇಶದಿಂದ ವ್ಯಾಸಂಗದಲ್ಲಿ ತೊಡಗುವವರು ತೊಡಗಲಿ; ಕೀರ್ತಿಯನ್ನೋ, ಹಣವನ್ನೋ ಗಳಿಸಬೇಕೆಂದು ಓದುವವರು ಓದಲಿ, ಇನ್ನೊಬ್ಬರಿಗೆ ಉಪದೇಶಮಾಡುವುದಕ್ಕಾಗಿ ಕಲಿಯುವವರು ಕಲಿಯಲಿ. ಶಕ್ತಿ ಸ್ವರೂಪವಾದ ಜ್ಞಾನದಿಂದ ಬಲಿಷ್ಠರಾಗಬೇಕೆಂದು ಬಯಸುವವರು ಅದನ್ನು ಆರ್ಜಿಸಲಿ. ನನಗೆ ಇದು ಯಾವುದರಲ್ಲೂ ಹೆಚ್ಚಾದ ಒಲವಿಲ್ಲ. "ಇಂತೆಸಗಬೇಕೆಂಬ ಹಠದ ಬಂಧನವಿಲ್ಲ". ನನ್ನ ವ್ಯಾಸಂಗದ ಹವ್ಯಾಸವು ಒಂದು ವಿಹಾರ. ಕೈಗೆ ಸಿಕ್ಕಿದ ಪುಸ್ತಕವನ್ನು ತತ್ಕಾಲದ ಕುತೂಹಲದಿಂದ ಪ್ರೇರಿತನಾಗಿ ಓದುತ್ತ, ಓದುವಾಗ ಅದರ ಸವಿಯೊಳಗೆ ಮುಳುಗುತ್ತ, ಆಮೇಲೆ ಮರೆತುಬಿಡುವುದೆಂದರೆ ನನಗೆ ಬಲು

ಪ್ರಿಯವಾದದ್ದು. ಓದಿದ್ದನ್ನೆಲ್ಲ ಮರೆಯದ ಜಿಗುಟಾದ ಸ್ಮರಣಶಕ್ತಿ ನನಗಿಲ್ಲ. ಅದು ಅವಶ್ಯಕವೂ ಇಲ್ಲ. ಅದರಿಂದ ಮನೋಬುದ್ಧಿಗಳಿಗೆ ಭಾರವಾಗಿ ಬಳಲಿಕೆಯುಂಟಾಗುತ್ತದೆ ಓದಿದ ಹಲವು ವಿಷಯಗಳಲ್ಲಿ ಕೆಲವಾದರೂ ನನ್ನ ಸುಪ್ತಜೀವನದೊಳಹೊಕ್ಕು ಅಲ್ಲಿ ನಿಕ್ಷಿಪ್ತವಾಗಿದ್ದು ಅನಿರೀಕ್ಷಿತವಾಗಿ ನೀರ್ಗುಳ್ಳೆಯಂತೆ ಮೇಲಕ್ಕೆ ತೇಲಿ ಬರುವುದಷ್ಟೇ ನನಗೆ ಸಾಕು. ಇಷ್ಟುಮಟ್ಟಿನ ಸ್ಮರಣದಿಂದಲೇ ಮಿಗಿಲಾದ ಹರ್ಷ ಮೂಡುತ್ತದೆ. ಹಚ್ಚನೆಯ ಹುಲ್ಲುಗಾವಲ ಹರವಿನಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತ ಸೊಂಪಾಗಿ ಕಾಣುವೆಡೆಗಳಲ್ಲಿ ತಂಗಿ ಹಿಡಿಹುಲ್ಲನ್ನು ಕಬಳಿಸುವ ಹಸುವಿನಂತೆ ಇದೆ ನನ್ನ ವ್ಯಾಸಂಗದ ಹವ್ಯಾಸ. ನನ್ನ ಕೊಠಡಿಯ ಆರಾಮ ಕುರ್ಚಿಯ ಮೇಲೆ ಮಲಗಿ ಕೈಗೆ ಎಟುಕಿದ ಪುಸ್ತಕವನ್ನು ತೆರೆದು ಓದುತ್ತ ಓದುತ್ತ ಇಹದ ತಾಪತ್ರಯ ದೂರ ಸರಿದಂತೆಲ್ಲ, ತನ್ಮಯತೆಯು ಮಡುವಿನಲ್ಲಿ ಮೆಲ್ಲಮೆಲ್ಲಗೆ ಮುಳುಗಿಬಿಡುತ್ತೇನೆ. ಪಕ್ಕದ ಮೇಜಿನ ಮೇಲೆ ಇರುವ ಗಂಧದ ಕಡ್ಡಿಗಳು ಉಗುಳುವ ಹೊಗೆ ಸುರುಳಿ ಸುರುಳಿಯಾಗಿ ಅಂಕುಡೊಂಕಾಗಿ ಮೇಲೇರಿ ಹರಡಿ ಕೊಠಡಿಯ ಪರಿಮಿತಾಕಾಶದಲ್ಲಿ ಕರಗಿಹೋಗುವಂತೆ ನಾನೂ ಬಾರಿಬಾರಿಗೆ ಕರಗಿಬಿಡಬೇಕೆಂಬ ಹಂಬಲ ನನಗೆ ಹಿರಿದಾಗಿದೆ.

ಡಿ. ಎಲ್. ನರಸಿಂಹಾಚಾರ್

ಜೀವದ ವಿವಿಧ ವಿನ್ಯಾಸ

ಮೆಕಾನೋ ಆಟದ ಪೆಟ್ಟಿಗೆಯೊಂದನ್ನೋ ಜಪಾನೀ ಆಟದ ಮರದ ಇಟ್ಟಿಗೆಗಳ ಡಬ್ಬವೊಂದನ್ನೋ ಇಟ್ಟುಕೊಂಡು ಮಕ್ಕಳು ಮನೆ, ಸೇತುವೆ, ಗೋಡೆ, ಇತ್ಯಾದಿಗಳನ್ನು ಕಟ್ಟುವುದನ್ನು ನೀವು ನೋಡಿರಬಹುದು. ಪ್ರಪಂಚದಲ್ಲಿ ಎಲ್ಲ ವಸ್ತುಗಳೂ ಹಾಗೆಯೇ ಒಂದೇ ಸಾಮಗ್ರಿಯಿಂದ ಕಟ್ಟಲ್ಪಟ್ಟಿರುವುವು. ಆದರೆ ಅವುಗಳ ವಿನ್ಯಾಸದಲ್ಲಿ, ರಚನೆಯಲ್ಲಿ ಬದಲಾವಣೆಯಿರುವುದರಿಂದ ಒಂದೊಂದು ವಸ್ತುವೂ ಒಂದೊಂದು ರೀತಿಯಾಗುವುದು. ಇದ್ದಿಲು, ಸಕ್ಕರೆ, ವಜ್ರ, ರೊಟ್ಟಿ, ಬಿಸ್ಕತ್ತು ಇವುಗಳ ಮೂಲ ವಸ್ತುವಿನಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಎಲ್ಲದರಲ್ಲಿಯೂ ಇಂಗಾಲವಿದೆ. ಇಂಗಾಲ, ಆಮ್ಲಜನಕ, ಜಲಜನಕ ಇವುಗಳ ನಲವತ್ತೈದು ಅಣುಗಳನ್ನು ಅನೇಕವಿಧಗಳಲ್ಲಿ ಜೋಡಿಸಬಹುದು. ಒಂದು ಗೊತ್ತಾದ ಜೋಡಣೆಯಿಂದಲೇ ಸಕ್ಕರೆಯು ಹಳಕಾಗುವುದು.

ವಸ್ತುಗಳ ವಿನ್ಯಾಸದ ಪ್ರಶ್ನೆ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳಲ್ಲಿ ಅಷ್ಟೇನೂ ತೊಡಕಾದ ಪ್ರಶ್ನೆಯಾಗಿಲ್ಲ. ರಸಾಯನಶಾಸ್ತ್ರಜ್ಞರಂತೂ ಈ ಪ್ರಶ್ನೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಅಣುಶಿಲ್ಪ ಪರಿಚಯವನ್ನು ಚೆನ್ನಾಗಿ ತಿಳಿದಿದ್ದಾರೆ. ಈ ಪರಿಜ್ಞಾನದಿಂದ ಅವರು ಅಣುಗಳನ್ನು ಒಂದು ಗೊತ್ತಾದ ವಿನ್ಯಾಸದಲ್ಲಿ ಜೋಡಿಸಬಲ್ಲವರಾಗಿಯೂ, ಹಾಗೆ ಜೋಡಣೆಯಿಂದಾದ ವಸ್ತುವಿನ ಸಕಲ ಗುಣಗಳನ್ನು ಮುಂದಾಗಿಯೇ ಸೂಚಿಸಬಲ್ಲವರಾಗಿಯೂ ಇದ್ದಾರೆ. ನಿರ್ಜೀವ ವಸ್ತುಗಳ ರಚನೆಯೊಂದನ್ನೇ ಅಲ್ಲದೆ ಜೀವಿಗಳ ಸೂಕ್ಷ್ಮರಚನೆ ಎಂತು, ಅವು ಯಾವ ವಸ್ತುವಿನಿಂದ ರಚಿಸಲ್ಪಟ್ಟಿವೆ, ಅವುಗಳ ವಿನ್ಯಾಸ ಹೇಗೆ, ವಿವಿಧತೆಯೇನು—ಈ ಪ್ರಶ್ನೆಗಳನ್ನೂ ಈಚೆಗೆ ಜೀವರಾಸಾಯನಿಕರು ಉತ್ತರಿಸಲು ಪ್ರಯತ್ನಿಸುತ್ತಿದ್ದಾರೆ.


ಪ್ರತಿಯೊಂದು ಜೀವಿಯೂ, ಮನೆಗಳು ಒಂದೊಂದು ಇಟ್ಟಿಗೆಯ ಜೋಡಣೆಯಿಂದಾದಂತೆ, ಒಂದು ಜೀವಾಣುವಿನಿಂದ ಪ್ರಾರಂಭವಾಗುತ್ತದೆ. ಒಂದು ಜೀವಾಣುವೇ ಅಭಿವೃದ್ಧಿಹೊಂದಿ ಅಂತ್ಯದಲ್ಲಿ ಒಂದು ಜೀವಿಯಾಗುವುದು. ಈ ಅಂತ್ಯದ ವಿನ್ಯಾಸವನ್ನು ದೃಷ್ಟಿಸಿಯೇ ಅದು ಯಾವ ಜೀವಿ ಎಂದು ನಾವು ಹೇಳುವುದು. ಅಂದರೆ ಜೀವಿಗಳ ಮೂಲವೆಲ್ಲವೂ ಒಂದೇ ಒಂದು ಜೀವಾಣು. ಹೇಗೆ ಈ ಒಂದೇ ಜೀವಾಣು ಅನೇಕ ಜೀವಾಣುಗಳಾಗಿ, ಆ ಜೀವಾಣುಗಳ ಒಂದು ಗೊತ್ತಾದ ಜೋಡಣೆಯಿಂದ ಒಂದು ನಿಷ್ಕೃಷ್ಟ ಜೀವಿಯಾಗಿ ಪರಿಣಮಿಸುವುದು? ಇದು ಈಗ ಜೀವಶಾಸ್ತ್ರಜ್ಞನ ಮುಂದಿರುವ ಪ್ರಶ್ನೆ.

ಎಲ್ಲರಿಗೂ ಗೊತ್ತಿರುವ ಕುಂಬಳ ಸಸಿಯ ಬೆಳವಣಿಗೆಯನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಸೂಕ್ಷ್ಮಗ್ರಾಹಿಯಲ್ಲೇ ಕಾಣುವ ಒಂದು ಜೀವಾಣುವಿನಿಂದ ಅದು ಪ್ರಾರಂಭವಾಗುತ್ತದೆ—ಎಲೆಯಿಲ್ಲ, ಮೂಲವಿಲ್ಲ, ಕಾಂಡವಿಲ್ಲ; ಕೇವಲ ಒಂದು ಜೀವಾಣು. ಬೀಜದಲ್ಲಿ ಈ ಒಂದು ಜೀವಾಣು ಸ್ವಲ್ಪ ವೃದ್ಧಿಯಾಗುತ್ತದೆ. ಬೀಜವನ್ನು ನೆಟ್ಟರೆ ಮೊಳಕೆ ಬರುತ್ತದೆ. ಮೊಳಕೆ ಬಂದು ಎಲೆಯೆರಡು ಹೊರಹೊರಟೊಡನೆಯೇ ಅದು ಕುಂಬಳ ಸಸಿ ಎಂದು ಕರೆಯುತ್ತೇವೆ. ಅದು ಆಲೂಗೆಡ್ಡೆಯ ಅಥವಾ ಬದನೆಕಾಯಿಯ ಗಿಡವಲ್ಲ ಎಂದು ಹೇಗೆ ಗೊತ್ತು? ಈ ಸಸಿಯ ಒಂದು ವಿಶೇಷ ವಿನ್ಯಾಸವೇ ಕಾರಣ. ಸಸಿಯ ಎತ್ತರ, ಎಲೆಯ ಆಕಾರ, ರಚನೆ ಇವುಗಳು ಇನ್ನಿತರ ಯಾವ ಸಸಿಯಲ್ಲಿಯೂ ಕಂಡುಬರುವುದಿಲ್ಲ.

ಜೀವವರ್ಗದಲ್ಲಿ ಎಲ್ಲಾ ಜೀವಿಗಳನ್ನೂ ಈ ಒಂದು ವಿಶೇಷವಾದ ಬಾಹ್ಯರೂಪ ಅಥವಾ ರಚನಾವಿನ್ಯಾಸದಿಂದಲೇ ಬೇರ್ಪಡಿಸಿ ಅವುಗಳಿಗೆ ವಿವಿಧ ನಾಮಕರಣಗಳನ್ನು ಜೀವಶಾಸ್ತ್ರಜ್ಞರು ಮಾಡಿರುವರು. ಇದು ಅತಿಪರಿಚಯ ವಿಷಯವಾದಾಗ್ಯೂ ಹೇಗೆ ಕೇವಲ ಒಂದೇ ಜೀವಾಣುವಿನಿಂದ ಪ್ರಾರಂಭವಾಗಿ ಅಂತ್ಯದಲ್ಲಿ ವಿಶಿಷ್ಟ ವಿನ್ಯಾಸ ಹೊಂದಿದ ಜೀವಿಯಾಗುತ್ತದೆ ಎನ್ನುವ ವಿಷಯ ನಮ್ಮ ತಿಳಿವಳಿಕೆಗೆ ಬಂದಿಲ್ಲ. ಇದು ಜೀವಶಾಸ್ತ್ರದಲ್ಲಿ ಸದ್ಯಕ್ಕೆ ಬಗೆಹರಿಯದ ಪ್ರಶ್ನೆಯಾಗಿದೆ.

ಈ ತೊಡಕನ್ನು ಸುಲಭವಾಗಿ ಬಿಡಿಸಬೇಕಾದರೆ ಎರಡು ವಿಶಿಷ್ಟ ವಿನ್ಯಾಸಗಳನ್ನು ತೆಗೆದುಕೊಂಡು ತುಲನೆಮಾಡಿ ಎರಡೂ ಯಾವಯಾವ ವಿಧದಲ್ಲಿ ವ್ಯತ್ಯಾಸ ಹೊಂದಿದೆ ಎಂದು ತಿಳಿದುಕೊಳ್ಳಬೇಕು. ಉದಾಹರಣೆಗೆ ಕುಂಬಳಕಾಯಿ, ಸೌತೆಯಕಾಯಿಗಳನ್ನು ತೆಗೆದುಕೊಳ್ಳೋಣ. ಕುಂಬಳಕಾಯಿ ದುಂಡಗೆ ದಪ್ಪವಾಗಿ ಬೆಳೆಯುವುದು; ಸೌತೆಯಕಾಯಿ ಉದ್ದುದ್ದವಾಗಿ ತೆಳ್ಳಗೆ ಬೆಳೆಯುವುದು. ಎರಡೂ ಲಕ್ಷಾಂತರ ಸೂಕ್ಷ್ಮ ಜೀವಾಣುಗಳ ಜೋಡಣೆಯಿಂದಲೇ ಆಗಿರುವುದು. ಆ ಜೀವಾಣುಗಳು ಒಂದೊಂದೂ ಭಾಗವಾಗಿ ವೃದ್ಧಿಹೊಂದುವುದರಿಂದಲೇ—ಎಂದರೆ ಒಂದು ಜೀವಾಣು ಎರಡಾಗುವುದು, ಎರಡು ನಾಲ್ಕು, ನಾಲ್ಕು ಎಂಟು, ಎಂಟು ಹದಿನಾರು ಈರೀತಿ—ಎರಡರ ಗಾತ್ರವೂ ಹೆಚ್ಚಾಗುವುದು. ಆದರೆ ಕುಂಬಳದಲ್ಲಿ ಈ ಜೀವಾಣು ಭಾಜನೆ ಎಲ್ಲ ಕಡೆಗಳಲ್ಲಿಯೂ ಸಮನಾಗಿದ್ದು ಸೌತೆಯಲ್ಲಿ ನೀಳ ಅಂಶದಲ್ಲಿ ತೀವ್ರವಾಗಿಯೂ ಅಡ್ಡದಲ್ಲಿ ಕಡಮೆಯಾಗಿಯೂ ಇರುವುದರಿಂದ ಎರಡರ ಅಂತ್ಯರೂಪವು ಹೆಚ್ಚುಕಡಮೆಯಾಗುವುದು. ಎಂದರೆ ಕುಂಬಳ ಮತ್ತು ಸೌತೆಯಕಾಯಿಗಳ ರೂಪವ್ಯತ್ಯಾಸ ಅವುಗಳಲ್ಲಿಯ ಜೀವಾಣುಗಳು ಅಭಿವೃದ್ಧಿಹೊಂದುವ ಮಾರ್ಗದ ಮೇಲೆ ಅವಲಂಬಿಸಿದೆ ಎಂದು ತಿಳಿದಂತಾಯಿತು. ಇನ್ನು ಈ ಮಾರ್ಗದ ನಿಷ್ಕರ್ಷೆ ಹೇಗೆ ನಡೆಯುತ್ತದೆ

ಮತ್ತು ಇದರ ನಿರ್ದೇಶಕ್ಕೆ ಕಾರಣ ಯಾವುದು ಎಂದು ಕಂಡುಹಿಡಿಯುವುದು ಎರಡನೆಯ ಕೆಲಸ. ಈಗ ಪ್ರಯೋಗಶಾಲೆಯಲ್ಲಿ ಗಾಜಿನ ಬುಡ್ಡಿಗಳಲ್ಲಿ ಜೀವಾಣುಗಳಿಗೆ ವಿಶೇಷ ರಸಾಯನಗಳನ್ನುಣಿಸಿ ಅವುಗಳನ್ನು ಬೆಳಸುವುದು ಸಾಧ್ಯವಾಗಿದೆ. ಆದರೆ ಹಾಗೆ ಬೆಳಸಿದ ಜೀವಾಣುಗಳು ಒಂದು ಗೊತ್ತುಗುರಿಯಿಲ್ಲದೆ ನಿರಾಕಾರವಾದ




ವಿನ್ಯಾಸ ಭಿನ್ನತೆ - ಕುಂಬಳ ಮತ್ತು ಸೌತೆಕಾಯಿಗಳಲ್ಲಿ.
(ಬಾಣಗಳು ಜೀವಾಣುಗಳ ವೃದ್ಧಿಯೊಂದುವಿಕೆಯ ಮಾರ್ಗವನ್ನು ತೋರಿಸುತ್ತವೆ.)

ಜೀವಾಣುಗುಂಪುಗಳಾಗಿ ವೃದ್ಧಿಯಾಗುತ್ತವೆ. ನಿರ್ದಿಷ್ಟ ಅಂತ್ಯವೇನೂ ಇಲ್ಲ—ಎಲೆಗಳಾಗಲೀ, ಬೇರಾಗಲೀ, ಮೊಗ್ಗಾಗಲೀ ಏನೂ ಆಗುವುದಿಲ್ಲ. ಜೀವವಿದೆ ಆದರೆ ಸಂಘಟನೆಯಿಲ್ಲ, ವಿನ್ಯಾಸವಿಲ್ಲ, ರೂಪವಿಲ್ಲ ಈ ನಿರಾಕಾರದ ಜೀವಾಣುಗಳ ಮುದ್ದೆಯ ಮೇಲೆ ಯಾವುದಾದರೂ ಗಿಡದ ಮೊಗ್ಗು ತುಂಡೊಂದನ್ನು ತಂದು ಅಂಟಿಸಿದ್ದಾದರೆ, ಆಗ ಈ ರೂಪರಹಿತವಾದ ಮುದ್ದೆಯ ಜೀವಾಣುಗಳು ಒಂದು ವಿನ್ಯಾಸದಲ್ಲಿ ಸಂಘಟಿತವಾಗಲು ಆರಂಭಿಸುವುವು. ಈ ವಿನ್ಯಾಸಸಂಘಟನೆ ಮೊಗ್ಗಿನ ಮಾರ್ಗವಾಗಿಯೇ ಆರಂಭವಾಗುವುದು. ಈ ಮೊಗ್ಗಿನಿಂದ ಯಾವುದೋ ಒಂದು ನಿಯೋಜಕ ರಸ ಈ ಜೀವಾಣು ಮುದ್ದೆಯಲ್ಲಿ ಹರಡಿ ಅವುಗಳ ಜೋಡಣೆಯನ್ನು ಒಂದು ನಿರ್ದಿಷ್ಟ ಮಾರ್ಗಕ್ಕೆ ತರುವುದು. ಈ ವಿನ್ಯಾಸ ರಸಾಯನ ಹರಡುವ ಮಾರ್ಗವನ್ನೇ ಅನುಸರಿಸುವುದು ಎಂದು ನಾವು ಊಹಿಸಬಹುದಾಗಿದೆ. ಎಂದರೆ ಒಂದು ವಿನ್ಯಾಸ ರಚನೆಯಾಗಬೇಕಾದಲ್ಲಿ ವಿಶೇಷ ರಸವೊಂದು ಒಂದು ಕಡೆಯಿಂದ ಅದು ಇಲ್ಲದ ಇನ್ನೊಂದು ಕಡೆಗೆ ಹರಡಬೇಕು ಎಂಬ ಅಂಶ ಸ್ಥಿರಪಟ್ಟಂತಾಯಿತು.

ಈ ವಿವರಣೆ ಸಸಿಯ ಎಲ್ಲಾ ರೂಪವಿನ್ಯಾಸಗಳಿಗೂ ಸರಿಹೊಂದುತ್ತದೆಯೇ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಎಲೆಗಳ ಆಕಾರ, ಹೂಗಳ ರೂಪ, ಸಸಿಯ ಪೂರ್ಣರಚನೆ—ಇವೆಲ್ಲವೂ ರಸಗಳ ಪ್ರಸಾರ ಮತ್ತು ಹಂಚಿಕೆಯನ್ನೇ ಅನುಸರಿಸಿವೆ ಎಂದು ನಂಬಲು ಆಧಾರವೇನೋ ಹೇರಳವಾಗಿದೆ.

ಸಕ್ಕರೆಯ ಹಳುಕಿನಲ್ಲಿಯ ಅಣುಜೋಡಣೆ ನೆನ್ನೆ, ಇವತ್ತು ಮತ್ತು ನಾಳೆ ಯಾವಾಗಲೂ ಒಂದೇ ನಿರ್ದಿಷ್ಟವಾದದ್ದು. ಅದು ಒಂದು ಚಿತ್ರದಂತೆ, ಅದರ ವಿನ್ಯಾಸವು ಸ್ವತಃ ಬದಲಾಯಿಸದೆ ಸ್ಥಿರವಾಗಿರುತ್ತದೆ. ಅದು ಒಂದು ಅಸ್ಖಲಿತ ವಿನ್ಯಾಸ. ಜೀವಿಗಳಲ್ಲಿರುವುದು ಸ್ಖಲಿತವಿನ್ಯಾಸ. ಅದು ಚಿತ್ರದಂತಲ್ಲ, ಹಾಡಿನಂತೆ. ಒಂದು ಹಾಡಿನ ತಾಳಲಯಬದ್ಧವಾದ ಸ್ವರಗಳ ಆರೋಹಣ ಅವರೋಹಣಗಳಿದ್ದಂತೆ ಆದಿ, ವೃದ್ಧಿ, ಅಂತ್ಯ ಇವು ಮೂರು ಈ ವಿನ್ಯಾಸದಲ್ಲಿ ಕಾಣಬರುತ್ತವೆ. ಇದು ಅಡ್ಡಾದಿಡ್ಡಿಯಾಗಿ ಬದಲಾಯಿಸುವುದಿಲ್ಲ. ಬದಲಾವಣೆ ಯಾವಾಗಲೂ ಕ್ರಮಬದ್ಧವಾಗಿಯೇ ಇರುತ್ತದೆ. ಈಗ ಹಿಂದೆ ತೆಗೆದುಕೊಂಡ ಕುಂಬಳದ ಉದಾಹರಣೆಯನ್ನು ಜ್ಞಾಪಿಸಿಕೊಳ್ಳೋಣ. ಹುಟ್ಟಿದ ಸಸಿಯನ್ನು ಕುಂಬಳಸಸಿ ಎಂದು ಗುರುತಿಸಬಹುದು. ಒಂದು ತಿಂಗಳ ತರುವಾಯ ಅದೇ ಸಸಿ ಅನೇಕ ವ್ಯತ್ಯಾಸಗಳನ್ನು ಹೊಂದಿರುತ್ತದೆ. ಕಾಂಡದ ಆಕಾರವೇ ಬೇರೆ, ಎಲೆಗಳ ಆಕಾರ ಬೇರೆ, ಕುಡಿಗಳು ಹೊರಟಿರುತ್ತವೆ. ಆದರೂ ಅದು ಕುಂಬಳಬಳ್ಳಿಯೇ. ಕೆಲವೇ ವಾರಗಳಲ್ಲಿ ಎಲೆಮೊಗ್ಗುಗಳು ನಿಂತು ಹೂವುಮೊಗ್ಗುಗಳಾಗಿ, ಹೂವು ಕಾಯಾಗಿ ಮಾರ್ಪಾಡಾಗುವುದು. ಇನ್ನೂ ಕುಂಬಳಬಳ್ಳಿಯೇ ; ಎಂದರೆ ಕುಂಬಳ ಗಿಡವನ್ನು ನಾವು ವರ್ಣಿಸಬೇಕಾದರೆ ಈ ವಿನ್ಯಾಸ ಪರಂಪರೆಯೆಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಕುಂಬಳಬಳ್ಳಿ ಎಂದರೆ ಒಂದು ಅಸ್ಖಲಿತ ಅಥವಾ ಸ್ಥಿರವಿನ್ಯಾಸವುಳ್ಳ ವಸ್ತುವಲ್ಲ. ವಿನ್ಯಾಸಪರಂಪರೆಯೇ ಇರುವ ಒಂದು ವಸ್ತು ಎಂದರೆ ಜೀವವಸ್ತುಗಳಲ್ಲಿ ದೇಶಾನುವಿನ್ಯಾಸವೊಂದೇ ಅಲ್ಲ ಕಾಲಾನುವಿನ್ಯಾಸವೂ ಕಾಣಬರುತ್ತದೆ. ಕುಂಬಳ ಬೀಜವನ್ನು ನೆಟ್ಟಾಗಲೆಲ್ಲಾ ಅದು ಮೊಳೆತು ಚಿಗುರೆಲೆ, ಬಲಿತೆಲೆ, ಕುಡಿ, ಎಲೆಮೊಗ್ಗು, ಹೂಮೊಗ್ಗು, ಹೂವು, ಕಾಯಿ ಇವುಗಳ ಒಂದು ವಿನ್ಯಾಸಚಕ್ರ ನಡದೇ ನಡೆಯುತ್ತದೆ. ಇದೇ 'ಬಾಹ್ಯರೂಪಾವಿರ್ಭಾವ.' ಈ ಕಾಲಾನುವಿನ್ಯಾಸವು ಯಾವ ರೀತಿ ನಿರ್ದೇಶಿಸಲ್ಪಡುತ್ತದೆ ಮತ್ತು ಅದಕ್ಕೆ ಯಾವ ರಾಸಾಯನಿಕ ಕಾರಣಗಳಿವೆ ಎಂಬುವು ಜೀವಶಾಸ್ತ್ರದ ಗಹನಪ್ರಶ್ನೆಗಳಾಗಿವೆ. ದೇಶಾನುವಿನ್ಯಾಸದ ವಿಚಾರವಾಗಿ ನಾವು ಹಾಕಿಕೊಂಡ ಪ್ರಶ್ನೆಯನ್ನೇ ಇಲ್ಲಿ ನಾವು ಮತ್ತೆ ಹಾಕಬಹುದು, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳು ಈ ಪ್ರಶ್ನೆಗೆ ಉತ್ತರ ಹೇಳಲು ಸಹಾಯಕವಾಗುವುವೇ ಎಂದು.



ಒಂದೇ ಜೀವಾಣುವಿನ ವೃದ್ಧಿಯಿಂದಾದ ವಿವಿಧ ವಿನ್ಯಾಸ-ಕುಂಬಳಬಳ್ಳಿಯಲ್ಲಿ.

ಆಗಲೇ ಸಸ್ಯಶಾಸ್ತ್ರಜ್ಞರಲ್ಲಿ ಈ ಕಾಲಾನುವಿನ್ಯಾಸದ ಪರಂಪರೆಯಲ್ಲಿ ಒಂದು ವಿನ್ಯಾಸ-ವ್ಯತ್ಯಾಸದ ಮೂಲಹೇತುವಾದರೂ ಒಂದು ರಸವೇ ಎಂಬ ಅಭಿಪ್ರಾಯ ಸಿದ್ಧಾಂತವಾಗಿದೆ. ಬೆಳೆಯುವ ಗಿಡದಲ್ಲಿ ಎಲೆಮೊಗ್ಗುಗಳಾಗುವುದು ನಿಂತು ಹೂಮೊಗ್ಗುಗಳಾಗಬೇಕಾದರೆ ಪುಷ್ಪಜನಕ ರಸವಿಶೇಷವೊಂದರಿಂದ ಎಂಬ ವಿಷಯ ತಿಳಿದುಬಂದಿದೆ. ಈ ರಸದ ಪರಿಣಾಮಮುಖೇನವೇ ಅದನ್ನು ಗುರುತಿಸಲು ಸಾಧ್ಯವಾಗಿದೆಯೇ ಹೊರತು ಅದರ ಗುಣಾವಗುಣಗಳನ್ನು ಪ್ರಯೋಗಶಾಲೆಯಲ್ಲಿ ಇನ್ನೂ ಪರೀಕ್ಷಿಸಲಾಗಿಲ್ಲ. ಈ ರಸವಿಶೇಷ ಎಲೆಗಳಲ್ಲಿಯೇ ತಯಾರಾಗುವುದು. ದಿನವೂ ಒಂದು ಸೂಜಿಯ ಮೊನೆಯಷ್ಟು ರಸ ಆವಿರ್ಭವಿಸಿ ಅದರ ಶೇಖರಣೆ ಸಾಕಷ್ಟು ಆದಮೇಲೆ ಎಲೆಯಿಂದ ತೊಟ್ಟಿನ ಮಾರ್ಗವಾಗಿ ಕೆಳಕ್ಕೆ ಹರಿದು ಅನಂತರ ಕಾಂಡಮುಖೇನ ಹೂಗಳಾಗುವ ವಿವಿಧಭಾಗಗಳಲ್ಲಿ ಪ್ರಸರಿಸುವುದರಿಂದ ಹೂವುಗಳು ಮೊಳೆಯುವುವು. ಎಲೆಯನ್ನು ಹಿಂಡಿ ಈ ಪುಷ್ಪಜನಕರಸವೊಂದನ್ನೇ ಬೇರ್ಪಡಿಸಿ ಅದನ್ನು ಮತ್ತೆ ಸಸ್ಯಕ್ಕೆ ಚುಚ್ಚಿ ತುಂಬುವುದರಿಂದ ಸಸಿ ಹೂವುಬಿಡುವಂತೆ ಮಾಡಲು ಸಾಧ್ಯವಾಗಬೇಕು. ಆದರೆ ಇದುವರೆಗೂ ಹಾಗೆ ಮಾಡಲು ಯಾರಿಂದಲೂ ಆಗಿಲ್ಲ. ಆದರೆ, ಇಷ್ಟೇ ಸಮರ್ಪಕವಾದ ಬೇರೊಂದು ಕಾರ್ಯವನ್ನು ಕೆಲವರು ಸಾಧಿಸಿದ್ದಾರೆ. ಇನ್ನೇನು ಹೂ ಬಿಡಬೇಕಾಗಿರುವ ಏಕವರ್ಷಸಸಿಯ (ಸಸಿಯ ಬೆಳೆವಣಿಗೆಯಲ್ಲಿ ಒಂದೇ ವರ್ಷದಲ್ಲಿಯೇ ಹೂ ಬಿಟ್ಟು ಸಾಯುವ ಗಿಡ) ಎಲೆಯೊಂದನ್ನು ದ್ವಿವರ್ಷಸಸಿಗೆ (ಮೊದಲು ವರ್ಷದಲ್ಲಿ ಬೆಳೆದು ಎರಡನೆಯದರಲ್ಲಿ ಹೂ ಬಿಟ್ಟು ಸಾಯುವ ಗಿಡ) ಕಸಿಮಾಡಿ ಸೇರಿಸಿ, ಆ ದ್ವಿವರ್ಷಸಸಿ ಮೊದಲ ವರ್ಷವೇ ಹೂ ಬಿಡುವಂತೆ ಮಾಡಿದ್ದಾರೆ.

ಒಂದು ಸಸಿಯ ಕಾಲಾನುವಿನ್ಯಾಸ ವ್ಯತ್ಯಾಸದಲ್ಲಿ ಈ ಎಲೆಮೊಗ್ಗುಗಳ ಮತ್ತು ಹೂಮೊಗ್ಗುಗಳ ಬದಲಾವಣೆ ಒಂದು ಅಂಶ ಮಾತ್ರ. ಇದರ ಹೇತು ಒಂದು ರಸವಿಶೇಷ. ಹೂ ಬಿಡುವುದು ಒಂದು ರಸಪ್ರಸಾರದಿಂದಾದರೆ ಸಸಿಯ ಇನ್ನಿತರ ಕಾಲಾನುವಿನ್ಯಾಸಗಳೂ—ಎಲೆಯ ಆಕಾರ ವ್ಯತ್ಯಾಸಗಳು, ಮೂಲೆ ಮೊಗ್ಗುಗಳು, ಕುಡಿಗಳು, ಕೊಂಬೆಗಳು ಇವುಗಳ ಬೆಳವಣಿಗೆ ಎಲ್ಲವೂ—ರಸಪ್ರಸಾರದಿಂದಲೇ ಆಗಬಹುದು. ಹೆಚ್ಚು ಕಾಲ ಬೇಕಾದರೂ ಅಂತ್ಯದಲ್ಲಿ ಜೀವಿಗಳ ಬಾಲ್ಯ, ಯೌವನ, ವಾರ್ಧಕ್ಯ ಈ ಎಲ್ಲವೂ ರಸವ್ಯತ್ಯಾಸಗಳಿಂದಲೇ ಎಂದು ಸಮರ್ಥಿಸಬಹುದು. ಭೌತಶಾಸ್ತ್ರಜ್ಞರು ಇತ್ತೀಚೆಗೆ ಕಂಡುಹಿಡಿದಿರುವ ನವೀನ ಸಲಕರಣೆಗಳನ್ನು ಉಪಯೋಗಿಸಿ ಜೀವಶಾಸ್ತ್ರದ ಅತಿ ದೀರ್ಘ ಪ್ರಶ್ನೆಗಳಾದ ಜೀವಿಗಳ ಆಕಾರ, ವಿನ್ಯಾಸ ಮತ್ತು ನಡವಳಿಕೆ ಇವುಗಳನ್ನು ಬಿಡಿಸಲು ಪ್ರಯತ್ನಗಳು ಸಾಗುತ್ತಲೇ ಇವೆ.

ಲೇಖನದಲ್ಲಿ ಬಳಸಿರುವ ಕೆಲವು ಪಾರಿಭಾಷಿಕ ಪದಗಳು

ಜೀವಾಣು—Cell
ವಿನ್ಯಾಸ—Pattern
ಸ್ಖಲಿತವಿನ್ಯಾಸ—Dynamic Pattern
ಅಸ್ಖಲಿತ—Static Pattern
ದೇಶಾನುವಿನ್ಯಾಸ—Pattern in Space
ಕಾಲಾನುವಿನ್ಯಾಸ—Pattern in Time
ಅಣುಶಿಲ್ಪ—Molecular Architecture
ಬಾಹ್ಯರೂಪಾವಿರ್ಭಾವ—Morphogenesis
ಪುಷ್ಪಜನಕರಸ—Florigen
ಏಕ-ವರ್ಷಸಸ್ಯ—Annual Plant
ದ್ವಿ-ವರ್ಷಸಸ್ಯ—Biennial Plant
ಮೂಲೆಮೊಗ್ಗು—Axillary Bud
ಹೂಮೊಗ್ಗು—Flower Bud
ಎಲೆಮೊಗ್ಗು—Leaf Bud

ಎ. ಸತ್ಯನಾರಾಯಣರಾವ್, ಎಂ.ಎಸ್‌ಸಿ.

Eric Ashby ಯವರ 'Pattern in Living Things' ಎಂಬ B.B.C. ಪ್ರಸಾರ ಭಾಷಣದ ಆಧಾರದಿಂದ.

ವಂಚನೆ

ನೀನೆನಗೆ ನುಡಿದಂತೆ ನಾ ನಿನ್ನೆ ಸಂಜೆಯಲಿ
ಹಸುರು ಹೊಮ್ಮಿದ ನಮ್ಮ ಹೊದರಿನಲಿ ಕಾದಿದ್ದೆ ;
ಹಸುರು ಸೀರೆಯನುಟ್ಟು ಹಸುರು ರವಿಕೆಯ ತೊಟ್ಟು ;
ನೀನೆನಗೆ ನುಡಿದಂತೆ ಒಪ್ಪಾಗುವಂತೆ ನಿನಗೆ.

ತಂಗಾಳಿ ಬೀಸಿತ್ತು ಹೂವೆಲ್ಲ ನಗುತಿತ್ತು ;
ಹೊದರಿನಲಿ ನಾನೊಂದು ಹೂವಾಗಿ ಮೆರೆದಿದ್ದೆ,
ಮುದದಿಂದ ನಿನ್ನನೇ ಕುರಿತು ಹಾಡುತಲಿದ್ದೆ ;
ನೀನೊಲಿದು ಹೀಗೆನ್ನ ವಂಚಿಸುವೆಯೆಂದರಿಯದೆ.

ಬರವ ಕಾಯುತ ನಿನ್ನ ಹಮ್ಮಿನಲಿ ಬೀಗಿದೆನು
ನಿನಗಿಂತ ಮಿಗಿಲಾದ ಕಡುಚೆಲುವನಿಲ್ಲೆಂದು :
ಮುಗಿಲಿಗೋಕುಳಿಯೆರಚಿ ಹಾರಿಹೋಯಿತು ಹೊತ್ತು ;
ಬೆಳುದಿಂಗಳನು ಬೀರಿ ತಂಗದಿರನೈತಂದನು.

ಮನವೆಲ್ಲ ಬರಿದಾಗಿ ಮೈಯೆಲ್ಲ ಬರಡಾಗಿ
ವಿರಹದೊಳು ಬೇಯುತ್ತ ಮನೆಕಡೆಗೆ ಬರುವಾಗ,
ಹೂಬನದ ಹಸುರು ಹಾಸಿದ ಮೂಲೆಯಲಿ ಚೆನ್ನ
ಕಂಡೆನಯ್ಯೋ ! ಕನ್ನೆಯೊಬ್ಬಳೊಡನಿದ್ದ ನಿನ್ನ.

ಎಸ್. ಕೆ. ರಾಮಣ್ಣ,
(ಮೂರನೆಯ ಆನರ್ಸ್)

ಗುಟ್ಟಿನ ಗಂಟು

ಶಾಲೆಯಲ್ಲಿ ಮಧ್ಯಾಹ್ನ ಮೊದಲನೆಯ ಘಂಟೆಯ ಪಾಠ ನಡೆಯುತ್ತಿತ್ತು. ಮಾಡುತ್ತಿದ್ದವರು ಮುರುಗೇಂದ್ರಪ್ಪನವರು. ಆ ಶಾಲೆಯಲ್ಲೆಲ್ಲಾ ನಮಗೆ ಅಚ್ಚು ಮೆಚ್ಚಿನ ಉಪಾಧ್ಯಾಯರೆಂದರೆ ಇವರೇ. ಇವರು ನಮಗೆ ತೆಗೆದುಕೊಳ್ಳುತ್ತಿದ್ದುದು ಇಂಗ್ಲೀಷ್ ಪಾಠ. ಆದರೆ ತೂಕಡಿಕೆಯನ್ನುಂಟುಮಾಡುವಂತೆ ಒಂದೇ ಅಳತೆಯಿಂದ ನೀರಸವಾಗಿ ಹೇಳುವ ರೀತಿ ಇವರದಾಗಿರಲಿಲ್ಲ. ಇಂಗ್ಲೀಷ್ ತರಗತಿಯಲ್ಲಿ ಕನ್ನಡ ನುಡಿದರೆ ನಾಲಗೆಯನ್ನೇ ಕತ್ತರಿಸಿ ಹಾಕುವರೆಂಬ ಕಾನೂನು, ಇವರಿಗೆ ಹೊರತಾದಂತೆ ತೋರುತ್ತಿತ್ತು. ಮೂಲಕಾವ್ಯದ ಆನಂದವನ್ನು ಬಾಲಹೃದಯಗಳಿಗೆ ಎರೆಯಲು ಆವಶ್ಯಕವೆಂದು ತೋರಿದ ಎಲ್ಲಾ ಮಾರ್ಗಗಳನ್ನೂ ಉಪಯೋಗಿಸಿಕೊಳ್ಳುವುದರಲ್ಲಿ ಹಿಂದೆಮುಂದೆ ನೋಡುತ್ತಿರಲಿಲ್ಲ. ಮೇಲಾಗಿ ಉತ್ಸಾಹಿಗಳು, ವಿದ್ಯಾರ್ಥಿಗಳ ಮನಸ್ಸನ್ನು ನಗೀಗೆ ನೈವೇದ್ಯಮಾಡುತ್ತಾ ಆ ಅವಕಾಶದಲ್ಲಿಯೇ ಕಾವ್ಯಾನಂದವನ್ನೂ ತೂರಿ, ಅದನ್ನು ಶಾಶ್ವತವಾಗಿರುವಂತೆ ಮಾಡುತ್ತಿದ್ದುದೇ ಇವರ ಹೆಚ್ಚಳ. ಆದುದರಿಂದ ಇವರ ತರಗತಿಯೆಂದರೆ "ಚಕ್ಕರ್" ಗುರುಗಳೂ ಸಹ ಹಾಜರಾಗುತ್ತಿದ್ದರು. ಇರಲಿ. ಈಗ ಮೊದಲನೇ ಘಂಟೆಯ ಪಾಠ ಸ್ವಾರಸ್ಯವಾಗಿ ನಡೆಯುತ್ತಿತ್ತು. ಉತ್ತಮ ಆಂಗ್ಲ ಕವಿಯೋರ್ವನ ಕಾವ್ಯಪ್ರಪಂಚಕ್ಕೆ ನಮ್ಮನ್ನು ಕೈಹಿಡಿದು ಮೆಲ್ಲಮೆಲ್ಲನೆ ಕರೆದೊಯ್ದು, ಅಲ್ಲಿನ ವೈಭವಯುತ ಕಲ್ಪನಾಸಾಮಗ್ರಿಗಳ ಸಾಮ್ರಾಜ್ಯವನ್ನು ಬೈತಿಡದೆ ಬಗೆಗಣ್ಣಿಗೆ ತೋರಿಸುತ್ತಿದ್ದರು. ತರಗತಿ 'Pindrop Silence' ಎನ್ನುವಂತಿತ್ತು. ಅದನ್ನು ಭೇದಿಸಿಕೊಂಡು ಹೊರಡುತ್ತಿದ್ದ ಉಪಾಧ್ಯಾಯರ ವಾಣಿ ಕಿವಿಗಳನ್ನು ಸೇರಿ ಹೃದಯದಲ್ಲಿ ಲೀನವಾಗುತ್ತಿತ್ತು.

ಏಕೈಕ ಮನಸ್ಕನಾಗಿ ಉಪಾಧ್ಯಾಯರನ್ನೇ ಹಿಂಬಾಲಿಸುತ್ತಿದ್ದೆ. ಅಷ್ಟರಲ್ಲಿ ಯಾರೋ ನನ್ನನ್ನು ತಡೆದಂತಾಯಿತು. ನೋಡುತ್ತೇನೆ, ಹಿಂದಿನಿಂದ ಗೆಳೆಯನೊಬ್ಬನು ನನ್ನನ್ನು ತಿವಿಯುತ್ತಿದ್ದಾನೆ; ಅವನ ಕಡೆ ನೋಡಲು ತಿರುಗುತ್ತಿದ್ದಂತೆಯೇ ಆತನು ಬಾಗಿಲಕಡೆ ನೋಡುವಂತೆ ಸನ್ನೆಮಾಡಿದ. ಆ ಸೂಚನೆಯನ್ನು ಮೀರಲಾರದೆ ನನ್ನ ದೃಷ್ಟಿ ತರಗತಿಯ ಬಾಗಿಲಿನಕಡೆ ಹೋಯಿತು. ಕೈಯ್ಯಿ, ಕಣ್ಣು, ತಲೆಗಳನ್ನೆಲ್ಲಾ ಮಾತನಾಡುವ ಸಾಧನವಾಗಿ ಉಪಯೋಗಿಸಿಕೊಂಡು ನನ್ನನ್ನು ಹೊರಗೆ ಬರುವಂತೆ ಕರೆಯುತ್ತಿದ್ದ ಚಿರಪರಿಚಿತ ಹುಡುಗನೊಬ್ಬನು ಕಣ್ಣಿಗೆ ಬಿದ್ದ. ಆತನ ಆತುರವನ್ನು

ನೋಡಿ ಆಶ್ಚರ್ಯವಾಯಿತು. ಉಪಾಧ್ಯಾಯರ ಉಪನ್ಯಾಸಕ್ಕೆ ತಡೆಯೊಡ್ಡಿ ಹೊರಗೆ ಬಂದೆ.

ಹೊರಗೆ ಕಾಲನ್ನು ಇಟ್ಟಿದ್ದೆನೋ ಇಲ್ಲವೊ ಆಗಲೇ ಪ್ರಾರಂಭಿಸಿದ್ದ : "ನಿಮ್ಮ ತಂದೆಯವರು ಊರಿಗೆ ಹೊರಟಿದ್ದಾರೆ ಜಾಗ್ರತೆ ಬರಬೇಕಂತೆ" "ಏನು!!!" ಗಾಬರಿಯಿಂದ ಕೇಳಿದೆ.

"ನಿಮ್ಮ ಮನೆಯಲ್ಲಿ ಎಲ್ಲರೂ ಊರಿಗೆ ಹೊರಟಿದ್ದಾರೆ, ಜಾಗ್ರತೆಯಾಗಿ 'ಕರೆದುಕೊಂಡು ಬಾ' ಎಂದರು. ಅದಕ್ಕೇ ಓಡಿಬಂದೆ" ಎಂದ ಹುಡುಗ.

ನನ್ನ ಕಿವಿಯನ್ನೇ ನಾನು ನಂಬಲಿಲ್ಲ. ಇದನ್ನೇನು ಹೇಳುತ್ತಿದ್ದಾನೆ ಇವನು! ಇದ್ದಕ್ಕಿದ್ದಂತೆಯೇ ಎಲ್ಲರೂ ಊರಿಗೆ ಹೊರಡುತ್ತಾರೆಯೇ? ಗಾಬರಿಯಿಂದ ಓಡಿ ಬಂದು ಇವನಾದರೂ ಏಕೆ ಸುಳ್ಳು ಹೇಳುತ್ತಾನೆ? ಹಾಗಾದರೆ ಎಲ್ಲರೂ ಊರಿಗೆ ಹೊರಟಿರುವುದರ ಕಾರಣವೇನಿರಬಹುದು. "ಊರಿನಿಂದ ಏನಾದರೂ . . ." ಎಂದು ಮೊದಲಾಗಿ, ಕಲ್ಲಿನಂತೆ ನಿಂತು ಕಲ್ಪನೆಯ ಓಟವನ್ನು ಓಡಿಸುತ್ತಿರುವಷ್ಟರಲ್ಲಿ "ಜಾಗ್ರತೆ ಬರಬೇಕಂತೆ, ಸುಮ್ಮನೇ ಹೊತ್ತುಮಾಡಿದರೆ, ನೀವು ಬರುವಷ್ಟರಲ್ಲಿ ಅವರು ಹೊರಟುಹೋಗಿಬಿಡಬಹುದು" ಎಂದು ಹುಡುಗ ಎಚ್ಚರಿಸಿದ. ಹೊಡೆದೆಬ್ಬಿಸಿ ದಂತಾಯಿತು. "ಬಂದೆ ನಡಿ" ಎನ್ನುತ್ತಾ ಒಳಗೆ ಬಂದು ಉಪಾಧ್ಯಾಯರಿಗೆ ಹೇಳಿ ಪುಸ್ತಕಗಳನ್ನು ತೆಗೆದುಕೊಂಡು ಮನೆಯಕಡೆ ಧಾವಿಸತೊಡಗಿದೆ.

ಪ್ರೌಢವಿದ್ಯಾಶಾಲೆಯಿದ್ದುದು ವಿಶಾಲವಾದ ಗುಡ್ಡದ ದೊಡ್ಡ ಬಯಲಿನಲ್ಲಿ. ಶಾಲೆಯಿಂದ ಹೊರಟವನು ಬಯಲನ್ನು ತುಳಿಯುತ್ತಾ ವೇಗವಾಗಿ ಬಂದು, ಮುಖ್ಯ ಬೀದಿಯನ್ನು ಸೇರುವಷ್ಟರಲ್ಲಿ ಆ ಕಡೆಯಿಂದ ಬರುತ್ತಿದ್ದ ಬಸ್ಸು ಅಲ್ಲಿ ಬಂದು ನಿಂತಿತು. ನನ್ನ ಲಕ್ಷ್ಯ ಆಕಡೆಗಿರಲಿಲ್ಲ. ಮನೆಯಕಡೆ ತಿರುಗಿ ವೇಗವಾಗಿ ಮುಂದುವರಿದೆ. ಅಷ್ಟರಲ್ಲಿ ಬಸ್ಸಿನಿಂದ ನನ್ನನ್ನು ಯಾರೋ ಕರೆಯತೊಡಗಿದರು. ತಿರುಗಿ ನೋಡು ತ್ತೇನೆ, ಬಸ್ಸಿನ ಕಿಷ್ಕಿಂಧಾಕಾಂಡದಿಂದ ತಂದೆಯವರೇ ತಲೆಯನ್ನು ಹೊರಗೆ ಹಾಕಿ ಕೂಗುತ್ತಿದ್ದರು. ಸಖೇದಾಶ್ಚರ್ಯ ಭಯದುಃಖಾದಿ ಭಾವಗಳು ಒಮ್ಮೆಗೇ ಒತ್ತರಿಸಿ ಬಂದುವು. ಆದರೆ ಅವುಗಳನ್ನು ಪ್ರದರ್ಶಿಸಲು ಸಮಯವೆಲ್ಲಿಯದು! ಒಂದೇ ಹಾರಿಕೆಗೆ ಬಸ್ಸಿನ ಹತ್ತಿರ ತಂದೆಯವರ ಮುಖದ ಕೆಳಗೆ ನಿಂತಿದ್ದೆ. ಅಷ್ಟರಲ್ಲಿ ತಂದೆಯವರು ವಿಷಯವನ್ನು ಅರ್ಧಹೇಳಿ ಮುಗಿಸಿದ್ದರು.

"ಅಜ್ಜಿಗೆ ಬಹಳ ಖಾಹಿಲೆ ಎಂದು ಟೆಲಿಗ್ರಾಂ ಬಂತು. ಅದಕ್ಕೋಸ್ಕರ ಎಲ್ಲರೂ ಹೊರಟಿದ್ದೇವೆ. ನಿನ್ನ ಪರೀಕ್ಷೆ ಹತ್ತಿರಬಂತು, ಸುಮ್ಮನೆ ನೀನೇಕೆ ಬರುವುದು? ಖಾಹಿಲೆ ಸ್ವಲ್ಪ ಗುಣವಾದಕೂಡಲೆ ಇನ್ನು ಐದಾರು ದಿನಗಳಲ್ಲಿ ಬಂದುಬಿಡುತ್ತೇವೆ.

ಊಟವನ್ನು ಮುರುಗೇಂದ್ರಪ್ಪನವರ ಮನೆಯಲ್ಲೇ ಮಾಡುತ್ತಿರು. ಇಷ್ಟಾದರೂ ಕಂಡು ಹೇಳಲು ಆಗುತ್ತದೆಯೋ ಇಲ್ಲವೋ ಎಂದು ಮಾಡಿದ್ದೆ. ಅದಕ್ಕಾಗಿ ಮೇಜಿನ ಮೇಲೆ ಒಂದು ಚೀಟಿಯನ್ನೂ ಬರೆದಿಟ್ಟಿದ್ದೇನೆ. ಟೆಲಿಗ್ರಾಂ ಇನ್ನು ಈಗ ಬಂದಿದ್ದು. ಇಷ್ಟು ಜಾಗ್ರತೆ ಬಸ್ ಸಿಕ್ಕಿದ್ದೇ ನಮ್ಮ ಪುಣ್ಯ."

ಕೊನೆಯಮಾತು ಇನ್ನೂ ಬಾಯಲ್ಲಿದ್ದಂತೆಯೇ ಬಸ್ಸಿನ ಚಕ್ರಗಳು ಉರುಳ ತೊಡಗಿದುವು. ಚಿಕ್ಕಮ್ಮನವರೊಡನೆ ಮಾತನಾಡಲು ಅವಕಾಶವಾಗಲಿಲ್ಲ. ಆದರೆ ಅವರ ಮುಖದ ಮೇಲಿನ ಉದ್ವೇಗವೇ ಅವರ ಮನಃಕ್ಷತವನ್ನು ಎತ್ತಿ ತೋರಿಸುತ್ತಿತ್ತು. ಬಸ್ಸು ಒಂದೆರಡು ಹಜ್ಜೆ ಹರಿದಿರಬಹುದು, ಅಷ್ಟರಲ್ಲಿ "ಅಪ್ಪಾ; ಅಣ್ಣ ಬರಲ್ಲ?" ಎನ್ನುವ ತಂಗಿಯ ಮಧುರಧ್ವನಿ ಕಿವಿತಾಗಿತು; ಕಣ್ಣು ಹನಿಗೂಡಿದುವು. ತಂದೆಯವರು ತಿರುಗಿ ನೋಡಿ 'ಹೋಗುತ್ತೇವೆ'ಂಬುದಾಗಿ ತಲೆಯಾಡಿಸಿದರು. ನಾನೂ ಜುಲುಮೆಯಿಂದ ಮರುಸನ್ನೆಯನ್ನಿತ್ತೆ.

ಬಸ್ಸು ಕಿರ್ರ್ರೀೀೀ ಎನ್ನುತ್ತ ನಿಧಾನವಾಗಿ ನಡೆದಿತ್ತು. ದೇಹದಿಂದ ನನ್ನ ಮನಸ್ಸನ್ನು ಕಿತ್ತುಕೊಂಡು ಹೋಗಲಾರದೆ ಇಷ್ಟು ಕಷ್ಟಪಡುತ್ತಿದೆಯೇನೋ ಎನಿಸಿತು. ಏರಿಯನ್ನು ದಾಟುತ್ತಿದ್ದಂತೆಯೇ ಅದರ ವೇಗ ವೃದ್ಧಿಯಾಗಿ, ತನ್ನ ಪ್ರಯತ್ನದಲ್ಲಿ ವಿಜಯಶಾಲಿಯಾದಂತೆ ಭರ್ರೆಂದು ಓಡುತ್ತಾ ಕಣ್ಮರೆಯಾಯಿತು.

ಭಾರವಾದ ಹೃದಯವನ್ನು ಹೊತ್ತು ಮನೆಯ ಕಡೆ ತಿರುಗಿದೆ. "ಅಪ್ಪಾ, ಅಣ್ಣ ಬರಲ್ಲ?" ತಂಗಿಯ ಮಾತು ಚಿತ್ತವಾರಿಧಿಯಲ್ಲಿ ತರಂಗಗಳನ್ನೆಬ್ಬಿಸುತ್ತಿತ್ತು. "ಇಲ್ಲ. ಅಣ್ಣನು ಬರುವಂತಿಲ್ಲ. ಬೆನ್ನುಹತ್ತಿರುವ ಪರೀಕ್ಷೆ ಎಂಬ ಪೆಡಂಭೂತದಿಂದ ತಪ್ಪಿಸಿಕೊಂಡು ನಿಮ್ಮ ಅಣ್ಣನು ಬರಲಾರ" ಎಂದು ತಂಗಿಗೆ ತಿಳಿಸಬೇಕಾದ ಸಂದೇಶವನ್ನು ಗಾಳಿಗೆ ಕೊಟ್ಟು ಹೆಜ್ಜೆಯನ್ನು ಕಿತ್ತುಕಿತ್ತು ಇಡತೊಡಗಿದೆ. ಹಿಂದಕ್ಕೊಮ್ಮೆ ತಿರುಗಿನೋಡಿದೆ. ಏನಿದೆ! ಬಸ್ಸು ಆಗಲೇ ಎಷ್ಟುದೂರ ಹೋಗಿತ್ತೋ.

ಮನೆಗೆ ಬೀಗ ಹಾಕಿರಲಿಲ್ಲ. ಬಾಗಿಲನ್ನು ದಬ್ಬಿದೆ. ಮನೆಯಲ್ಲಾ ಹಾಳು ಸುರಿಯುತ್ತಿತ್ತು. ಏಕೆ! ಸಾಮಾನುಗಳೆಲ್ಲಾ ಇದ್ದಕ್ಕಿದ್ದಂತೆಯೇ ಇವೆ. ಬಹಳ ದಿನಗಳಿಂದ ವಾಸವನ್ನು ಬಿಟ್ಟ ಮನೆಯೂ ಅಲ್ಲ. ಯಾರಾದರೂ ಬಂದು ನೋಡಿದರೆ ಮನೆಯವರು ಈಗ ಎಲ್ಲಿಯೋ ಹೋಗಿರಬೇಕು, ಅಥವಾ ಒಳಗೆ ಇದ್ದಾರೆಯೋ ಎನ್ನುವಂತಿದೆ. ಆದರೇನು! ಮನಸ್ಸೇ ಸರ್ವಕ್ಕೂ ಕಾರಣವಲ್ಲವೇ. ಮನಸ್ಸಿದ್ದರೆ ಶ್ಮಶಾನವೂ ಅರಮನೆಯಾಗಬಲ್ಲದು. ಅದಿಲ್ಲದಿದ್ದರೆ ಅರಮನೆಯೂ ಮಸಣವೇ ಸೈ. ಹಾಗಾಯಿತು ನನ್ನ ಸ್ಥಿತಿ.

ಒಳಗೆ ಕಾಲಿಟ್ಟೆ, ಯಾರೋ ಎದೆಗೆ ಕೈ ಹಾಕಿ ದಬ್ಬಿದಂತಾಯಿತು. ಆದಕ್ಕೆ

ವಿರುದ್ಧವಾಗಿ ನನ್ನ ದೇಹವನ್ನು ಬಲಾತ್ಕಾರದಿಂದ ದಬ್ಬಿಕೊಂಡು ಬಂದು, ಮೇಜಿನ ಮೇಲೆ ಕೈಲಿದ್ದ ಪುಸ್ತಕಗಳನ್ನೆಸೆದು, ಕುರ್ಚಿಯ ಮೇಲೆ ಬಿದ್ದುಕೊಂಡೆ. ದೃಷ್ಟಿ ಮೇಜಿನಮೇಲೆಲ್ಲಾ ಓಡಿತು. ತಂದೆಯವರು ಬರೆದಿಟ್ಟುಹೋಗಿದ್ದ ಕಾಗದವನ್ನು ಕಂಡು ಕೈಗೆ ತೆಗೆದುಕೊಂಡೆ. ಮೊತ್ತಮೊದಲು ಅದರಲ್ಲಿ ನನ್ನ ಕಣ್ಣಿಗೆ ಬಿದ್ದುದು ಅದರಲ್ಲಿರಿಸಿದ್ದ ಐದು ರೂಪಾಯಿನ ನೋಟು. ತಾವು ಬಿಟ್ಟುಹೋದುದರಿಂದುಂಟಾದ ಅತೀವ ವ್ಯಥೆಯನ್ನು ಈ ನೋಟು ನಂದಿಸಬಹುದೆಂದು ತಂದೆಯವರು ಭಾವಿಸಿರಬೇಕು, ಪಾಪ ; ಇದಕ್ಕೆ ವಿರುದ್ಧವಾದ ಫಲಿತಾಂಶ ಫಲಿಸುವುದೆಂಬುದನ್ನು ಅವರೇನುಬಲ್ಲರು !

ಕಣ್ಣಾಲಿಗಳು, ತುಂಬಿದ ಕಂಬನಿಯನ್ನು ತಮ್ಮಲ್ಲಿಯೇ ಅಡಗಿಸಿಕೊಳ್ಳಲಾರದೆ ಮೆಲ್ಲಮೆಲ್ಲನೆ ಕೆಳಗೆ ಬಿಡತೊಡಗಿದುವು. ಒಂದೆರಡು ಹನಿಗಳು ಪತ್ರದಮೇಲೂ ತೊಟ್ಟಿಕ್ಕಿ ಆ ಭಾಗದ ಕ್ರೂರವಾದ ಅಕ್ಷರಗಳನ್ನು ಕಲಕಿಬಿಟ್ಟುವು. ಸುಮ್ಮನೇ ಪತ್ರದ ಮೇಲೆ ಕಣ್ಣಾಡಿಸಿದೆ, ಬಸ್ಸಿನಲ್ಲಿ ತಿಳಿಸಿದಷ್ಟು ಮಾತುಗಳನ್ನೇ ಇಲ್ಲಿಯೂ ಸಂಕ್ಷೇಪವಾಗಿ ಬರೆದಿಟ್ಟಿದ್ದರು. ಅದನ್ನು ಮೇಜಿನಮೇಲೆಸೆದು ಸುಮ್ಮನೆ ಕುಳಿತು ಕೊಂಡೆ.

"ಅಜ್ಜೀ "

"ಯಾರು ! ಮಗೂ, ಬಂದೆಯಾ ! ಬಾ ನೀನೊಬ್ಬನೇ ಬಂದೆಯಾ ? "

"ಅವರೂ ಬರುತ್ತಿದ್ದಾರೆ. ನಾನು ಮುಂದಾಗಿ ನೋಡಲು ಬಂದುಬಿಟ್ಟೆ. ಈಗ ಹೇಗಿದೆ ಅಜ್ಜಿ ಮೈಯ್ಯಲ್ಲಿ ? "

ಅಜ್ಜಿಯಿಂದ ಮುಕ್ತತೆಯ ಮುಗುಳ್ನಗೆ ಮರುತ್ತರವಾಗಿ ಬಂದು "ಬಾ ಕುಳಿತುಕೋ " ಎನ್ನುವ ಸಾದರ ಸ್ವಾಗತ ಲಭಿಸಿತು. ಹಾಸಿಗೆಯ ಪಕ್ಕದಲ್ಲಿ ಕುಳಿತು ಕೊಳ್ಳಲು ಹೋದೆ. ಆದರೆ ಅಜ್ಜಿಯು ನನ್ನ ಕೈಹಿಡಿದು "ಇಲ್ಲಿ ಬಾ " ಎಂದು ತನ್ನ ಹಾಸಿಗೆಯ ಮೇಲೇ ತನ್ನನ್ನು ಕುಳ್ಳಿರಿಸಿಕೊಂಡು, ನನ್ನ ಬೆನ್ನಮೇಲೆ, ತಲೆಯ ಮೇಲೆಲ್ಲಾ ಕೈಯ್ಯಾಡಿಸುತ್ತಾ

"ಮಗೂ ಇನ್ನು ನಾನು ಬಹಳಕಾಲ ಬದುಕಲಾರೆ. ಬಹುದಿನಗಳಿಂದಲೂ ಉತ್ಸುಕತೆಯಿಂದ ನಿರೀಕ್ಷಿಸಿಕೊಂಡಿದ್ದ ಕಾಲ ಬಂದೊದಗಿದೆ. ಕೊನೆಯ ಕಾಲದಲ್ಲಿ ನಿನ್ನನ್ನು ನೋಡುತ್ತೇನೋ ಇಲ್ಲವೋ ಎಂದು ಮಾಡಿದ್ದೆ. ನಿನಗೆ ನನ್ನ ಕೊನೆಯ ಆಶೀರ್ವಾದವಿಷ್ಟೆ ; ಕಷ್ಟಪಟ್ಟು ಓದಿ ವಿದ್ಯಾವಂತನಾಗು, ಅವಿದ್ಯೆಯನ್ನು ನೀಗಿ ನಿಜವಾದ ವಿದ್ಯೆಯ ಸ್ವರೂಪವನ್ನು ಅರಿ. ಮನೆತನಕ್ಕೆ ಹಿಂದಿನ ಹಿರಿಯ ಹೆಸರನ್ನು ತಾ ; ಇದಕ್ಕಿಂತಲೂ ಹೆಚ್ಚಾಗಿ, ಏನೂ ಇಲ್ಲದ ಮುದುಕಿ ನಾನು, ಇನ್ನೇನನ್ನು ನಿನಗೆ ಕೊಡಬಲ್ಲೆ ? "

ಅಜ್ಜಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದು ನಮಸ್ಕರಿಸಿದೆ. ಅಜ್ಜಿಯ ಕಾಂತಿಯುತವಾದ ಮುಖದ ತೇಜಃಪುಂಜ ಪ್ರಸ್ಫುರಿತ ನೇತ್ರದ್ವಯಗಳಿಂದ ಆನಂದಾಶ್ರುಗಳುಣ್ಮುತ್ತಿದ್ದುವು. ನನ್ನ ಕಣ್ಣುಗಳಿಂದಲೂ ನೀರು ದಳದಳನೆ ಇಳಿಯುುತ್ತಿದ್ದುವು.

ಕಲ್ಪನಾಸಾಮ್ರಾಜ್ಯದ ಈ ಸ್ವರ್ಣಸ್ವಪ್ನ, ಮುರುಗೇಂದ್ರಪ್ಪನವರ ಪತ್ನಿಯವರು ನನ್ನನ್ನು ಕರೆಯುತ್ತಾ ಬಂದುದರಿಂದ ಭಗ್ನವಾಯಿತು. ಜಾಗ್ರತೆಯಾಗಿ ಕಣ್ಣೀರನ್ನೊರಸಿಕೊಂಡು ಯಾವುದೋ ಒಂದು ಪುಸ್ತಕವನ್ನು ಹಿಡಿದು ಓದುತ್ತಿರುವವನಂತೆ ನಟಿಸಿದೆ. ಆದರೆ ಅವರಿಗೆ ತಿಳಿಯದೆ ಹೋದೀತೆ. ಮಾತೃವಾತ್ಸಲ್ಯದ ಮಮತೆಯಿಂದ ನನ್ನನ್ನು ಸಂತೈಸಿದರು.

ಮುರುಗೇಂದ್ರಪ್ಪನವರೆಂದರೆ ನಾನು ಮೊದಲೇ ತಿಳಿಸಿದ ನಮ್ಮ ನೆಚ್ಚಿನ ಉಪಾಧ್ಯಾಯರೇ. ಅವರೂ ನಮ್ಮ ಕಡೆಯವರು. ನಮ್ಮ ಪಕ್ಕದ ಮನೆಯೇ ಅವರದು. ಪಕ್ಕದ ಮನೆ, ಎನ್ನುವಂತೆಯೂ ಇಲ್ಲ. ಒಂದೇ ಮನೆಯ ಇನ್ನೊಂದು ಭಾಗ. ಇಲ್ಲಿ ಪಿಸುಗುಟ್ಟಿದರೂ ಅಲ್ಲಿ ಕೇಳುತ್ತಿತ್ತು. ಅವರು ಇಲ್ಲಿಗೆ ವರ್ಗವಾಗಿ ಬಂದು ಏಳೆಂಟುತಿಂಗಳುಗಳಾಗಿದ್ದುವು. ಅಷ್ಟರಲ್ಲಿ ಅವರು ನಮ್ಮ ಕಡೆಯವರು ಹೋಗಿ, ನಮ್ಮ ಮನೆಯವರೇ ಆಗಿಬಿಟ್ಟಿದ್ದರು.

ಅವರ ಪತ್ನಿಯವರೇ ಈಗ ನನ್ನನ್ನು ಸಮಾಧಾನಪಡಿಸಲು ಬಂದುದು. ತಾರು ಬಂದಾಕ್ಷಣ ತಂದೆಯವರು ನನಗೆ ಹೇಳಿಕಳುಹಿಸಿ ಬಸ್ಸನ್ನು ನೋಡಲು ಹೋದುದು, ಅಲ್ಲಿಂದ ಬಸ್ಸನ್ನು ಹತ್ತಿಕೊಂಡೇ ಬಂದುದು, ಒಂದೇ ಅವಸರದಿಂದ ಹೊರಟು ಹೋದುದು ಎಲ್ಲವನ್ನೂ ಹೇಳಿದರು. ನಾನು, ಮಾತಿಲ್ಲದೆ ಹೂಂಗುಟ್ಟುತ್ತಿದ್ದೆ. ಕೊನೆಗೆ " ಇಲ್ಲಿ ಸಂಕೋಚವೇನೂ ಬೇಡ. ಇದೂ ಒಬ್ಬ ಚಿಕ್ಕಮ್ಮನ ಮನೆ ಎಂದು ತಿಳಿದು ಅವರು ಬರುವವರೆಗೂ ಊಟಮಾಡಿ ಓದಿಕೊಂಡು ಇರಪ್ಪ. ಇನ್ನು ನಾಲ್ಕಾರು ದಿನಗಳಲ್ಲಿ ಗುಣವಾದ ಕೂಡಲೇ ಬರುತ್ತೇವೆಂದಿದ್ದಾರೆ. ಅಲ್ಲದೆ ನಿನ್ನ ಚಿಕ್ಕಮ್ಮನವರ ಜೀವ ನಿನ್ನನ್ನು ಬಿಟ್ಟು ಅರಗಳಿಗೆಯಾದರೂ ಇದ್ದೀತೆ! ಏನೋ ನಿರ್ವಾಹವಿಲ್ಲವೆಂದೇ ಹೋದರು. ಅಂತಹ ಚಿಕ್ಕಮ್ಮನನ್ನು ಪಡೆಯಲು ಜನ್ಮಜನ್ಮಗಳಲ್ಲಿ ಪುಣ್ಯಮಾಡಿ ಜನಿಸಬೇಕು. ಅವರಿಗೆ ಗಂಗಮ್ಮ ಎನ್ನುವುದು ಅನ್ವರ್ಥನಾಮವೇ ಸರಿ " ಎಂದು ಹೊರಟುಹೋದರು.

ಅವರು ಕೊನೆಯಲ್ಲಿ ಹೇಳಿದ ಮಾತು ನೂರಕ್ಕೆ ನೂರೈವತ್ತು ಪಾಲು ದಿಟ. ಜನಿಸಿದ ಮೂರು ತಿಂಗಳಲ್ಲಿ ತಾಯಿಗೆ ಗತಿಕಾಣಿಸಿದ ಮಹಾನುಭಾವ ನಾನು. ಆದರೆ ಮಾತೃಪ್ರೇಮದಿಂದ ವಂಚಿತನಾದೆನೆಂದು ಹೇಳುವುದು ಹಾಗಿರಲಿ, ನನ್ನ ತಾಯಿಯೇ

ಇದ್ದಿದ್ದರೆ ಚಿಕ್ಕಮ್ಮನವರಿಂದ ಹೊಂದಿದಂತಹ ಮಾತೃವಾತ್ಸಲ್ಯವನ್ನು ಹೊಂದುತ್ತಿದ್ದೆನೋ ಇಲ್ಲವೋ ಅಂತಹ ನಿಷ್ಕಳಂಕವಾದ ಪುತ್ರವಾತ್ಸಲ್ಯದಿಂದ ನನ್ನನ್ನು ಪೋಷಿಸುತ್ತಿದ್ದರು.

ಸರ್ಕಾರೀ ಹುದ್ದೆಯಲ್ಲಿದ್ದುದರಿಂದ ತಂದೆಯವರು ಊರೂರು ತಿರುಗಬೇಕಾಗುತ್ತಿತ್ತು. ಆದರೆ ಬೇಸಿಗೆ ರಜಾದಲ್ಲಿ ನಾವು ಎಲ್ಲಿದ್ದರೂ ನಮ್ಮೂರನ್ನು ಸೇರಿ ಕೆಲವು ದಿನಗಳನ್ನು ಬಂಧುಮಿತ್ರರೊಡನೆ ಕಳೆಯುತ್ತಿದ್ದುದು ರೂಢಿ. ಆಗ ಮಾತ್ರ ನನಗೆ ಊರಿನ ದರ್ಶನ. ಊರಿನಲ್ಲಿದ್ದ ಅಜ್ಜಿಯ ದರ್ಶನವೂ ಆಗಲೇ.

ಅಜ್ಜಿಯೆಂದರೆ, ಈಗ ನಾನು ಹೇಳುತ್ತಿರುವುದು ನಮ್ಮ ತಂದೆಯ ತಾಯಿಯಲ್ಲ ; ಅವರ ತಾಯಿ, ಅರ್ಥಾತ್ ಮುತ್ತಜ್ಜಿ. ಆದರೆ ನಮಗೆಲ್ಲಾ 'ಅಜ್ಜಿ' ಎಂದೇ ಅವರು ಚಿರಪರಿಚಿತರು. ನನಗೆ ಬುದ್ಧಿ ತಿಳಿಯುವ ಹಾಗೆ ಆಗುವ ವೇಳೆಗೆ ಅಜ್ಜಿ, ತನ್ನ ಪ್ರಯಾಣವನ್ನೆಲ್ಲಾ ನಿಲ್ಲಿಸಿ ಊರನ್ನೇ ಗಟ್ಟಿಯಾಗಿ ಹಿಡಿದುಬಿಟ್ಟಿದ್ದರು. ಆದುದರಿಂದ ಊರಿಗೆ ಹೋದಾಗ ಮಾತ್ರ ಅವರ ದರ್ಶನ ಮತ್ತು ಅವರ ಪ್ರೀತಿಯ ಮಡಲಿನಲ್ಲಿ ಕೆಲವು ದಿನಗಳನ್ನು ಕಳೆಯುವ ಸೌಭಾಗ್ಯ.

ಮೊದಮೊದಲು ಅಜ್ಜಿ ನನ್ನ ಮೇಲೆ ಪ್ರಭಾವಮುದ್ರೆಯನ್ನು ಒತ್ತಿದುದು ತನ್ನ ಕತೆಗಳ ಪ್ರಭಾವದಿಂದ. "ಅಜ್ಜಿ ಅಜ್ಜಿ, ಒಂದು ಕತೆ ಹೇಳಜ್ಜಿ" ಎಂದು ಬಳಿಸಾರುತ್ತಿದ್ದೆ. ಅನುಭವರಸಾಯನದಲ್ಲಿ ಅರ್ಥವಾಗಿ ಹೃದಯ ತುಂಬಿ ಹೊರ ಸೂಸುತ್ತಿದ್ದ ಕತೆಗಳು ನನ್ನನ್ನು ಮುಗ್ಧನನ್ನಾಗಿ ಮಾಡುತ್ತಿದ್ದುವು. ಸ್ವಾನುಭವಗಳಿಗೆ ಕತೆಯ ಬಣ್ಣಬಳಿದು ಹೇಳುತ್ತಿದ್ದುದೂ ಉಂಟು. ಕೆಲವುವೇಳೆ ಶಿವನ ಪಂಚವಿಂಶತಿ ಲೀಲೆಗಳಲ್ಲಿ ಹಲವನ್ನು ಚಿತ್ರಿಸುತ್ತಿದ್ದುದೂ ನೆನೆಪಿದೆ. ಇವುಗಳ ಜೊತೆಗೆ ಇನ್ನೊಂದು ಮಾತನ್ನು ಮಾತ್ರಾ ಮರೆಯುವಂತಿಲ್ಲ. ಅದೆಂದರೆ ಅಜ್ಜಿಯು ಹಾಡುತ್ತಿದ್ದ ತತ್ವಪದಗಳು. ತನ್ನದೇ ಆದ ಒಂದು ರಾಗದಿಂದ ಒಂದು ತನ್ಮಯತೆಯಿಂದ ಹಾಡುತ್ತಿದ್ದುದನ್ನು ಎಂದಾದರೂ ಮರೆಯಲು ಸಾಧ್ಯವೇ ! ಆ ತತ್ವಗಳ ಅರ್ಥವಾಗದಿದ್ದರೂ ಅಜ್ಜಿಯ ತನ್ಮಯತೆ, ತೃಪ್ತಿ, ಸಂತೋಷಗಳನ್ನು ಕಂಡು ನನ್ನ ಹೃದಯವೂ ಒಂದು ಅವರ್ಣನೀಯ ಆನಂದದ ಸೆರೆಯಲ್ಲಿ ಸಿಕ್ಕುತ್ತಿತ್ತು.

ಚೇಷ್ಟೆಗಳನ್ನು ಮಾಡಿ ಅವರಿಂದ ಬೈಗಳನ್ನು ತಿನ್ನುತ್ತಿದ್ದುದಂತೂ ಒಂದೆರಡು ಸಲವಲ್ಲ. ಆದರೆ ಅವರು ಬಯ್ಯುತ್ತಿದ್ದಹಾಗೆಲ್ಲಾ ಉತ್ಸಾಹವೇ ಹೆಚ್ಚು. 'ತುಂಟ' ಎನ್ನುವುದು ಅವರ ಮೆಚ್ಚಿನ ಬೈಗಳು.

"ಏ ಗಂಗೂ, ನೋಡೇ ನಿನ್ನ ಮಗನ್ನ, ಇವನಿಗೆ ಅನ್ನ ಹಾಕಬೇಡ. ಶುದ್ಧ ತುಂಟ."

"ಅಜ್ಜೀ, ನಾನು ನಿನಗೇ ಅನ್ನ ಹಾಕುವುದಿಲ್ಲ."

"ಹೋಗೋ ಪಟಿಂಗ, ನೀನೇನು ಹಾಕಬೇಕು, ನೀನಲ್ಲದಿದ್ದರೆ ನಿಮ್ಮಪ್ಪ ಹಾಕ್ತಾನೆ. ಹೋಗಲಿ ಒಂದು ಕತೆ ಹೇಳ್ತೀನೆ ಬಾ" ಎಂದಾಕ್ಷಣ ಮಂತ್ರಮುಗ್ಧನಾದಂತೆ ಸಮೀಪಗತನಾಗುತ್ತಿದ್ದೆ. ಹೀಗೆ ನಮ್ಮೂರಲ್ಲಿ ಕಳೆಯುತ್ತಿದ್ದ ದಿನಗಳು ನಿಮಿಷಗಳಾಗುತ್ತಿದ್ದುವು.

"ಇನ್ನೊಂದು ಸಾರಿ ಬರುವಾಗ ಮುಂದಿನ 'ಕಳಾಸಿ' ಗೆ ಹೋಗಿರಬೇಕು" ಎಂದು ಆಜ್ಞಾರೂಪವಾದ ಅವರ ಆಶೀರ್ವಾದವನ್ನು ಅಕ್ಕರೆಯಿಂದ ಹೊತ್ತು ಹೊರಡುತ್ತಿದ್ದೆ.

'ಲೋವರ್ ಸೆಕೆಂಡರಿ' ಯಲ್ಲಿ ತೇರ್ಗಡೆ ಹೊಂದಿದಮೇಲೆ, ತಂದೆಯವರಿದ್ದಲ್ಲಿ 'ಹೈಸ್ಕೂಲ್' ಇಲ್ಲದೇ ಇದ್ದುದರಿಂದ ಶಿವಮೊಗ್ಗಾಕ್ಕೆ ಬಂದು ಸೇರಿದೆ. ಶಿವಮೊಗ್ಗಾದಿಂದ ನಮ್ಮೂರು ದೂರವೇನೂ ಅಲ್ಲ ಒಂದು ಅಥವಾ ಒಂದೂವರೆ ಘಂಟೆಯ ದಾರಿ, ಬಸ್ಸಿನಲ್ಲಿ ಆದುದರಿಂದ ಆಗಾಗ ಅಲ್ಲಿಗೆ ಹೋಗಿಬರುವುದು ಹೆಚ್ಚಾಯಿತು, ಅಜ್ಜಿಯ ಮಾತುಗಳಲ್ಲಿನ ಆಧ್ಯಾತ್ಮಿಕ ಅರ್ಥ ಸಂಪೂರ್ಣವಾಗಿ ಅಲ್ಲದಿದ್ದರೂ ಸ್ವಲ್ಪ ಸ್ವಲ್ಪವಾಗಿ ತಿಳಿಯಲಾರಂಭಿಸಿತ್ತು.

ಅಷ್ಟರಲ್ಲಿ ತಂದೆಯವರಿಗೆ ತೀರ್ಥಹಳ್ಳಿಗೆ ವರ್ಗವಾದುದರಿಂದ ನನ್ನ 'ಹೈಸ್ಕೂಲು' ವ್ಯಾಸಂಗವೂ ಅಲ್ಲಿಗೇ ವರ್ಗಾಯಿಸಲ್ಪಟ್ಟಿತು. ಹೊಸಸ್ಥಳಕ್ಕೆ ಹೊಂದಿಕೊಳ್ಳುವ ಈ ಗಲಾಟೆಯಲ್ಲಿ ಬೇಸಿಗೆ ರಜಾಕ್ಕೆ ಊರಿಗೆ ಹೋಗುವುದು ಸಾಧ್ಯವಾಗಲಿಲ್ಲ. ಆದುದರಿಂದ ದಸರಾರಜಾದಲ್ಲಿ ಊರಿಗೆ ಪ್ರಯಾಣಬೆಳಸಿದೆವು.

ಎಂದಿಗಿಂತ ಉತ್ಸಾಹಯುತವಾಗಿತ್ತು ನಮ್ಮ ಊರಿನ ಪ್ರವಾಸ. ಕಾರಣವಿಷ್ಟೆ: ನಾನು ಒಮ್ಮೆಯೂ ನಮ್ಮೂರಿನ ದಸರಾವನ್ನು ನೋಡಿರಲಿಲ್ಲ, ಹಿಂದೂರಕ್ತವಿರುವಲ್ಲೆಲ್ಲಾ ಉತ್ಸಾಹದಿಂದ ಆಚರಿಸಲ್ಪಡುವ ಅನೇಕ ಹಬ್ಬಗಳಲ್ಲಿ ಒಂದಾದ ನವರಾತ್ರಿಯ ಹಬ್ಬವು ನಮ್ಮೂರಿನಲ್ಲಿಯೂ ಬಹಳ ವಿಜೃಂಭಣೆಯಿಂದಲೇ ನಡೆಯುತ್ತಿತ್ತು. ವಿಜಯದಶಮಿಯದಿನ ಬನ್ನಿಮಂಟಪಕ್ಕೆ ಹೊರಡುವ ಶ್ರೀ ಚನ್ನಪ್ಪಸ್ವಾಮಿಗಳವರ ಉತ್ಸವವನ್ನು ನೋಡುವುದಕ್ಕಾಗಿ ಸುತ್ತುಮುತ್ತಲಿನ ಹಳ್ಳಿಗರೆಲ್ಲಾ ಜಮಾಯಿಸಿ ಬಹಳ ಯಶಸ್ವಿಯಾಗಿ ಹಬ್ಬವನ್ನಾಚರಿಸುತ್ತಿದ್ದರು.

ಬನ್ನಿ ಮುಡಿದು ವಿಶ್ವಾಸಪೂರ್ವಕವಾಗಿ ಗುರುಹಿರಿಯರ ಪಾದಧೂಳಿಯನ್ನು ಧರಿಸುತ್ತಾ, ಸ್ನೇಹಿತರ ಕೈಕುಲುಕುತ್ತಾ, ಕಿರಿಯರನ್ನಾಶೀರ್ವದಿಸುತ್ತಾ, ಹಿಂದಿರುಗುವ ಜನಸ್ತೋಮವನ್ನೀಕ್ಷಿಸಿದ ಭಾವಜೀವಿಗೆ ಹಿಂದೂಸಂಸ್ಕೃತಿಯ ಹಿರಿಮೆಯನ್ನು ಕಂಡು ಆನಂದಬಾಷ್ಪಗಳುದುರದೆ ಇರಲಾರವು. ಬನ್ನಿಯ ಮಂಟಪಕ್ಕೆ

ನಾನೂ ಹೋಗಿದ್ದೆ. ಅಲ್ಲಿಂದ ಬಂದವನೇ ಅಜ್ಜಿಯನ್ನು ಹುಡುಕಿಕೊಂಡು ಹೋದೆ. ನಾನು ಮುಂದೆ ತಾನು ಮುಂದೆ ಎಂದು ನಮಸ್ಕರಿಸಲು ಕಾತರರಾದ ಜನಗಳಿಂದ ಸುತ್ತುವರಿಯಲ್ಪಟ್ಟು ಅಜ್ಜಿ ಕಾಲು ಜೋಡಿಸಿಕೊಂಡು ಕುಳಿತಿದ್ದರು. ದಕ್ಷಿಣೆಯನ್ನು ಕೊಟ್ಟು ಕೊಟ್ಟು ಜನ ನಮಸ್ಕರಿಸಿ ಅರುಗಾಗುತ್ತಿದ್ದರು. ಅಜ್ಜಿಯ ಹಸನ್ಮುಖದಿಂದ ಹೊಮ್ಮಿದ ಪ್ರೇಮಪೂರಿತ ಅಮೃತವಾಣಿ ಅವರನ್ನು ತೃಪ್ತಿಗೊಳಿಸುತ್ತಿತ್ತು. ನಾನೂ ಹೋದೆ.

"ಅಜ್ಜಿ ನಾನು ಎಷ್ಟುಕೊಡಲಿ ನಿನಗೆ ದಕ್ಷಿಣೆ" ಎಂದು ನಗುತ್ತಾ ನಮಸ್ಕರಿಸಿದೆ.

"ದೀರ್ಘಾಯುಷ್ಯವಂತನಾಗಿ ಸಾರ್ಥಕಜೀವನವನ್ನು ಬಾಳು, ಅದೇ ನೀನು ನನಗೆ ಕೊಡಬೇಕಾದ ದಕ್ಷಿಣೆ" ಎಂದು ನಕ್ಕು, ನನ್ನ ಮುಖದ ಮೇಲೆ ಕೈ ಎಳೆದು 'ಲಟುಗೆ' ತೆಗೆದರು; ಚಿಕ್ಕಮಕ್ಕಳಿಗೆ ದೃಷ್ಟಿ ತೆಗೆಯುವಂತೆ. ಮೈಸೂರಿನ ದಸರಾ ನೋಡಿದ್ದರೂ ಅಂದಿನ ಆನಂದದ ತಿಲಾಂಶವಾದರೂ ಆಗುತ್ತಿತ್ತೆಂದು ನಾನು ಹೇಳಲಾರೆ.

ರಜಾ ಮುಗಿಯುತ್ತಾ ಬಂತು. ತೀರ್ಥಹಳ್ಳಿಗೆ ಹೊರಡುವ ದಿನಗಳು ಸಮೀಪಿಸಿದುವು. ನಾವು ಬಹುದಿನಗಳಿಂದ ಪ್ರಯತ್ನಿಸಿ ನಿಷ್ಫಲರಾಗಿದ್ದ ಒಂದು ವಿಷಯದಲ್ಲಿ ಈ ಸಾರಿ ಅದ್ಭುತವಿಜಯವುಂಟಾಯಿತು, ಚಿಕ್ಕಮ್ಮನವರ ಸ್ನೇಹ, ಸೌಹಾರ್ದಗಳಿಗೆ ಕಟ್ಟುಬಿದ್ದೋ ಅಥವಾ ಮತ್ತಾವ ಅಗೋಚರ ಶಕ್ತಿ ಕಾರಣವಾಯಿತೋ ಅಂತೂ ಅಜ್ಜಿ ತೀರ್ಥಹಳ್ಳಿಗೆ ಬರಲು ಒಪ್ಪಿದರು. 'ಊರನ್ನು ಬಿಟ್ಟು ಅತ್ತಿತ್ತ ಅಲುಗುವುದಿಲ್ಲ'ವೆಂದು ತನ್ನ ನಿರ್ಧಾರವನ್ನು ಹೇಳುತ್ತಿದ್ದ ಅಜ್ಜಿ ನಮ್ಮೊಡನೆ ಹೊರಟಿದ್ದು ಎಲ್ಲರನ್ನೂ ಬೆರಗುಗೊಳಿಸಿತು, ಮಕ್ಕಳಂತೆ ಎಚ್ಚರಿಕೆಯಿಂದ ಕರೆದುಕೊಂಡು ತೀರ್ಥಹಳ್ಳಿಯನ್ನು ಸೇರಿದೆವು.

ಅಜ್ಜಿಯ ವ್ಯಕ್ತಿತ್ವದ ಸಂಪೂರ್ಣ ಚಿತ್ರ ನನ್ನ ಚಿತ್ತಕ್ಕೆ ಅರಿವಾದುದು ಈಗಲೇ. ಅವರು ತೀರ್ಥಹಳ್ಳಿಯಲ್ಲಿದ್ದಷ್ಟುಕಾಲ ಜೀವನದಲ್ಲಿ ಚಿರಸ್ಮರಣೀಯವೆಂದು ನನಗೆ ಈಗೀಗ ಅನಿಸುತ್ತಿದೆ.

ಒಮ್ಮೊಮ್ಮೆ ತಮ್ಮ ಮನೆತನದ ಹಿಂದಿನ ಸ್ಥಿತಿಗತಿಗಳನ್ನೆಲ್ಲಾ ವರ್ಣಿಸುವರು. ಅವರು ಸಂಸಾರದಲ್ಲಿ ಬಹಳ ನೊಂದು, ಬೆಂದು, ಬಳಲಿ, ಒಂದು ಸ್ಥಿತಿಗೆ ಬಂದವರು. ತಮ್ಮ ವಯಸ್ಸಿನ ಚಿಕ್ಕತನದಲ್ಲಿ ಅವರು ಪಟ್ಟ ಕಷ್ಟಗಳನ್ನು ಕೇಳುತ್ತಿದ್ದರೆ ಎಂತಹವರಿಗೂ ರೋಮಾಂಚನವಾಗದೇ ಇರದು. ಚಿಕ್ಕಂದಿನಲ್ಲೇ ಪತಿವಿಹೀನೆಯಾದ ವಿಧವೆಯು ಬಡತನದ ಬಲುಗಡಲಿನಲ್ಲಿ ಮುಳುಗುತ್ತಾ, ತನ್ನ ಎರಡು ಮಕ್ಕಳನ್ನು ಸಾಕಿ ಸಲಹಲು ಎದುರಿಸಬೇಕಾದ ಸಾಹಸವು ರುದ್ರಮನೋಹರವಾದ ಸ್ವತಂತ್ರ

ಸ್ವಾರಸ್ಯ ಕಥಾವಸ್ತುವೇ ಆಗಬಹುದು. ಅವುಗಳನ್ನು ಎದುರಿಸಿ ಯಶಸ್ವಿಯಾದ ರೀತಿಯನ್ನು ಅವರು ವರ್ಣಿಸುತ್ತಿದ್ದರೆ ಆಶ್ಚರ್ಯದ ಜೊತೆಗೆ ಪೂಜ್ಯಬುದ್ಧಿಯುಂಟಾಗುತ್ತಿತ್ತು. ಈ ಕಷ್ಟಗಳ ಕುಲುಮೆಯಲ್ಲಿ ಬೆಂದು ಬೆಂದು ಚೊಕ್ಕ ಅಪರಂಜಿಯಾಗಿ ಕಂಗೊಳಿಸುತ್ತಿದ್ದರು.

ನಮ್ಮ ಮನೆಯಲ್ಲಿ ನಿಜಗುಣ ಶಿವಯೋಗಿಗಳ ಗ್ರಂಥ ಒಂದಿತ್ತು. 'ಅದನ್ನು ಓದು' ಎಂದು ಅಜ್ಜಿಯ ಬಲವಂತ.

"ಹೋಗಜ್ಜೀ, ಅದನ್ಯಾರು ಓತ್ತಾರೆ, ನಾದನಾಮಕ್ರಿಯೆ, ಅಂತಾ ಕ್ರಿಯೆ ಇಂತಾಕ್ರಿಯೆ, ಯಾರಿಗೆ ಬೇಕು ಆ ರಾಗ" ಎನ್ನುತ್ತಿದ್ದೆ.

"ಹಾಗಲ್ಲಪ್ಪಾ. ಇದೇ ನಮ್ಮ ಹಿರಿಯರ ಆಸ್ತಿ. ಬಾ ಇಲ್ಲಿ ರಾಗ ಮುಖ್ಯವಲ್ಲ; ಅಲ್ಲಿರುವುದು ರೋಗದ ಮದ್ದು."

"ರೋಗವಿದ್ದವರಿಗೆ ತಾನೇ ಮದ್ದು : ನನಗೇನೂ ರೋಗವಿಲ್ಲ; ಘಟ್ಟಿಮುಟ್ಟಾಗಿದ್ದೇನೆ" ಎಂದು ನಗುತ್ತಿದ್ದೆ.

"ದೇಹಕ್ಕೆ ಬರುವ ರೋಗವಲ್ಲ ಅದು, ಇರಲಿ. ಅದೆಲ್ಲ ಮುಂದೆ ನಿನಗೇ ತಿಳಿದೀತು, ನನಗೋಸ್ಕರವಾಗಿಯಾದರೂ ಈಗ ಓದು ಬಾ.

ಅಜ್ಜಿಯ ಸ್ನೇಹಬಂಧನಕ್ಕೆ ಕಟ್ಟುಬಿದ್ದು ಓದತೊಡಗದೆ ಬೇರೆ ಮಾರ್ಗವಿಲ್ಲವಾಗುತ್ತಿತ್ತು.

"ಶ್ರೀಗುರುವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕುತಿ"

ಎಂದು ಗುರುಸ್ತುತಿಯಿಂದ ಪ್ರಾರಂಭಿಸಿ ಗದ್ಯವೂ ಅಲ್ಲದ ಪದ್ಯವೂ ಅಲ್ಲದ ದಾಟಿಯಲ್ಲಿ ಓದುತ್ತಿದ್ದೆ. ಬರುಬರುತ್ತಾ ಸರಳವಾಗಿ ಓದುವುದನ್ನು ಕಲಿತೆ, ಓದಲು ತೊಡಗಿದೆನೆಂದರೆ ಅಜ್ಜಿಯ ಸ್ಥಿತಿಯೇ ಬೇರೆಯಾಗುತ್ತಿತ್ತು. ಕಣ್ಣುಗಳು ಆನಂದ ಬಾಷ್ಪಗಳಿಂದ ತುಂಬಿ ಕಂಠ ಗದ್ಗದಿಸ ತೊಡಗುತ್ತಿತ್ತು. ಮೈ ಮರೆತವರಂತಾಗುತ್ತಿದ್ದರು. ಅವರ ಅನಿರ್ವಚನೀಯವಾದ ಆನಂದಾನುಭವವನ್ನು ಕಂಡು ನಮಗೆಲ್ಲಾ ಹರ್ಷವಾಗುತ್ತಿತ್ತು.

ಅಜ್ಜಿಯ ಕಾಟಕ್ಕಾಗಿ ಮೊದಲು ಆ ಪುಸ್ತಕವನ್ನು ಹಿಡಿದರೂ ಮುಂದೆ, ಅದರ ಮಹತ್ವದ ಅರಿವುಂಟಾಯಿತು. ಆಧ್ಯಾತ್ಮರಂಗದಲ್ಲಿ ಅದಕ್ಕಿರುವ ಗೌರವ ಮನ್ನಣೆಗಳು ಮನವರಿಕೆಯಾದುವು.

ಮೊದಮೊದಲು ನಾನು ಓದುತ್ತಾ ಹೋದಂತೆ ಕೆಲವುಕಡೆ ತಪ್ಪುತ್ತಿದ್ದೆ. ಆಗ ಅಜ್ಜಿಯು ತಿದ್ದಿ ಹೇಳುತ್ತಿದ್ದುದು ನನಗೆ ಅತ್ಯಾಶ್ಚರ್ಯವನ್ನುಂಟುಮಾಡಿತ್ತು.

"ಅಜ್ಜಿ, ಇವನ್ನೆಲ್ಲಾ ನೀನು ಕಲಿತಿದ್ದೆಯೇನು?" ಒಮ್ಮೆ, ಕೇಳಿದೆ.

"ಏನೋ ಕೆಲವು ಕಲಿತಿದ್ದೆ."

"ಎಲ್ಲಿಯವರೆಗೆ ಓದಿದ್ದೆಯಜ್ಜಿ?" ಕುತೂಹಲದಿಂದ ಮತ್ತೆ ಪ್ರಶ್ನಿಸಿದೆ.

"ಎಲ್ಲಿಯವರೆಗೆ ಎಂದು ಹೇಳಲಿ? ಆಗೇನು ಈಗಿನ ಹಾಗೆ ಇತ್ತೇನು? ಯಾರಾದರೂ ಅಲ್ಲಲ್ಲಿ ಶಾಲೆ ಹಾಕಿಕೊಳ್ಳುತ್ತಿದ್ದರು. ನಮ್ಮ ಅಪ್ಪನೂ ಒಂದು ಹಳ್ಳಿಯಲ್ಲಿ ಶಾಲೆಹಾಕಿದ್ದ. ಅಲ್ಲೇ ನಾನು ಓದಲು ಕಲಿತದ್ದು. ಸಂಸಾರದಲ್ಲಿ ಕಾಲಿಟ್ಟಮೇಲೆ ಈ ಓದೇ ಸಾಕಾಯಿತು."

"ಹಾಗಾದರೆ ಈ ತತ್ವಗಳನ್ನೆಲ್ಲಾ ಯಾವಾಗ ಕಲಿತೆಯಜ್ಜಿ?"

"ಇವೆಲ್ಲಾ ನಮ್ಮ ಗುರುಗಳಿಂದ ಕಲಿತದ್ದು."

"ಗುರುಗಳು! ಅವರು ಯಾರಜ್ಜಿ ಗುರುಗಳು?" ಎಂದು ನಾನು ಆಶ್ಚರ್ಯದಿಂದ ಕೇಳಿದೆ.

ಯಾವುದೋ ಒಂದು ಭಾವತಲ್ಲೀನತೆಯಲ್ಲಿ ಅವರ ಮನಸ್ಸು ಲಯವಾಗುತ್ತಿರುವಂತೆ ಕಾಣಿಸಿತು. ಅನ್ಯಮನಸ್ಕರಾಗಿ 'ಓಂ' ಎಂದು ಉಚ್ಚರಿಸುತ್ತಾ ಕಣ್ಣನ್ನು ಮುಚ್ಚಿದರು. 'ಅಜ್ಜೀ' ಎಂದು ಕರೆದರೆ ಮಾತಿಲ್ಲ!

"ಅಜ್ಜೀ . . . ಅಜ್ಜೀ . . ."

ಸ್ಥಿರಮೌನವೇ ಮರುತ್ತರ.

ಇಂದ್ರಿಯವ್ಯಾಪಾರಗಳೆಲ್ಲಾ ಸ್ತಬ್ಧವಾಗಿ, ಅಲೌಕಿಕ ಪರಂಜ್ಯೋತಿ ಪ್ರಕಾಶದಲ್ಲಿ ಲೀನವಾದಂತೆ ತೋರಿತು. ಅಮೃತಸ್ನಿಗ್ಧ ಗಂಭೀರಶಾಂತಿ ಮುಖದಲ್ಲಿ ತಾಂಡವವಾಡುತ್ತಿತ್ತು. ಸ್ವಲ್ಪಹೊತ್ತು ಸುಮ್ಮನೆ ಕುಳಿತೆ. ಕ್ರಮೇಣ ಸ್ಮೃತಿ ಬರಲಾರಂಭಿಸಿತು. ಯಾವುದೋ ಲೋಕದಿಂದಿಳಿದವರಂತೆ ಮೆಲ್ಲನೆ ಕಣ್ಣುಗಳನ್ನು ತೆರೆಯುತ್ತಾ ಅರ್ಧನಿಮೀಲಿತ ನಯನರಾಗಿ ಹಾಡತೊಡಗಿದರು:

"ಗುರುದೇವ ನೀ ಮಾಡೀದುಪಕೃತಿಯನು ನಾನು
ಮರೆಯುವದೆಂದೆಂದಿಗಿಹದೊಳು."

ಪೊಡವಿಯೊಳಖಿಳ ವೇದಾಗಮ ಶಾಸ್ತ್ರವ
ಬಿಡದೆ ಸಾಧಿಸಿದ ವಾದಿಗಳೆಲ್ಲ |
ಪೊಡೆದಾಡಿಕಾಣದ ಪರತತ್ವವನು ನೀನು
ಪಿಡಿದೆನ್ನ ಕರಕೆ ಕೊಟ್ಟುದರಿಂದ ||೧||

ಕಂದಮೂಲಗಳ ಸೇವಿಸಿ ವಾಯುಗಳನೊತ್ತಿ,
ಬಂಧಿಸಿ ಪಂಚಾಗ್ನಿ ಮಧ್ಯದಿ |

ನಿಂದು ಯೋಗಿಗಳು ನೋಡುವ ಪರಬ್ರಹ್ಮವ,
ತಂದೆನ್ನ ಕಣ್ಗೆ ತೋರಿದರಿಂದ" ||೨||

ಇದನ್ನು ಇಷ್ಟಕ್ಕೇ ನಿಲ್ಲಿಸಿ ಇನ್ನೊಂದನ್ನು ಪ್ರಾರಂಭಿಸಿದರು. ರಾಗ, ಮೊದಲಿನದ ರಷ್ಟು ದೀರ್ಘವಾಗಿರಲಿಲ್ಲ :

"ಗುರುದೇವ ನೀನೋರ್ವ ನಿಜದೇವನೈ, ನಿಮ್ಮ,
ಚರಣದೊಳ್ ಬೆರೆಯದ ನರನೆ ಪಾಮರನೈ"
ತಿರುಕನಂದದಿ ಪುರಪುರಗಳ ತಿರುಗುತ್ತೆ,
ನರಳುವ ತರಳನ ಹರನ ಮೀರಿಸಿದೈ ||ಗುರುದೇವ||

ಕರಣವ ಕರಗಿಸಿ ಮರುಗಿದ ಮುನಿಗಳು
ಅರಸಿ ತಾವರಿಯದ ಪರಿಯ ತೋರಿಸಿದೈ ||ಗುರುದೇವ||

ಗುರುಶಂಕರಾರ್ಯನೆ ಕರುಣತೋರಲು ತಾನೆ
ಗುರುವೆಂಬ ನಾಮವ ಧರಿಸಿ ಬಂದಿಹನೈ ||ಗುರುದೇವ||

"ಇಂತಹವನು ಗುರು. ಅವನು ಯಾರಾದರೇನು? ಹೆಸರು ಕುಲಗೋತ್ರಗಳ ಕಟ್ಟೇ ಅವನಿಗೆ! ಸರ್ವವೂ ಅವನೇ"

ಈ ಮಾತುಗಳ ಅರ್ಥ ನನಗೆ ಸರಿಯಾಗಿ ಆಗಲಿಲ್ಲ. ಆದರೆ ಪುನಃ ಏನನ್ನೂ ಪ್ರಶ್ನಿಸಲಿಲ್ಲ.

ಭಾರತದ ವೈಶಿಷ್ಟ್ಯವಡಗಿರುವುದೇ ಇಂತಹ ವಿಶಿಷ್ಟ ವ್ಯಕ್ತಿಗಳ ಗುಪ್ತಜೀವನ ದಲ್ಲಿ. ವಿದ್ಯಾವಂತ ಪಂಡಿತರ ಮಾತು ಒಂದುಕಡೆ ಇರಲಿ, ಎಷ್ಟು ಜನ ನಿರಕ್ಷರಕುಕ್ಷಿ ಗಳು, ಸ್ತ್ರೀಪುರುಷರೆಂಬ ಭೇದವಿಲ್ಲದೆ ಈ ಪವಿತ್ರನಾಡಿನ ಆದರ್ಶ ಅಡಿಪಾಯದಿಂದ ಪರಿಪೋಷಿತರಾಗಿ ಮಾನವನ ಜೀವಿತದ ಚರಮಧ್ಯೇಯವನ್ನು ಸಾಧಿಸಿ, ತಮ್ಮ ಹುಟ್ಟನ್ನು ಸಾರ್ಥಕಪಡಿಸಿಕೊಂಡಿಲ್ಲ; ಎಷ್ಟುಜನ ಸಾಧಕರೂ ಸಿದ್ಧರೂ ವನಸುಮ ದಂತೆ ಗುಪ್ತವಾಗಿ ತಮ್ಮ ಪ್ರಭಾವವನ್ನು ಬೀರುತ್ತಿಲ್ಲ! ಯೋಗಿಗಳ ಯೋಗ ಭೂಮಿಯಾದ ಭಾರತಿಯು ಇದರಲ್ಲಂತೂ ಯಾರಿಗೂ ತಲೆತಗ್ಗಿಸುವ ಕಾರಣವಿಲ್ಲ.

ಅಜ್ಜಿಯೂ ಅಂತಹ ಸಿದ್ಧಜೀವಿಗಳಲ್ಲಿ ಒಂದೆಂಬುದನ್ನು ಅರಿತುಕೊಂಡೆ. ಆದರೆ ಹೊರಗಣ್ಣಿನಿಂದ ನೋಡುವವರಿಗೆ ಅಜ್ಜಿಯ ಮೀರಿದ ಸ್ಥಿತಿಯ ಅರಿವಾಗುತ್ತಿರಲಿಲ್ಲ. ಎಲ್ಲಾ ಪ್ರಾಪಂಚಿಕರಂತೆ ಸಂಸಾರದ ತೊಡಕನ್ನು ಲೇಪಿಸಿಕೊಂಡವರೆಂದೇ ತೋರು ತ್ತಿದ್ದರು. 'ನಿಜವರಿದ ಮಹಾಪುರುಷನು ತನ್ನ ಕುರುಹುದೋರದೆ, ತರ್ಕಿಸದೆ, ಸುಮ್ಮ ನೆಲ್ಲರ ಪರಿಯೊಳುಂಡುಟ್ಟು ಸಂಚರಿಪಸು' ಎಂಬ ಮಾತಿಗೆ ಜೀವಂತ ಸಾಕ್ಷಿಯಾಗಿ ದ್ದರು. ಅವರು ಕೆಸರಿನಲ್ಲಿದ್ದರೂ, ಕುಂಬಾರ ಹುಳುವಿನಂತಿದ್ದರೆಂಬುದು ಸೂಕ್ಷ್ಮ

ದೃಷ್ಟಿಯಿಂದ ಪರೀಕ್ಷಿಸಿದವರಿಗೆ ಮಾತ್ರ ತಿಳಿಯುತ್ತಿತ್ತು. ಕಮಲ ಹುಟ್ಟುವುದಾದರೂ ಕೆಸರಿನಲ್ಲಿಯೇ ಅಲ್ಲವೇ !

ಅಜ್ಜಿ ಹಿಂದಿನಿಂದಲೂ ಕಷ್ಟಪಟ್ಟ ಜೀವ. ದೇಹಬಲದಿಂದ ಮಿತಿಮೀರಿ ದುಡಿದ ಶ್ರಮಜೀವನದ ಪರಿಣಾಮದಿಂದಲೋ ಏನೋ, ಅವರಿಗೆ ಆಗಾಗ್ಗೆ ಒಂದು ಬಗೆಯಾದ ಉರಿಯುಂಟಾಗುತ್ತಿತ್ತು. ಆದರೆ ಅದನ್ನು ಪಿಟ್ಟೆನ್ನದೆ ಸಹಿಸುವ ಸಾಮರ್ಥ್ಯವೂ ಅದ್ಭುತವಾಗಿತ್ತು. ಉಪಚಾರಾದಿಗಳಿಗೆ ಬಾಯಿನೀರು ಕರೆಯುವುದು ಹಾಗಿರಲಿ, ಅವರ ಸೇವೆಯನ್ನು ಮಾಡಲು ಹೋದವರಿಗೆ ಉಂಟಾಗುತ್ತಿದ್ದುದು ನಿರಾಶೆಯೇ. "ಅನುಭವಿಸು. ನೀನು ಮಾಡಿದ್ದನ್ನು ನೀನು ಉಣ್ಣುವಿ" ಎಂದು ತನಗೆ ತಾನೆ ಹೇಳಿಕೊಳ್ಳುತ್ತಿದ್ದುದನ್ನು ನಾನೇ ಕೆಲವು ವೇಳೆ ಕೇಳಿದ್ದೇನೆ.

ವಯಸ್ಸು ಆಗಲೇ ಎಂಬತ್ತನ್ನು ಸಮೀಪಿಸುತ್ತಿತ್ತು. ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ. ತಲೆ ನಡಗುತ್ತಿತ್ತು. ಆದರೆ ಆಗಲೂ ಕೆಲಸಮಾಡುವುದರಲ್ಲಿ ಅವರಿಗಿರುವ ಉತ್ಸಾಹವನ್ನು ಕಂಡು ಈಗಿನ ನಡುಹರೆಯದ ತರುಣನೂ ನಾಚಿ ತಲೆ ತಗ್ಗಿಸಬೇಕು. ಸುಮ್ಮನೆ ಕುಳ್ಳಿರಿಸಬೇಕಾದರೆ ಬಹಳ ಕಷ್ಟಕ್ಕೆ ಬರುತ್ತಿತ್ತು. ಕುಳಿತು ತಿನ್ನುವುದು ದಂಡವೆಂದು ಅವರ ಭಾವನೆ. ಹಿಂದಿನ ನಮ್ಮ ಹಿರಿಯರು ನೆಮ್ಮದಿಯಿಂದಿದ್ದುದಕ್ಕೆ ಇರುವ ಕಾರಣಗಳಲ್ಲಿ ಅವರ ಈ ಗುಣವೂ ಒಂದಾಗಿರಬಹುದು. ಅಂತೂ ನಮ್ಮ ಪ್ರಯತ್ನವನ್ನು ಮೀರಿ ಕೆಲಸಮಾಡುವುದು ಸಾಧ್ಯವಾಗದೇ ಹೋದಾಗ ತನ್ನ ಹಿಂದಿನ ಪ್ರಿಯ ಕೈಗಾರಿಕಾ ಕೆಲಸವಾದ ಕೌದಿ ಹೊಲಿಯುವುದನ್ನಾದರೂ ಪ್ರಾರಂಭಿಸುವರೇ ಹೊರತು, ಸುಮ್ಮನೆ ಕುಳಿತುಕೊಳ್ಳುತ್ತಿರಲಿಲ್ಲ.

'ಕೌದಿ' ಎಂದರೆ ಹಳೆಯ ತುಂಡು ಬಟ್ಟೆಗಳನ್ನೆಲ್ಲಾ ಸೇರಿಸಿ ಹೊಲಿದು ಮಾಡುವ ಒಂದು ವಿಚಿತ್ರ ಸ್ವದೇಶೀ ರಗ್ಗು. ಎರಡು ಮಡಕೆಮಾಡಿ ಹಾಸಿದರೆ ಸಾಕು. ಸಣ್ಣಗಾದಿಯ ಮೇಲೆ ಮಲಗಿದಂತಾಗುತ್ತದೆ. ಮೊದಲೆಲ್ಲಾ ಇದನ್ನು ಹೊಲಿಯುವುದರಲ್ಲಿ ಅಜ್ಜಿಯದು ಎತ್ತಿದ ಕೈಯ್ಯೆ ಆಗಿದ್ದರೂ ಈಗೀಗ ಆ ಉದ್ಯಮವನ್ನು ವಯೋಧರ್ಮ ಸಹಜವಾದ ದೃಷ್ಟಿಮಾಂದ್ಯದಿಂದ, ಬಿಡಬೇಕಾಗಿ ಬಂದಿತ್ತು. ಹಿಂದಿನ ಆ ಕೈಕೆಲಸವನ್ನು ಪುನಃ ಕೈಕೊಂಡದ್ದನ್ನು ನೋಡಿ ಆಶ್ಚರ್ಯದಿಂದ ನಾನು :

"ಅಜ್ಜಿ, ನಿನಗೇನು ಹುಚ್ಚೇನು ! ಕಣ್ಣೇ ಕಾಣಲ್ಲ ಕೌದಿ ಹೊಲಿಬೇಕು ಅಂತಿ. ಕಂಡವರನ್ನು ಕಂಡು ಕೌದೀ ಹೊಲಿದರೆ ದಾಟುಹೊಲಿಗಿ ಬಿತ್ತು ಅನ್ನುವಂತೆ, ಯಾವಾಗಲೋ ಹೊಲದಿದ್ದೆ ಅಂತ ಈಗಲೂ ಹೊಲಿಯಾಕೆ ಹೋದರೆ ಕಾಟು ಹೊಲಿಗೆ ಬೀಳೋದು" ಎಂದು ಹಾಸ್ಯಮಾಡಿ ನಗುತ್ತಿದ್ದೆ.

ಆದರೆ ಅಜ್ಜಿ ಇದಕ್ಕೆಲ್ಲಾ ಬಗ್ಗುತ್ತಿರಲಿಲ್ಲ.

"ಜಾಣ ಜಾಣ ಬಾ ಇಲ್ಲಿ ಈ ಬಟ್ಟೆಗಳೆಲ್ಲಾ ಹಾಳಾಗಬೇಕು ಅಂತಿಯೇನು! ಇವನ್ನೆಲ್ಲಾ ಸುಮ್ಮನೇ ಹಾಳುಮಾಡ್ತೀರಿ. ಸೇರಿಸಿ ಒಂದು ಕೌದೀನಾರೂ ಹೊಲ್ದ್ರೆ...."

"ಹೊಲ್ದ್ರೆ.... ಏನು?" ನನ್ನ ಪ್ರಶ್ನೆ.

"ನಿನಗೆ ಹೊತ್ತುಗೊಳ್ಳಾಕೆ ಬರಲ್ವೇನು?"

"ಥೂ ಅದನ್ಯಾರು ಹೊದ್ದಾರು."

"ಸಣ್ಣವನಿದ್ದಾಗ, ಕೌದಿಹೊಚ್ಚಿದರೇ ನಿದ್ದೆಮಾಡೋದು ಅಂತ ಹಠಾ ಹಿಡಿತಿದ್ದಿ. ಈಗ ಕಿಸ್‌ಪಸ್ ಕಲ್ತೀದಿ ಇದೆಲ್ಲಾ ಯಾಕೆ ಸೇರೀತು" ಎಂದು ನಕ್ಕು ನಗಿಸಿದ್ದರು. ಕೊನೆಗೆ, ಬಟ್ಟೆಗಳನ್ನೆಲ್ಲಾ ಸರಿಯಾಗಿ ಜೋಡಿಸಿ ಸೂಜಿದಾರ ವನ್ನು ಸಿದ್ಧಪಡಿಸಿ ಕೊಡುವ ಭಾರ ನನ್ನನ್ನೇ ಸೇರಿತು. ಅಂತೂ ಕೌದಿ ಸಿದ್ಧವಾಯಿತು. ಅಡ್ಡಾದಿಡ್ಡಿಯಾದ ಆ ಕೌದಿಯನ್ನು ನೋಡಿ ನಾನಂತೂ ನಕ್ಕಿದ್ದೇ ನಕ್ಕಿದ್ದು.

ತೆರೆಯಮೇಲೆ ಸರಸರನೆ ಸರಿಯುವ ಚಿತ್ರಪಟದಂತೆ ಚಿತ್ತಭಿತ್ತಿಯ ಮೇಲೆ ಈ ಎಲ್ಲಾ ಚಿತ್ರಗಳೂ ಸುಳಿಸುಳಿದು ಮಾಯವಾದುವು. ಕೆಲವು ಸ್ಪಷ್ಟ, ಕೆಲವು ಅಸ್ಪಷ್ಟ. ಕೆಲವಂತೂ ತೀರಾ ಮಬ್ಬು ಮಬ್ಬು. ಕೌದಿಯನ್ನು ಹೊಲಿಯುತ್ತಿರುವ ಈ ಕೊನೆಯ ಚಿತ್ರವನ್ನು ಕಾಣುತ್ತಿರುವಂತೆಯೇ ಇಂತಹ ಸ್ಥಿತಿಯಲ್ಲೂ ನನಗೆ ನಗು ಬರದಿರಲಿಲ್ಲ. ಎದ್ದು ಒಳಗೆ ಹೋದೆ. ಹಾಸಿಗೆಗಳನ್ನೆಲ್ಲಾ ಹುಡುಕಿದೆ; ಮೂಲೆಯಲ್ಲಿ ಬಿದ್ದಿದ್ದ ಕೌದಿ ಕಣ್ಣಿಗೆ ಬಿತ್ತು; ಹೊರಗೆ ತೆಗೆದೆ. ಅಜ್ಜಿಯ ಪೂರ್ಣ ಪ್ರತಿಬಿಂಬಯುತ ಚಿತ್ರವನ್ನೇ ತೆಗೆದಂತಾಯಿತು. ಅಜ್ಜಿಯ ಜೀವನದ ಕೊನೆಯ ಕೌದಿ ಇದೇ ಹೌದು. ಎತ್ತಿ ಕಣ್ಣೊತ್ತಿಕೊಂಡೆ.

ಅಷ್ಟರಲ್ಲಿ ಮುರುಗೇಂದ್ರಪ್ಪನವರು ಕರೆಯುತ್ತಾ ಒಳಗೆ ಬಂದರು.

"ಬನ್ನಿ ಸಾರ್" ಎನ್ನುತ್ತಾ ಹೊರಗೆ ಬಂದೆ.

"ಎಲ್ಲರೂ ಊರಿಗೆ ಹೋದರಂತೆ?"

"ಹೌದು ಸಾರ್. ನಮ್ಮಜ್ಜಿಗೆ ಖಾಹಿಲೆಯೆಂದು ಟೆಲಿಗ್ರಾಂ ಬಂತಂತೆ, ಹೊರಟು ಹೋದರು. ನಾನು ಕ್ಲಾಸಿನಿಂದ ಬರುವಷ್ಟರಲ್ಲಿ ಹೊರಟೇಬಿಟ್ಟಿದ್ದರು. ದಾರಿಯಲ್ಲೆ ಬಸ್ಸಿನಲ್ಲಿ ಅವರನ್ನು ಕಂಡೆ" ಎಂದು ದುಗುಡವನ್ನು ತೋರ್ಪಡಿಸದೆ, ಸಮಾಧಾನ ಚಿತ್ತನಾಗಿರುವಂತೆ ನಟಿಸಿದೆ.

"ಪಾಪ ವಯಸ್ಸಾಗಿತ್ತು. ಏನಾಗುತ್ತದೋ" ಅನುಕಂಪದಿಂದ ನುಡಿದರು. ನಾನು ನೀರವವಾದ ಉತ್ತರವನ್ನಿತ್ತೆ.

"ಅದನ್ನೇನೂ ಯೋಚಿಸಬೇಡ. ಪರೀಕ್ಷೆ ಹತ್ತಿರಬಂತು. ಅದರಲ್ಲೂ ಪಬ್ಲಿಕ್ ಪರೀಕ್ಷೆ, ಆದರ ಕಡೆ ಲಕ್ಷ್ಯವಿರಲಿ."

ಇದಕ್ಕೂ ನನ್ನ ಮೌನವೇ ಮರುತ್ತರವಾಯಿತು. ಅಷ್ಟರಲ್ಲಿ ಅವರೇ "ಪೇಟೆ ಕಡೆ ಹೋಗಿಬರುತ್ತೇನೆ. ರಾತ್ರಿ ಜೊತೆಯಲ್ಲೇ ಊಟಮಾಡೋಣ ಆ್ಞಂ?"

ಹ್ಞೂಂ ಎಂದೆ. ಹೊರಟುಹೋದರು.

ಸೂರ್ಯನು ಆಗಲೇ ಪಡುವಣಾದ್ರಿಯನ್ನು ಸಮೀಪಿಸುತ್ತಿದ್ದ "ಓ ಎಷ್ಟು ಹೊತ್ತು ಕುಳಿತುಬಿಟ್ಟಿದ್ದೇನೆ" ಎನ್ನುವ ಉದ್ಗಾರ ನಾನರಿಯದಂತೆಯೇ ಹೊರಬಿತ್ತು. ಪ್ರಕೃತಿಗೂ ನನ್ನ ದುಃಖದ ಕೆಲವು ಭಾಗವನ್ನಿತ್ತು ಹೃದಯದ ಭಾರವನ್ನು ಕಡಮೆ ಮಾಡಿಕೊಂಡು ಬರಲು ಹೊರಟೆ.

ಮೂರು ನಾಲ್ಕು ದಿನಗಳು ಹೇಗೆ ಕಳೆದುವೋ ತಂದೆಯವರು ಹೋಗಿ ಎಷ್ಟೋ ದಿನಗಳಾದಂತಾಗಿ, ಅವರಮೇಲೆ ಬಹಳ ಕೋಪ ಬಂದುಬಿಟ್ಟಿತ್ತು. "ಹೋದವರು ಕೂಡಲೇ ಒಂದು ಪತ್ರವನ್ನು ಬರೆಯಬಾರದೇ" ಎನ್ನುತ್ತಾ ಆರೇಳು ರಾತ್ರಿಗಳನ್ನು ಹೊಯ್ದಾಟದಲ್ಲೇ ಕಳೆದೆ. ಕೊನೆಗೊಮ್ಮೆ ಪತ್ರ ಅಲ್ಲಿನ ಸಮಾಚಾರವನ್ನು ಹೊತ್ತು ತಂದಿತು. ಆತುರಾತುರವಾಗಿ ಓದತೊಡಗುತ್ತಿದ್ದಂತೆಯೇ ಎದೆ ದಸಕ್ಕೆಂತು. ಪತ್ರವು ಬಹಳ ಸಂಕ್ಷಿಪ್ತ.

"ನಾವು ಇಲ್ಲಿಗೆ ಬರುವ ವೇಳೆಗೆ ಅಜ್ಜಿ, ಶಿವಾಧೀನರಾಗಿ ಸ್ವಲ್ಪ ಹೊತ್ತಾಗಿತ್ತು. ಯತ್ನವಿಲ್ಲ. ಅವರ ಕೈಲಾಸ ಸಮಾರಾಧನೆಗಾಗಿ ಒಂದು ದಿನದ ಮಟ್ಟಿಗೆ ಈ ಪತ್ರ ತಲುಪಿದ ಕೂಡಲೇ ಬಾ."

ಮನಸ್ಸಿನ ಅಂತರಾಳದಲ್ಲಿ ಅಳುಕುತ್ತಿದ್ದ ಊಹೆಯೇ ನಿಜವಾಗಬೇಕೇ. "ಆಜ್ಜೀ ನಿನ್ನ ಕೊನೆಯ ದರ್ಶನ ನನಗೆ ಅಂತೂ ಸಿಕ್ಕಲಿಲ್ಲ" ಎಂದು ವಾಯು ಮಂಡಲವನ್ನು ಬಿಸಿಮಾಡುತ್ತಾ, ಕೈಗೆ ಸಿಕ್ಕಿದ ನನ್ನ ಕೆಲವು ಬಟ್ಟೆಗಳನ್ನು ಕೈಚೀಲದಲ್ಲಿ ತುರುಕತೊಡಗಿದೆ. ಮುರುಗೇಂದ್ರಪ್ಪನವರು ಮನೆಯಲ್ಲಿರಲಿಲ್ಲ. ಅವರ ಪತ್ನಿಯವರ ಸಂತಾಪ ಇನ್ನೂ ವ್ಯಕ್ತಗೊಳ್ಳುತ್ತಿದ್ದಂತೆಯೇ, ಅವರ ಅಪ್ಪಣೆಯನ್ನು ಪಡೆದು ಬಸ್ ನಿಲ್ದಾಣದ ಕಡೆಗೆ ಮೊಗವಿಟ್ಟೆದ್ದೆ.

"ಥೂ ಎಷ್ಟು ನಿಧಾನ ಈ ಬಸ್ಸುಗಳು ಓಡುವುದು!" ಎಂದು ಆತುರಗೊಳ್ಳುತ್ತಿತ್ತು, ಪ್ರಪಂಚದಲ್ಲೆಲ್ಲಾ ಏಕಮಾತ್ರ ವೇಗತಮವಾದ ಮನಸ್ಸು. ನನ್ನ ಶಾಪಗಳೆಲ್ಲವೂ ಫಲಕಾರಿಯಾಗುವ ಸಾಮರ್ಥ್ಯವನ್ನು ಹೊಂದಿದ್ದರೆ, 'ಡ್ರೈವರ'ಸಂತೂ ಉಳಿಯುತ್ತಿರಲಿಲ್ಲ. ಮಧ್ಯೆ ಮಧ್ಯೆ ಬಸ್ಸು ನಿಲ್ಲಿಸಿ ಹತ್ತುವ, ಇಳಿಯುವ, ಜನರಿಗೇನೂ ಕಡಮೆಯಿರಲಿಲ್ಲ. "ಇವರಿಗೇನು ಕೆಲಸ ನಿತ್ಯ ಹೀಗೆ ತಿರುಗುವುದಕ್ಕೆ" ಎಂದು

ಯೋಚಿಸುವುದಕ್ಕೂ ಹಿಂಜರಿಯಲಿಲ್ಲ. ಶಿವಮೊಗ್ಗಾದಲ್ಲಿ ಕಾಯಬೇಕಾದ ಒಂದೆರಡು ಗಂಟೆಗಳಂತೂ ಒಂದೆರಡು ದಿನಗಳೇ ಆದುವು.

'ಎಷ್ಟುಬೇಗ ತಲುಪಿದರೇನು? ಅಜ್ಜಿಯದೇಹ ಮಣ್ಣಿನೊಡನೆ ಮಣ್ಣಾಗಿ ಹಲವು ದಿನಗಳಾಗಿಲ್ಲವೆ? ಏಕಿಷ್ಟು ಆತುರ?' ಆದರೆ ಮನಸ್ಸಿನ ಬಯಕೆಗಳಿಗೆಲ್ಲಾ ಕಾರಣವನ್ನು ಯಾರು ಹೇಳಬೇಕು. ಅಂತೂ ಅದು, ಯಾವಾಗ ಊರನ್ನು ಸೇರಿಯೇನು? ಯಾವಾಗ ಎಲ್ಲರ ಭಾವಗಳಲ್ಲಿ ಭಾಗಿಯಾದೇನು? ಎಂದು ಕಾತರವಾಗಿತ್ತು.

ಸಾಯಂಕಾಲದ ವೇಳೆಗೆ ಊರನ್ನು ಸೇರಿದೆ; ದುಃಖ ವಿನಿಮಯವಾಯಿತು. ಎಲ್ಲರೂ ಅಜ್ಜಿಯ ಮರಣದ ಕೊನೆಯ ವೇಳೆಯ ವೈಚಿತ್ರ್ಯವನ್ನು ವರ್ಣಿಸುವವರೇ. ಅವರೆಲ್ಲಾ ಸ್ವಾರ್ಥಿಗಳಂತೆ ನನಗೆ ತೋರಿದರು.

ಅಜ್ಜಿ, ಮರಣಕ್ಕೆ ಎರಡು ಮೂರುದಿನ ಮುಂಚಿನಿಂದಲೇ ಏನೋ ಒಂದು ರೀತಿ ಅಸ್ವಮನಸ್ಕರಾಗಿರುತ್ತಿದ್ದರು. ಆದರೆ ಹಿಂದಿನ ದಿನ ತಮಗೆ ಪ್ರಿಯರಾದವರನ್ನೆಲ್ಲಾ ಹತ್ತಿರ ಕರೆದು ಎಲ್ಲರನ್ನೂ ಹಿತವಚನಗಳಿಂದ ಸಂತೈಸಿದರು. ಬರುಬರುತ್ತಾ ಸ್ಥಿತಿ ಬದಲಾಯಿಸುತ್ತಿರುವಂತೆ ಕಾಣಬಂತು. ದೇವೋನ್ಮತ್ತ ಸ್ಥಿತಿಯಲ್ಲಿ ಆಗಾಗ್ಗೆ ತಮ್ಮಷ್ಟಕ್ಕೆ ತಾವೇ ಮಾತನಾಡುವುದು, ಬಡಬಡಿಸುವುದು ಪ್ರಾರಂಭವಾಯಿತು.

ಅಜ್ಜಿಗೆ, ಮಹಿಳಾಭಕ್ತರ ತಂಡ ಕಡಮೆಯಾಗಿರಲಿಲ್ಲ. ನಮ್ಮೂರಿನ ಕುರುಬರ ಹಿರಿಯ ಹೆಂಗಸರಂತೂ ಅಜ್ಜಿಯ ಪರಮಭಕ್ತರು. ಅವರ ಗೃಹಕೃತ್ಯ ವ್ಯಾಜ್ಯಗಳ ಹೈ ಕೋರ್ಟು ತೀರ್ಪೆಂದರೆ ಅಜ್ಜಿಯ ಸನ್ನಿಧಿ. ಅಂತಹವರೆಲ್ಲಾ ಈಗ ಅಜ್ಜಿಯ ಬಳಿ ಮುತ್ತಿಕೊಳ್ಳದೆ ಬಿಟ್ಟಾರೆ? ರಾತ್ರಿ ಬಹಳಹೊತ್ತು ಅಜ್ಜಿಯ ಬಯಕೆಯಂತೆ ಪುರಾಣ—ಪಠಣವಾಯಿತು. ಎಲ್ಲರನ್ನೂ ಹಸನ್ಮುಖರಾಗಿ ಬೀಳ್ಕೊಟ್ಟರು. ನಚ್ಚಿನ ಭಕ್ತೆ ಕರಿಯಮ್ಮನಿಗೆ ಮಾತ್ರ ಅಜ್ಜಿಯ ಬಳಿಯಲ್ಲೇ ಉಳಿದುಕೊಳ್ಳುವ ಅವಕಾಶ ಸಿಕ್ಕಿತು. ರಾತ್ರಿ ಅವರೆಲ್ಲಾ ಮಲಗಿದಾಗ ಬಹಳ ಹೊತ್ತಾಗಿತ್ತು.

ಆದಿನ ಮಧ್ಯಾಹ್ನವೇ ಮಾವನವರಿಗೆ ಯಾಕೋ ಅನುಮಾನಬಂದು "ಅಜ್ಜೀ ತೀರ್ಥಹಳ್ಳಿಗೆ ಟೆಲಿಗ್ರಾಂ ಮಾಡಲೇನು" ಎಂದರು.

"ಬೇಡಪ್ಪಾ ಈಗೇತಕ್ಕೆ ಮಾಡುತ್ತೀ, ಸುಮ್ಮನೇ ಓಡಿಬರುತ್ತಾರೆ. ಅಲ್ಲದೆ ಹುಡುಗನ ಪರೀಕ್ಷೆಯೂ ಹತ್ತಿರ ಬಂದಿರಬೇಕು. ಅವರಿಗೇಕೆ ತೊಂದರೆ!"

ಆದರೂ ಮಾವನವರ ಮನಸ್ಸು ತಡೆಯಲಾರದೆ, ಹೋದವರೇ ತೀರ್ಥಹಳ್ಳಿಗೆ ಟೆಲಿಗ್ರಾಂ ಮಾಡಿಯೇ ಬಿಟ್ಟರು.

ಟೆಲಿಗ್ರಾಂ ಮುಟ್ಟಿದ ಕೂಡಲೇ ತಂದೆಯವರಿಗೆ ತೀರ್ಥಹಳ್ಳಿಯಿಂದಲೇನೋ ಹೊರಡುವುದಕ್ಕೆ ಸಾಧ್ಯವಾಯಿತು. ಆದರೆ ಶಿವಮೊಗ್ಗಾದಲ್ಲಿ ಅವರು ಬಹಳಹೊತ್ತು ಕಾಯಬೇಕಾಯಿತು. ಇವರ ದುರದೃಷ್ಟ ಅಷ್ಟಕ್ಕೆ ನಿಲ್ಲಲಿಲ್ಲ; ರಾತ್ರಿ ಒಂಬತ್ತು ಗಂಟೆಗೆ ಶಿವಮೊಗ್ಗಾವನ್ನು ಬಿಟ್ಟ ಬಸ್ಸು ಅರ್ಧದಾರಿಯಲ್ಲಿ ಬಂದು ಕೆಟ್ಟು ನಿಂತು ಬಿಡಬೇಕೇ! ಅಂತೂ ಅದು ರಿಪೇರಿಯಾಗಿ ಊರನ್ನು ಸೇರುವ ವೇಳೆಗೆ "ಜುಮು ಜುಮು" ಬೆಳಕು ಹರಿಯುತ್ತಿತ್ತು. ಇವರು ಹೋಗಿ ಕರೆದನಂತರವೇ ರಾತ್ರಿಯೆಲ್ಲಾ ಪುರಾಣಶ್ರವಣಮಾಡಿ ಮಲಗಿದವರಿಗೆ ಎಚ್ಚರು. "ಈಗ ಬಂದಿರಾ?" "ಯಾವಾಗ ಹೊರಟಿದ್ದಿರಿ" ಇಷ್ಟುಹೊತ್ತಿಗೇ ಯಾವ ಬಸ್ಸು ಬಂತು?" ಎಂದು ಎಲ್ಲರೂ ಮುತ್ತಿ ಕೊಂಡರು.

"ಅಯ್ಯೋ ನಾವು ನಿನ್ನೆ ಮಧ್ಯಾಹ್ನ ನಿಮ್ಮ ಟೆಲಿಗ್ರಾಂ ಬಂದಕೂಡಲೇ ಹೊರಟವರು ಆದರೆ . . ." ಎಂದು ನಡೆದುದೆಲ್ಲವನ್ನೂ ತಿಳಿಸುತ್ತಾ ಅಜ್ಜಿಯ ಬಳಿಗೈದಿದರು. "ಈಗ ಮಲಗಿರಬೇಕು" ಎಂದು ಯಾರೋ ಹೇಳಿದರು. ಆದರೆ ಚಿಕ್ಕಮ್ಮನವರಿಗೆ ಬಹಳಹೊತ್ತು ತಡೆಯಲಾಗಲಿಲ್ಲ. ಮೆಲ್ಲನೆ ಹತ್ತಿರ ಹೋಗಿ "ಅಮ್ಮಾ ಅಮ್ಮಾ" ಎನ್ನುತ್ತಾ ಹೊದಿಕೆಯನ್ನು ಓಸರಿಸಿದರು. ಇನ್ನೊಮ್ಮೆ ಅದೇ ಕೂಗೇ "ಅಮ್ಮಾ!!!" ಎಂದು ಗಟ್ಟಿಯಾಗಿ ಹೊರಬಿತ್ತು.

"ಬನ್ನಿ ವಸ್ತು ಹೊರಟುಹೋಗಿದೆ."

"ಓಂ?" "ಏನು?" "ಅಯ್ಯೋ?" ಎನ್ನುವ ಉದ್ಗಾರಗಳೊಡನೆ ಎಲ್ಲರೂ ಓಡಿಬಂದರು. ಅಷ್ಟರಲ್ಲಿ ಚಿಕ್ಕಮ್ಮನವರು ಬಾಯಲ್ಲಿ ನೀರು ಬಿಟ್ಟಿದ್ದರು. ಒಂದು ಗುಟುಕೇನಾದರೂ ಒಳಗೆ ಹೋಗಿರಬೇಕು; ಆ ವೇಳೆಗೆ ಎಲ್ಲಾ ಮುಕ್ತಾಯ ವಾಗಿತ್ತು. ದುಃಖಪ್ರವಾಹ ಎಲ್ಲರನ್ನೂ ಮುಚ್ಚಿತು.

ಮುಂದಿನ ಕೆಲಸಕಾರ್ಯಗಳು ನಡೆಯುವುದಕ್ಕೆ ತಡವಾಗಲಿಲ್ಲ. ಮಹಾ ತಪಸ್ವಿಗಳಾದ ಯೋಗಿಶ್ರೇಷ್ಠರೊಬ್ಬರು ಅನಿರೀಕ್ಷಿತವಾಗಿ ಪಾದಪೂಜೆಗೆ ಒದಗಿ ದುದು ಸಮುದ್ರದ ಬಳಿಗೆ ಸಮುದ್ರವೇ ಬಂದಂತಿತ್ತು. ಕೈವಲ್ಯದಲ್ಲಿರಿಸಲ್ಪಟ್ಟಿದ್ದ ದೇಹ ಬಹಳ ವಿಜೃಂಭಣೆಯಿಂದ ಮುಂದುವರಿದು ಯೋಗ್ಯಸ್ಥಳದಲ್ಲಿ ಭೂಗತವಾಯಿತು.

"ಮುದುಕಿ ಪುಣ್ಯವಂತೆ ಇಷ್ಟುಜನರ ಹೃದಯವನ್ನು ಸೂರೆಗೊಳ್ಳುವುದು ಸಾಮಾನ್ಯವೇ" ಎನ್ನುವ ಉದ್ಗಾರ ಎಲ್ಲರಿಂದಲೂ ಹೊರಬಿತ್ತು.

ಈ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ, ವಿವರವಿವರವಾಗಿ, ತಿಳಿದು ಕೊಂಡೆ. ಸಾರ್ಥಕವಾದ ತುಂಬುಜೀವನವನ್ನು ಬಾಳಿದವರ ಮರಣಕ್ಕಾಗಿ ದುಃಖಿಸುವುದರಲ್ಲಿ ಅರ್ಥವೇನೂ ಇಲ್ಲ. ಆದರೂ ನನ್ನ ಮನಸ್ಸು ವಿವರಿಸಲಾರದ

ಒಂದು ವ್ಯಾಕುಲತೆಯಿಂದ ವ್ಯಾಪ್ತವಾಗಿತ್ತು. ಅಜ್ಜಿಯನ್ನು ನಾನು ಕೊನೆಯಬಾರಿ ನೋಡಿದುದರ ಚಿತ್ರ ಕಣ್ಣೆದುರು ಸುಳಿಯುತ್ತಿತ್ತು. ತೀರ್ಥಹಳ್ಳಿಯಿಂದ ಹೊರಡುವಾಗ "ಬೇಸಿಗೆ ರಜಾಕ್ಕೆ ಬಾ. ಇವರು ಬರದೇ ಇದ್ದರೂ ನೀನು ಮಾತ್ರಾ ತಪ್ಪಬೇಡ" ಎಂದಿದ್ದರು. ಆದರೆ ಅದೇ ಅವರ ಬಾಯಿಂದ ಕೇಳುವ ಕೊನೆಯ ಮಾತೆಂದು ನಾನೇನು ಬಲ್ಲೆ :

ಅಂತೂ ಕೈಲಾಸ ಸಮಾರಾಧನೆಯನ್ನು ಮುಗಿಸಿಕೊಂಡು ತೀರ್ಥಹಳ್ಳಿಗೆ ಮರಳಿದೆವು. 'ಈ ಪರೀಕ್ಷೆಯ ದೆಸೆಯಿಂದಲೇ ಅಜ್ಜಿಯ ದೇಹದರ್ಶನವಾದರೂ ನನಗೆ ಸಿಕ್ಕಲಿಲ್ಲ' ಎಂಬ ಭಾವನೆ ಪರೀಕ್ಷೆಯಲ್ಲಿ ಉತ್ತರ ಬರೆಯುತ್ತಿರುವಾಗ ಒಮ್ಮೊಮ್ಮೆ ಕರುಳನ್ನು ಕಚ್ಚುತ್ತಿತ್ತು. ಆದರೆ ಆ ನೋವು ನನ್ನನ್ನು ವಿಮುಖನನ್ನಾಗಿ ಮಾಡದೇ ಉತ್ಸಾಹವನ್ನು ಉಕ್ಕಿಸುತ್ತಿತ್ತು. ಇದರಲ್ಲಿ ನಾನು ಯಶಸ್ವಿಯಾದಷ್ಟೂ ಅಜ್ಜಿಯ ಆತ್ಮ, ಆನಂದಹೊಂದಬಹುದೆಂಬ ನಂಬುಗೆಯೇ ಅದಕ್ಕೆ ಕಾರಣ. ಇದು ತಲೆಬುಡವಿಲ್ಲದ ಕುರುಡುನಂಬುಗೆ ಎಂದು ಹಾಸ್ಯಮಾಡಬಹುದು. ಅದರಿಂದ ಭಾದಕವೇನೂ ಇಲ್ಲ.

ಅಜ್ಜಿಯವರು ಬಹಿರ್ದೃಷ್ಟಿಗೆ ಮರೆಯಾಗಿ ನಾಲ್ಕೈದು ವರ್ಷಗಳು ಸಂದಿವೆ. ಕಾಲಚಕ್ರವು ಮುಂದೂ ವರ್ಷಗಳ ಮೇಲೆ ವರ್ಷಗಳನ್ನುರುಳಿಸುತ್ತಾ ಹೋಗುತ್ತದೆ. ಪರಂಪರಾಗತವಾದ ಈ ಅವ್ಯಾಹತ ಸೃಷ್ಟಿಚಕ್ರದ ಕೀಲು ಯಾರ ಸಾವಿನಿಂದಲೂ ತಪ್ಪುವಂತಿಲ್ಲ. ಅಜ್ಜಿಯಂತಹ ಜೀವವು ಜನ್ಮವೆತ್ತು ತನ್ನ ಬಾಳಿನ ಪರಿಮಳದಿಂದ ಹಲವಾರು ಹೃದಯಗಳನ್ನು ತಣಿಸಿದುದು, ಮಾನವಜೀವನದ ಇತಿಹಾಸದಲ್ಲಿ ಅಳಿಸಿ ಹೋಗಬಹುದು. ಆದರೆ ಸಾರ್ಥಕಜೀವಗಳ ದೈವೀಪಟ್ಟಿಯಲ್ಲಿ ಅವರ ಹೆಸರು ಅಮರವಾಗಿರುವುದರಲ್ಲಿ ಸಂದೇಹವಿಲ್ಲ.

ಅವರ ಬಾಳು, ಜನರನ್ನು ಬೇಸರಿಸಿಯಾದರೂ ತನ್ನ ಇರವನ್ನು ಸೂಚಿಸಲೆತ್ನಿಸುವ ಬುಡುಬುಡುಕೆಯ ಉನ್ಮಾದನಾದವಾಗಿರಲಿಲ್ಲ. ಹೃದಯದ ತಂತಿಗಳನ್ನು ಮಿಡಿದು ಗುಪ್ತವಾಗಿದ್ದ ಸಪ್ತಸ್ವರಗಳನ್ನೆಬ್ಬಿಸುವ ಮಧುರ, ವೀಣಾವಾದನವಾಗಿತ್ತು. ಬಹುದೂರ ಅದು ಕೇಳದು. ಆದರೆ ಅದರ ಸವಿಯುಂಡವರು ಅದನ್ನು ಬಿಟ್ಟಲುಗರು ; ಎಂದೂ ಮರೆಯರು.

ತನ್ನ ಹೆಸರು ಶಾಶ್ವತವಾಗಿ ನಿಲ್ಲುವಂತೆ ಗುರುತೊಂದನ್ನು ಬಿಟ್ಟು ಹೋಗಬೇಕೆಂದು ಪ್ರತಿಯೊಬ್ಬ ಮಾನವನೂ ಬಯಸುತ್ತಾನೆ. ಜನಗಳ ನೆನಹಿನ ಮೂರ್ತಿಯಾಗಿ ಮೆರೆಯಬೇಕೆಂಬುದೇ ಜೀವನೋತ್ಸಾಹಕ್ಕೆ ಕಾರಣವಾದ ಅಂತರ್ಯದ ಆಕಾಂಕ್ಷೆ. "As you have come to this world, leave some mark behind"

ಎಂದು ವಿವೇಕಾನಂದರೂ ಹೇಳುತ್ತಾರೆ. ಆದರೆ ಅಜ್ಜಿಯ ಜೀವನದ ಪಲ್ಲವಿಯೇ ಬೇರೆಯಾಗಿತ್ತು. "ನನ್ನ ನಂತರ ನನ್ನ ಗುರುತು, ಈ ಪ್ರಪಂಚದಲ್ಲಿ ಏನೂ ಇರಬಾರದು" ಎಂದು ಹೇಳುತ್ತಿದ್ದುದನ್ನು ಲೆಕ್ಕವಿಲ್ಲದಷ್ಟು ಸಲ ಕೇಳಿದ್ದೇನೆ. ತೀರ್ಥಹಳ್ಳಿಯಲ್ಲಿದ್ದಾಗ ಒಮ್ಮೆ : "ಅಜ್ಜೀ ನಿನ್ನ ಫೋಟೋ ತೆಗಿಸಬೇಕಜ್ಜಿ" ಎಂದೆ.

"ಬೇಡಪ್ಪ. ನನ್ನ ಫೋಟೋ ಗೀಟೋ ಯಾವುದೂ ಇರಕೂಡದು" ಎಂದು ನಿಷೇಧಿಸಿದರು. ಅಷ್ಟಕ್ಕೇ ನಾನು ಸುಮ್ಮನಾಗದೆ 'ಫೋಟೋಗ್ರಾಫರ'ನನ್ನು ಕರೆದುಕೊಂಡೇ ಬಂದೆ. ಅಜ್ಜಿಗೆ ಎಲ್ಲಿತ್ತೊ ಸಿಟ್ಟು ಬಂದುಬಿಟ್ಟಿತು. ಬೈದು ಗಲಾಟೆ ಯೆಬ್ಬಿಸಿ ತೀವ್ರವಾಗಿ ವಿರೋಧಿಸಿಬಿಟ್ಟರು. ನಮ್ಮ ಮುಖವನ್ನೇ ಕಂಡು ನಲಿಯಲು ಬಹು ಚಪಲರಾದ ನಾವೇ ಫೋಟೊ ತೆಗೆಸಿಕೊಂಡು ಆತನನ್ನು ಸಾಗುಹಾಕ ಬೇಕಾಯಿತು. ಶವಸಂಸ್ಕಾರ ಸಮಯದಲ್ಲಿ ಮೆರವಣಿಗೆಗೆ ಸಿದ್ಧಮಾಡಿ ಕುಳ್ಳಿರಿಸಿ ದಾಗ, ಯಾರಿಗೂ ಬಾರದ ಈ ಯೋಚನೆ ನನ್ನ ಚಿಕ್ಕ ತಂಗಿಗೆ ಬಂದಿತ್ತಂತೆ; "ಅವ್ವಾ ಅಜ್ಜಿಯ ಫೋಟೋ ಈಗ ತೆಗೆದುಕೊಂಡಿದ್ದರೆ ಚನ್ನಾಗಿತ್ತು" ಎಂದು ಎರಡು ಮೂರುಸಾರಿ ಹೇಳಿದರೂ ಆ ಗಲಾಟೆಯಲ್ಲಿ ಯಾರ ಕಿವಿಗೆ ಬೀಳಬೇಕು! ಅದೂ ಅಲ್ಲದೆ ಅಜ್ಜಿಯ ಬಯಕೆಯನ್ನು ಮೀರಲಾರದ ಒಂದು ಶಕ್ತಿ ಅವರನ್ನು ಮಂಕುಗೊಳಿಸಿರಬೇಕು.

ಅಂತೂ ಸ್ಥೂಲವಾದ ವಸ್ತುಗಳ ಮೇಲೆ ಮೂಡಿರುವ ಅಜ್ಜಿಯ ಚಿತ್ರ ಯಾರ ಬಳಿಯಲ್ಲೂ ಇಲ್ಲ. ಆದರೇನು! ಅವರ ಅಂತರಂಗದ ಒಡನಾಡಿಗಳಾಗಿ ಅವರ ಜೀವಿತಪುಷ್ಪದ ಸುಗಂಧವನ್ನು ಸೇವಿಸಿದವರ ಹೃತ್ಪಟಲದಲ್ಲಿ ಅಚ್ಚೊತ್ತಿದ್ದಂತಿದೆ. ಯಾವ ಶಕ್ತಿಯೂ ಅದನ್ನು ತೊಡೆಯಲಾರದು.

ಅಜ್ಜಿ, ಹೋದರು. ಬಾಹ್ಯಜಗತ್ತಿನಿಂದ ಮರೆಯಾಗಿಹೋದರು. ಹೌದು, ಒಪ್ಪಿಕೊಳ್ಳಲೇಬೇಕಾದ ವಿಶ್ವವ್ಯಾಪಿಯಾದ ಸತ್ಯ. ಆದರೆ . . . ಆದರೆ ಎಲ್ಲಿಗೆ ಹೋದರು? ಯಾರು ಹೇಳಬೇಕು! ದೇಹವೇನೋ ಮಣ್ಣುಗೂಡಿತು. ಅವರ ಆ ಚೈತನ್ಯವಸ್ತು? ಯಾರ ಹಿಡಿತಕ್ಕೂ ಸಿಕ್ಕದ ಆ ಚೈತನ್ಯವಸ್ತು ಹೋದುದಾದರೂ ಎಲ್ಲಿಗೆ! ಸುಖಿಸುತ್ತಿದೆಯೋ, ದುಃಖಿಸುತ್ತಿದೆಯೋ, ಅಥವಾ ಈ ದಂದ್ವಗಳ ಅತೀತ ವಾದ ಅವಸ್ಥೆಯಲ್ಲಿ ಅಡಗಿದೆಯೋ, ಪುನಃ ಯಾವುದಾದರೂ ಜನ್ಮವೆತ್ತಿರ ಬಹುದೇನು? ಛೇ ಛೆ. ಪರಾತ್ಪರವಸ್ತು ಒಂದುಂಟೆಂದೂ, ಸಾರ್ಥಕ ಚೈತನ್ಯಾತ್ಮಗಳು ಅದರೊಡನೆ ಸಮರಸವಾಗುವುವೆಂದೂ, ಘೋಷಿಸುವ ವೇದಾಂತದ ಘೋಷಣೆ ನಿಜವಾಗಿದ್ದರೆ, ಜನ್ಮವೆತ್ತುವುದು, ಸಾಧ್ಯವಿಲ್ಲ. ಹಾಗಾದರೆ ಬೆಳಗಿನೊಡನೆ ಬೆಳಗಾಗಿ ಹೋಗಿರಬಹುದೇ? ಇರಬಹುದು. ಇದ್ದೇ ಇರಬೇಕು. ಇದ್ದೇ ಇದೆ. ಇದೇ ಸತ್ಯ.

ಆದರೆ ಪ್ರಮಾಣವೇನು ? ಇಲ್ಲ. ಇದು ಪ್ರಮಾಣಗಳನ್ನು ಎದುರಿಟ್ಟು ತೋರಿಸುವ ಬಾಹ್ಯಸತ್ಯವಲ್ಲ. ಅತಾರ್ಕಿಕ ಅನುಭವ. ಇದನ್ನು ಅನುಭವಿಸಿಯೇ ತಿಳಿಯಬೇಕಂತೆ!

ಈ ದೇಹವನ್ನುಳಿದನಂತರವಾದರೂ ಅಜ್ಜಿಯ ಸಾಮೀಪ್ಯ ದೊರಕೀತೇ ? ಛೇ. ದೇಹಪಾತಾನಂತರ ಈ ಸಂಬಂಧವೆಲ್ಲಿಯದು, ಈ ಸ್ಥೂಲದಲ್ಲಿ ಮಾತ್ರ. ಅಜ್ಜಿ, ಮೊಮ್ಮಗ ಇತ್ಯಾದಿ ಮಿಥ್ಯಾಸಂಬಂಧವಲ್ಲವೇ. ಏನೋ ಅವರಿವರು ನುಡಿದುದನ್ನು ಕೇಳಿ

"ತಿರುಕರಂಗಡಿಬೀದಿಯೊಳಗೆ ಸೇರುತೆ ರಾಜ
ರರಮನೆಯೊಳಸುದ್ದಿಗಳನಾಡುವಂತೆ"

ಈ ಮಿಥ್ಯೆಯನ್ನು ನುಡಿಯುತ್ತಿದ್ದೇನೆ. ಈ ಸಮಸ್ಯೆಯನ್ನು ಬಿಡಿಸುವುದಕ್ಕಾಗಿಯೇ ನನ್ನ, ಅಷ್ಟೇಕೆ, ತೋರುವೀ ವಿಶ್ವದ ಸರ್ವಜೀವಗಳ ಪ್ರಯತ್ನ. ಅಂತೂ ನನಗೆ ಆಯ್ಕೆಯ ಸ್ವಾತಂತ್ರ್ಯವಿದ್ದಿದ್ದರೆ ನನ್ನ ಅಜ್ಜಿಯ ಚೈತನ್ಯದ ನೆಚ್ಚಿನ ಮೊಮ್ಮಗ ಚೈತನ್ಯವಾಗಿ ಉಳಿಯುವುದನ್ನೇ ಆರಿಸುತ್ತಿದ್ದೆ.

ಇದೇನು ಹುಚ್ಚು ! ಹೌದು ಇದು ಹುಚ್ಚುತನವಿರಬಹುದು. ಆದರೆ ಅನೇಕ ವೇಳೆ ಹುಚ್ಚನಾಗಿರುವುದರಲ್ಲೇ ಎಷ್ಟೋ ಸುಖವಿದೆ; ಆನಂದವಿದೆ. ಜೀವನದ ಗುಟ್ಟಿನ ಗಂಟನ್ನು ಒಡೆಯುವ ವಜ್ರದ ಕೊಡಲಿಯೂ ಒಂದು ವಿಧವಾದ ಈ ಹುಚ್ಚಿನಲ್ಲೇ ಅಡಗಿದೆ.

ಅಜ್ಜಿಯ ಜೀವನವು ಒಂದು ಗುಟ್ಟಿನಗಂಟು (Hidden Treasure). ಅರಸಿದಂತೆಲ್ಲಾ ಅದರಿಂದ ಅಕ್ಷಯವಾದ ಧನದೊರೆಯುತ್ತಾ ಹೋಗುತ್ತದೆ. ಆದರೆ ಅದನ್ನು ಕಾಣಲು ಬಗೆಗಣ್ಣುಬೇಕು, ಶಕ್ತಿಬೇಕು, ಸಾಮರ್ಥ್ಯಬೇಕು, ಧೈರ್ಯ, ಸ್ಥೈರ್ಯಗಳು ಬೇಕು, ಹೃದಯದ ಕೆಚ್ಚುಬೇಕು. ಬೇಕು, ಎಲ್ಲವೂ ಬೇಕು. ಆಗ ಮಾತ್ರ ಸಾಧ್ಯ.

ದಿನಗಳುರುಳಿದಂತೆಲ್ಲಾ ಅಜ್ಜಿಯ ಜೀವನ ರೀತಿ, ಅವರ ಮಾತಿನ ಮಹತ್ವ ಹೆಚ್ಚು ಹೆಚ್ಚು ಸ್ಫುಟವಾಗುತ್ತಾ ಹೋಗುತ್ತಿವೆ. ಮರ್ತ್ಯಚಿತ್ರಕಾರನು ನಿರ್ಮಿಸಲಾಗದಂತಹ ವರ್ಣಗಳ ವಿವಿಧತೆಯಿಂದಾಚ್ಛಾದಿತವಾಗಿ, ಅವರ ಮನೋಹರ ರೂಪು ಅಚ್ಚಳಿಯದೆ ಹೃತ್ಪಟಲದಲ್ಲಿ ನೆಲಸಿದೆ. ನೆಚ್ಚಿನ ನೇಹದಿಂದ ಮೈದಡವುತ್ತಿದ್ದ ಅವರ ಸ್ಪರ್ಶದಿಂದ ಪುಳಕಂಗಳೇಳುತ್ತಿವೆ. ಅಮೃತಮಯವಾದ ಅವರ ತಾತ್ವಿಕವಾಣಿ ಕಿವಿಯಲ್ಲಿ ಭೋರ್ಗರೆದು, ಮನೋಮಂಡಲದಲ್ಲಿ ಪ್ರತಿಧ್ವನಿಸಿ, ಹೃದಯದಲ್ಲಿ ಲೀನವಾಗುತ್ತಿದೆ. ಅವರ ಪವಿತ್ರನಾಮ ಎಂದೆಂದೂ ನನ್ನ ಧಮನಿ ಧಮನಿಗಳಲ್ಲಿಯೂ ಧ್ವನಿತವಾಗುತ್ತಿರಲಿ. ಅವರ ಆತ್ಮ ಅಮರವಾಗಲಿ.

ಎಚ್. ತಿಪ್ಪಯ್ಯ.

ಬಾ ನನ್ನೀ ತೋಟಕ್ಕೆ

ಬಾ ನನ್ನೀ ತೋಟಕ್ಕೆ, ಆನಂದದ ಊಟಕ್ಕೆ
ಎತ್ತರದಲಿ ಗರಿಗೆದರಿಹ ತೆಂಗಿನ ಕೌಂಗಿನ ಮರಗಳ ಸೊಂಪಿಹುದು
ಸುತ್ತಲು ಬಳಸಿಹ ಮಾವಿನ ಬೇವಿನ ಹಲಸಿನ ತರುಗಳ ತಂಪಿಹುದು
ಎತ್ತಲು ಮಲ್ಲಿಗೆ ಸಂಪಿಗೆ ಜಾಜಿಯ ಮನವನು ತಣಿಸುವ ಕಂಪಿಹುದು
ಬಿತ್ತರದಲಿ ಬೆಳೆದೀಳೆಯ ಬಾಳೆಯ ವೀಳ್ಯದ ಎಲೆಗಳ ಪೆಂಪಿಹುದು
ಹೂಗಳ ಜೊಂಪಿಹುದು
ಫಲಗಳ ಬಿಣ್ಪಿಹುದು
ತಳಿರಿನಲಂಪಿಹುದು
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ ||

ನಿರ್ಮಲ ಶೀತಲ ಶುಚಿಕರ ರುಚಿಕರ ಧವಳ ನೀಲಿಮಾಜಲವಿಹುದು
ಕಾರಿಯ ತೋರಿಯ ನೇರಿಲ ಬಾರಿಯ ಬೆಳವಲ ಫಲವಿಹದು
ಗೆಣಸು ಗಜ್ಜರಿಯ ಮೆಣಸು ಅರಿಶಿಣದ ಅಲ್ಲದ ಕಬ್ಬಿನ ಹೊಲವಿಹುದು
ನಿಂಬೆ ಭಿಲ್ವ ದಾಳಿಂಬೆ ಚಂದನದ ಅತ್ತಿಯ ಮತ್ತಿಯ ಕುಲವಿಹುದು
ಎತ್ತಲು ಚೆಲುವಿಹುದು
ಬತ್ತದ ನೆಲವಿಹುದು
ಸೃಷ್ಟಿಯ ಕಲೆಯಿಹುದು
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ ||

ಅಲ್ಲಿಗಲ್ಲಿಗೆ ಬಳ್ಳಿಮಾಡಗಳು ಪಲ್ಲವಿಸಿರುವುವು ನಲವೇರಿ
ಸೊಲ್ಲುಸೊಲ್ಲಿಗೆ ಮೈನವಿರೆಬ್ಬಿಸಿ ಕರೆವುದು ಕೋಗಿಲೆ ಮುದವೇರಿ
ಹೊಂಗೇದಗೆಯಲಿ ಮರ್ಮರ ಸ್ವರದಲಿ ತೊನೆವುದು ಗಾಳಿಯು ಹೊರೆಯೇರಿ
ಭೃಂಗದ ಸಂಗೀತದ ತರಂಗಗಳು ಸುಳಿವುವು ಸುಳಿಗಾಳಿಯನೇರಿ
ಮೋದದ ಸೊನೆಯಿಹುದು
ನಾದದ ಕೆನೆಯಿಹುದು
ಸ್ವಾದದ ತೆನೆಯಿಹುದು
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ ||

ನಾನಾವರ್ಣದ ನಾನಾಪುಷ್ಪದ ನಾನಾಗಂಧದ ತೋಟವಿದು
ಜಗದ ಚಿತ್ರಕನ ಚಿತ್ರಕಶಕ್ತಿಯ ನಿತ್ಯವಿನೂತನ ನೋಟವಿದು
ಸ್ಫುರದ್ರೂಪಿಣೀ ಪ್ರಕೃತಿಮಾನಿನಿಯ ನಿತ್ಯಮನೋಹರ ಆಟವಿದು
ಭೂಮಿತಾಯಿಗಿಹ ಚಿರಸಿರಿವಂತಿಕೆ ಫಲದ್ರೂಪತೆಯ ಜೇಟವಿದು
ಚೆಲುವಿನ ಚಿನ್ನಾಟವಿದು
ಸೊಬಗಿನ ಸುಳಿದಾಟವಿದು
ಸೊಗಸಿನ ಸವಿಕೂಟವಿದು
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ ||

ವಿಶ್ವವೈಣಿಕನ ವಿಚಿತ್ರವೀಣೆಗಿಹ ವಿವಿಧವಿನೂತನ ಶ್ರುತಿಯಂತೆ
ನೆರೆದಿದೆ ಪರಮೆಯು ಶುಕಪಿಕನಿಕರದ ಸಾವಿರ ಸಾವಿರ ಸ್ವರಸಂತೆ
ನವಿಲ ನಟನೆಯೊ, ಲತೆಗಳ ಲಾಸ್ಯವೊ, ಹೂಗಳ ನಗೆಯೊ, ಸುರಕಾಂತೆ
ಹಾಕಿದ ಕುಸುರಿನ ಕಸೂತಿಯಂದದೀ ಹಸುರಿನ ಪಟ್ಟಿಯೊ, ಏನಂತೆ
ಎಲ್ಲ ಕಲಾತ್ಮಕವಿಹುದಿಲ್ಲಿ
ನವರಜನಾತ್ಮಕವಿಹುದಿಲ್ಲಿ
ಎಲ್ಲವು ಜೀವನಪೋಷಕವಿಲ್ಲಿ
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ ||

ಬಾ ಬಾ ಬೀಜವು ಮಣ್ಣೊಳು ನಶಿಸುತ ವಿಕಾಸಪಡೆವುದ ನೋಡಿಲ್ಲಿ
ಮೊಳೆದು ಅಂಕುರಿಸಿ ಲತೆಯಲಿ ಕುಸುಮಿಸಿ ಧನ್ಯತೆಪಡೆವುದ ಕಾಣಿಲ್ಲಿ
ಹೂವು ಹಣ್ಣಿನಲಿ ಸೃಷ್ಟಿಯ ಮರ್ಮವು ಪಸರಿಸುತಿರುವುದನರಿಯಿಲ್ಲಿ
ಶಾಂತಿಯುಕ್ತ ಸಂಪೂರ್ಣವಿಕಾಸವೆ ಜೀವನಸಫಲತೆ ತಿಳಿಯಿಲ್ಲಿ
ವಿನಾಶದಿ ಮೊಳೆವ ವಿಕಾಸವಿದು
ನವಜೀವನವಿನ್ಯಾಸವಿದು
ಸೌಂದರ್ಯವಿಲಾಸವಿದು
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ ||

ಜಗವಿದು ತೋಟವು ತೋಟಿಗನಿದರೊಳು ಹೊಯ್ಯುವ ದಿನ ಹೊಸ ಬೀಜಗಳ
ಮೃಗಖಗ ನರನಗ ಬಳ್ಳಿಗುಲ್ಮಗಳ ಕ್ರಿಮಿ ಸಸಿಕೀಟಕ ಭೂಜಗಳ
ಎಲ್ಲ ಬೀಜಗಳು ತಮ್ಮಯತಾಣದಿ ತೋರ್ವುದು ನಿಜರುಚಿತೇಜಗಳ
ಎಲ್ಲರ ಬೆಳವಿಗೆಗಿಲ್ಲಿ ಸ್ಥಾನವಿದೆ ಎಲ್ಲಿಯದಿದು ಬದುಕಿನ ಜಗಳ?

ಇಲ್ಲಿದೆ ಸುಮಧುರ ಸಹಕಾರ
ಶಾಂತಿಯ ತೃಪ್ತಿಯ ಪರಿವಾರ
ಪ್ರೀತಿಯ ಮೈತ್ರಿಯ ಅಧಿಕಾರ
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ ||

ಕಾವ್ಯಾನಂದ

ಜಗತ್ತುಗಳ ಹುಟ್ಟು ಸಾವು

೪. ನಕ್ಷತ್ರಮಂಡಲದ ಪರಿಚಯ

೧. ಪೀಠಿಕೆ

ನಕ್ಷತ್ರಗಳ ದೂರನಿರ್ಣಯದ ವಿಧಾನಗಳ ವಿಚಾರ ಮಾಡಿದ ಮೇಲೆ ಅವುಗಳ ಭಾರ, ಗಾತ್ರಗಳನ್ನು ಖಗೋಳಜ್ಞನು ಹೇಗೆ ಅಳೆದಿದ್ದಾನೆಂಬುದನ್ನು ತಿಳಿದುಕೊಳ್ಳುವ ಪ್ರಯತ್ನಮಾಡಬೇಕಾದುದು ಸರಿಯಾದ ಮಾರ್ಗ. ಆದರೆ ಇದಕ್ಕೆ ಪೂರ್ವಭಾವಿಯಾಗಿ ನಾವು ನಕ್ಷತ್ರಮಂಡಲದ ಪರಿಚಯ ಮಾಡಿಕೊಳ್ಳಬೇಕಾದದ್ದು ಅವಶ್ಯ. ಏಕೆಂದರೆ ನಾವು ಹಿಂದಿನ ಅಧ್ಯಾಯದಲ್ಲಿಯೇ ಕಂಡಿರುವಂತೆ ಈ ವ್ಯಾಸಂಗಗಳಲ್ಲೆಲ್ಲ ಅನೇಕ ನಕ್ಷತ್ರಗಳನ್ನೂ, ನಕ್ಷತ್ರ ರಾಶಿಗಳನ್ನೂ ಉದಾಹರಣೆಗಾಗಿ ಹಲವುಬಾರಿ ಎತ್ತಿಕೊಳ್ಳಬೇಕಾಗುತ್ತದೆ. ಈ ನಕ್ಷತ್ರಗಳನ್ನು ನಾವು ನೋಡಿದ್ದರೆ ಆಗ ಅವುಗಳನ್ನು ಉಲ್ಲೇಖಿಸಿ ಪ್ರತಿಪಾದನೆ ಮಾಡಿದ ವಿಚಾರಸರಣಿಯೂ, ತತ್ತ್ವಗಳೂ ನಮಗೆ ಹೆಚ್ಚು ಅರ್ಥಗರ್ಭಿತವಾಗಿ ತೋರುತ್ತವೆ. ಆದಕಾರಣ ರಾತ್ರಿಯ ಆಕಾಶವನ್ನು ಜೀವಕಳೆಯಿಂದ ತುಂಬುವ ನಕ್ಷತ್ರಗಳಲ್ಲಿ ಕೆಲವಾದರೂ ಓದುಗರಿಗೆ ಗುರುತಿರುವ ಗೆಳೆಯರಂತಾಗಲೆಂಬ ಉದ್ದೇಶದಿಂದ ಈ ಅಧ್ಯಾಯದಲ್ಲಿ ನಕ್ಷತ್ರಮಂಡಲದ ನಾಲ್ಕು ನಕ್ಷೆಗಳನ್ನು ಕೊಟ್ಟು ಆ ನಕ್ಷೆಗಳನ್ನು ಉಪಯೋಗಿಸುವ ವಿಧಾನವನ್ನೂ ತಿಳಿಸಿದೆ.

ಭೂಪಟಗಳಲ್ಲಿ ಅಕ್ಷಾಂಶ ರೇಖಾಂಶ ರೇಖೆಗಳನ್ನು ಎಳೆದಿರುವಂತೆಯೇ ಆಕಾಶದ ನಕ್ಷೆಗಳಲ್ಲಿಯೂ ಅಕ್ಷಾಂಶ ರೇಖಾಂಶ ರೇಖೆಗಳನ್ನು ಎಳೆದಿದೆ. ಭೂಮಿಯ ಸಮಭಾಜಕ ವೃತ್ತತಲ[1]ವನ್ನು ವೃದ್ಧಿಸಿದರೆ ಅದು ಖಗೋಳವನ್ನು ಅಥವಾ ನಕ್ಷತ್ರಮಂಡಲವನ್ನು ಒಂದು ವೃತ್ತದಲ್ಲಿ ಸಂಧಿಸುತ್ತದೆ. ಈ ವೃತ್ತವೇ ಖಗೋಳೀಯ ವಿಷುವದ್ವೃತ್ತ.[2] ಅದೇ ರೀತಿಯಲ್ಲಿಯೇ ಭೂಮಿಯ ದಕ್ಷಿಣೋತ್ತರ ಧ್ರುವರೇಖೆಯನ್ನು ಅಂದರೆ ಅಕ್ಷವನ್ನು[3] ವೃದ್ಧಿಸಿದರೆ ಅದು ಖಗೋಳವನ್ನು ಸಂಧಿಸುವ ಬಿಂದುಗಳು ದಕ್ಷಿಣ ಮತ್ತು ಉತ್ತರ ಧ್ರುವಬಿಂದುಗಳು. ಧ್ರುವಬಿಂದುಗಳ ಮೂಲಕ ಹಾದು ವಿಷುವದ್ವೃತ್ತವನ್ನು ಲಂಬವಾಗಿ ಕತ್ತರಿಸುವ ವೃತ್ತಗಳೇ ರೇಖಾಂಶಗಳು. ವಿಷುವದ್ವೃತ್ತಕ್ಕೆ ಸಮಾನಾಂತರವಾದ ವೃತ್ತಗಳು ಅಕ್ಷಾಂಶಗಳು. ಖಗೋಳವು ಮಾಟವಾಗಿ ನಾಲ್ಕು ಹೋಳುಗಳಾಗಿದೆಯೆಂದು ಕಲ್ಪಿಸಿಕೊಂಡು ಇಲ್ಲಿ ನಾಲ್ಕು ನಕ್ಷೆ

---

[1] Equatorial Plane. [2] Celestial Equator. [3] Axis.

ಗಳನ್ನು ಕೊಟ್ಟಿದೆ. ಉತ್ತರಧ್ರುವಬಿಂದುವಿನಿಂದ ಉತ್ತರ ಅಕ್ಷಾಂಶ ೪೫° ಗಳ ವರೆಗಿನ ಖಗೋಳಪ್ರದೇಶವನ್ನು ಮೊದಲನೆಯ ನಕ್ಷೆಯು ಚಿತ್ರಿಸುತ್ತದೆ. ಹಾಗೆಯೇ ದಕ್ಷಿಣಧ್ರುವ ಮತ್ತು ಅದರ ಸುತ್ತಮುತ್ತಲು ದಕ್ಷಿಣ ಅಕ್ಷಾಂಶ ೪೫° ಗಳೊಳಗಿರುವ ನಕ್ಷತ್ರ ಮಂಡಲವನ್ನು ನಾಲ್ಕನೆಯ ನಕ್ಷೆಯಲ್ಲಿ ತೋರಿಸಿದೆ. ಹೀಗೆ ಖಗೋಳದ ಉತ್ತರದ ಮತ್ತು ದಕ್ಷಿಣದ ಚಿಪ್ಪುಗಳನ್ನು ಕತ್ತರಿಸಿದ ಮೇಲೆ ಉಳಿಯುವ ಸ್ತಂಭಾಕಾರದ ಮಧ್ಯ ಭಾಗವನ್ನು ಎರಡು ಹೋಳುಗಳಾಗಿ ಮಾಡಿದಂತೆ ಕಲ್ಪಿಸಿ ಆ ಖಗೋಳ ಪ್ರದೇಶಗಳನ್ನು ಎರಡನೆಯ ಮತ್ತು ಮೂರನೆಯ ನಕ್ಷೆಗಳಲ್ಲಿ ಗುರುತಿಸಿದೆ. ಈ ಎರಡು ನಕ್ಷೆಗಳು ವಿಷುವದ್ವೃತ್ತದಿಂದ ಉತ್ತರ ದಕ್ಷಿಣ ೪೫° ಗಳ ಅಕ್ಷಾಂಶದ ವರೆಗಿನ ಖಗೋಳ ಭಾಗದ ನಕ್ಷೆಗಳು.

೨. ರೇಖಾಂಶ ಸಂಪ್ರದಾಯಗಳು

ಭೂನಕ್ಷೆಗಳಲ್ಲಿ ಗ್ರೀನಿಚ್ಚಿನ ಮೂಲಕ ಹಾದುಹೋಗುವ ರೇಖಾಂಶವನ್ನು ಮೂಲ ರೇಖಾಂಶವನ್ನಾಗಿ (೦°) ಗಣಿಸುತ್ತಾರೆ. ಆಧುನಿಕ ಖಗೋಳಜ್ಞರು ಉತ್ತರಧ್ರುವಬಿಂದುವಿನಿಂದ ವಸಂತ ವಿಷುವದ್ಬಿಂದು[1]ವನ್ನು ಹಾದು ದಕ್ಷಿಣ ಧ್ರುವಬಿಂದುವಿಗೆ ಸೇರುವ ರೇಖಾಂಶವನ್ನು ಮೂಲರೇಖಾಂಶವಾಗಿಟ್ಟುಕೊಂಡಿದ್ದಾರೆ. ಇಲ್ಲಿ ವಸಂತ ವಿಷುವದ್ಬಿಂದುವೆಂದರೇನೆಂಬುದನ್ನು ನಾಲ್ಕು ಮಾತುಗಳಲ್ಲಿ ತಿಳಿಸುವುದು ಸೂಕ್ತ. ಭೂಮಿಯು ಸೂರ್ಯನನ್ನು ಪ್ರದಕ್ಷಿಣೆ ಮಾಡುತ್ತಿರುವುದರಿಂದ ಭೂನಿವಾಸಿಗಳಾದ ನಮಗೆ ಸೂರ್ಯನು ಖಗೋಳದಲ್ಲಿ ಒಂದು ವೃತ್ತಪಥವನ್ನು ತುಳಿಯುತ್ತಿರುವಂತೆ ಕಾಣುತ್ತಾನೆ. ನಕ್ಷತ್ರಮಂಡಲದಲ್ಲಿ ಸೂರ್ಯನು ಚಿತ್ರಿಸುತ್ತಿರುವ ಈ ವಾರ್ಷಿಕ ಪಥವನ್ನು ಕ್ರಾಂತಿವೃತ್ತ[2]ವೆಂದು ಕರೆಯುತ್ತಾರೆ. ಭೂಪಥತಲವನ್ನು ವೃದ್ಧಿಸಿದರೆ ಅದು ಖಗೋಳವನ್ನು ಸಂಧಿಸುವ ವೃತ್ತವೇ ಕ್ರಾಂತಿವೃತ್ತವೆಂದೂ ಈ ವೃತ್ತಕ್ಕೆ ಲಕ್ಷಣ[3]ವನ್ನು ಹೇಳಬಹುದು. ಭೂಭ್ರಮಣದ ಅಕ್ಷವು ಭೂಪಥತಲಕ್ಕೆ ಲಂಬವಾಗಿದ್ದಿದ್ದರೆ ವಿಷುವದ್ವೃತ್ತವೇ ಕ್ರಾಂತಿವೃತ್ತವಾಗುತ್ತಿತ್ತು. ಹಾಗಿಲ್ಲದೆ ಭೂಮಿಯ ಅಕ್ಷವು ಭೂಪಥತಲದ ಲಂಬಕ್ಕೆ ೨೩½° ಗಳು ಓರೆಯಾಗಿರುವುದರಿಂದ ಕ್ರಾಂತಿವೃತ್ತವು ವಿಷುವದ್ವೃತ್ತಕ್ಕೆ ೨೩½° ಗಳ ಕೋನದಲ್ಲಿ ಓರೆಯಾಗಿದೆ. ಈ ಎರಡು ವೃತ್ತಗಳೂ ಖಗೋಳದಲ್ಲಿ ಎರಡು ಬಿಂದುಗಳಲ್ಲಿ ಒಂದನ್ನೊಂದು ದಾಟುತ್ತವೆ. ಕ್ರಾಂತಿವೃತ್ತವು ವಿಷುವದ್ವೃತ್ತವನ್ನು ದಕ್ಷಿಣದಿಂದ ಉತ್ತರಕ್ಕೆ ದಾಟುವ ಬಿಂದುವಿಗೆ ವಸಂತವಿಷುವದ್ಬಿಂದುವೆಂದೂ, ಉತ್ತರದಿಂದ ದಕ್ಷಿಣಕ್ಕೆ

---

[1] Vernal Equinoctial Point. [2] Ecliptic. [3] Definition.

ದಾಟುವ ಬಿಂದುವಿಗೆ ಶರದ್ವಿಷುವದ್ಬಿಂದು[1]ವೆಂದೂ ಹೆಸರುಗಳು. ಈ ಎರಡು ಬಿಂದುಗಳಿಗಿರುವ ರೇಖಾಂಶಾಂತರವು ೧೮೦ ಡಿಗ್ರಿಗಳು.

ಭೂರೇಖಾಂಶಗಳನ್ನು ಗ್ರೀನಿಚ್‌ನಿಂದ ಪೂರ್ವಾಭಿಮುಖವಾಗಿ ಎಣಿಸುವುದರಲ್ಲಿಯೂ, ಖಗೋಳರೇಖಾಂಶಗಳನ್ನು ವಸಂತವಿಷುವದ್ಬಿಂದುವಿನಿಂದ ಪೂರ್ವಾಭಿಮುಖವಾಗಿ ಎಣಿಸುವುದರಲ್ಲಿಯೂ ಒಂದು ಮುಖ್ಯ ವ್ಯತ್ಯಾಸವಿದೆ. ಗ್ರೀನಿಚ್ ಭೂಮಿಯ ಮೇಲಣ ಒಂದು ಸ್ಥಿರಪ್ರದೇಶ ಅಥವಾ ಬಿಂದು. ಗ್ರೀನಿಚ್ಚನ್ನು ಬಿಂದುವೆಂದು ಕರೆದಿರುವುದು ಅನೇಕರಿಗೆ ಸೋಜಿಗವಾಗಿ ತೋರಬಹುದು. ಆದರೆ ಖಗೋಳಜ್ಞರು ಗ್ರೀನಿಚ್ಚಿನ ಅವೇಕ್ಷಣಾಲಯದಲ್ಲಿರುವ ಪ್ರಧಾನ ದೂರದರ್ಶಿನಿಯ ಅಕ್ಷಕೇಂದ್ರದ ಮೂಲಕ ಹಾದುಹೋಗುವ ರೇಖಾಂಶವನ್ನು ಮೂಲರೇಖಾಂಶವೆನ್ನುತ್ತಾರೆ. ಖಗೋಳೀಯ ಭಾಷೆಯಲ್ಲಿ ಆ ಅಕ್ಷಕೇಂದ್ರವೇ ಗ್ರೀನಿಚ್ ಬಿಂದು. ಅದಿರಲಿ. ವಸಂತವಿಷುವದ್ಬಿಂದುವು ಗ್ರೀನಿಚ್ ಬಿಂದುವಿನಂತೆ ಖಗೋಳದಲ್ಲಿ ಸ್ಥಿರಬಿಂದುವಲ್ಲವೆಂಬುದು ನಾವು ಈಗ ಗಮನಿಸಬೇಕಾದ ವಿಷಯ. ಏಕೆಂದರೆ ವೇಗದಿಂದ ಸುತ್ತುತ್ತಿರುವ ಬುಗುರಿಯ ಓರೆಯಾದ ಅಕ್ಷವು ಒಂದೇ ದಿಕ್ಕಿನಲ್ಲಿರದೆ ಹೇಗೆ ನಿಧಾನವಾಗಿ ತೂಗುತ್ತಿರುತ್ತದೆಯೋ ಹಾಗೆಯೇ ಭೂಮಿಯ ಭ್ರಮಣದ ಅಕ್ಷವೂ ಖಗೋಳದಲ್ಲಿ ನಿಧಾನವಾಗಿ ದಿಕ್ಕು ಬದಲಿಸುತ್ತಿದೆ. (ಚಿತ್ರ ೯) ಅಂದಮೇಲೆ ಈ ಭ್ರಮಣಾಕ್ಷಕ್ಕೆ ಲಂಬತಲವಾದ ವಿಷುವದ್ವೃತ್ತವೂ ಕ್ರಾಂತಿವೃತ್ತದ ಮೇಲೆ ಮಂದವೇಗದಿಂದ ಸರಿಯುತ್ತಿದೆ ಎಂದಾಯಿತು. ಆದಕಾರಣ ವಸಂತವಿಷುವದ್ಬಿಂದುವು ಸ್ಥಿರಬಿಂದುವಲ್ಲ. ಖಗೋಳಜ್ಞನ ಮೂಲರೇಖಾಂಶವು ದಿನದಿನಕ್ಕೂ, ಕ್ಷಣಕ್ಷಣಕ್ಕೂ ಬದಲಿಸುತ್ತಿರುತ್ತದೆ. ಇದರ ಅರ್ಥ ಒಂದು ಖಗೋಳಪ್ರದೇಶದ ಅಥವಾ ನಕ್ಷತ್ರದ ರೇಖಾಂಶ ಇಂದೊಂದು ಸಂಖ್ಯೆ, ನಾಳೆ ಬೇರೊಂದು ಸಂಖ್ಯೆ ಎಂದಾಗುತ್ತದೆ. ಇದು ವ್ಯಾವಹಾರಿಕದೃಷ್ಟಿಯಿಂದ ಬಹಳ ತೊಡಕಿನ ವ್ಯವಸ್ಥೆಯಾಗಿ ಕಾಣುತ್ತದೆ. ಆದರೆ ವಿಷುವದ್ವೃತ್ತವು ಕ್ರಾಂತಿವೃತ್ತದ ಮೇಲೆ ಸರಿಯುತ್ತಿರುವ ವೇಗ ಬಹಳ ಮಂದ, ಒಂದು ವರ್ಷಕ್ಕೆ ಪಶ್ಚಿಮಾಭಿಮುಖವಾಗಿ ೫೦.೨೫ ಕೋನ ಸೆಕಂಡುಗಳಂತೆ, ಅಂದರೆ ವಿಷುವದ್ಬಿಂದುವು ಖಗೋಳದಲ್ಲಿ ಒಂದು ಡಿಗ್ರಿಯಷ್ಟು ಪಶ್ಚಿಮಕ್ಕೆ ಜಾರಲು ಸುಮಾರು ೭೨ ವರ್ಷಗಳಾಗುತ್ತದಾದ ಕಾರಣ ವ್ಯವಸ್ಥೆಯೂ ಅಷ್ಟೇನೂ ತೊಡಕಲ್ಲ. ಅಂತೂ ಈ ಪದ್ಧತಿಯಲ್ಲಿ ಮೂಲರೇಖಾಂಶಕ್ಕೇ ಚಲನೆಯಿರುವುದರಿಂದ—ಅದು ಎಷ್ಟೇ ಮಂದವಾದ ಚಲನೆಯಾಗಲಿ—ಇದಕ್ಕೆ ಸಾಯನ ರೇಖಾಂಶ[2] ಪದ್ಧತಿ ಎಂದು ಹೆಸರು. ಅಯನ ಎಂದರೆ ಚಲನೆ ಎಂದರ್ಥ. ಸಾಯನ ಸಂಪ್ರದಾಯದಲ್ಲಿ ವಸಂತ

[1] Autumnal Equinoctial Point. [2] Tropical Longitude.

ವಿಷುವದ್ಬಿಂದುವಿಗೆ ಮೇಷಾದಿಬಿಂದು[1]ವೆಂದೂ ಹೆಸರು. ಮೇಷಾದಿಬಿಂದುವಿನಿಂದ ಪೂರ್ವಕ್ಕೆ ವಿಷುವದ್ವೃತ್ತದ ೩೦ ಡಿಗ್ರಿಗಳ ಪ್ರದೇಶವು ಮೇಷಾಯನ.[2] ಅಲ್ಲಿಂದ ಮುಂದಿನ ೩೦ ಡಿಗ್ರಿಗಳು ವೃಷಭಾಯನ; ಹೀಗೆಯೇ ಕ್ರಮವಾಗಿ ಮಿಥುನಾಯನ, ಕಟಕಾಯನ, ಸಿಂಹಾಯನ, ಕನ್ಯಾಯನ, ತುಲಾಯನ, ವೃಶ್ಚಿಕಾಯನ, ಧನುರಯನ, ಮಕರಾಯನ, ಕುಂಭಾಯನಗಳಾಗಿ ಮೀನಾಯನಾಂತ್ಯದಲ್ಲಿ ಕ್ರಾಂತಿವೃತ್ತವು ಮೇಷಾದಿಬಿಂದುವನ್ನು ತಿರುಗಿ ಸೇರುತ್ತದೆ.

ಭಾರತೀಯರು ಸಾಯನ ಪದ್ಧತಿಯನ್ನು ಬಳಕೆಯಲ್ಲಿಟ್ಟುಕೊಂಡಿಲ್ಲ. ಅವರದು ನಿರಯನ[3] ಸಂಪ್ರದಾಯ. ನಕ್ಷತ್ರಮಂಡಲದ ಒಂದು ಸ್ಥಿರಬಿಂದುವಿನ ಮೂಲಕ—ರೇವತೀ ತಾರೆಯ[4] ಮೂಲಕ—ಹಾದುಹೋಗುವ ರೇಖಾಂಶವು ಭಾರತೀಯ ಮೂಲ ರೇಖಾಂಶ. ರೇವತೀ ತಾರೆಯಿಂದ ಪೂರ್ವಕ್ಕೆ ಕ್ರಾಂತಿವೃತ್ತದ ೩೦ ಡಿಗ್ರಿಗಳು ಮೇಷ ರಾಶಿ.[5] ಅಲ್ಲಿಂದ ಮುಂದಿನ ೩೦ ಡಿಗ್ರಿಗಳು ವೃಷಭರಾಶಿಗೆ ಸೇರುತ್ತವೆ. ಹೀಗೆಯೇ ಮೀನರಾಶಿಯುವರೆಗೂ. ಸದ್ಯಕ್ಕೆ (೧೯೫೦ ರ ಜನವರಿ) ಮೇಷರಾಶ್ಯಾದಿಗೂ ಅಥವಾ ರೇವತೀ ತಾರೆಗೂ ಮೇಷಾದಿ ಬಿಂದುವಿಗೂ ಇರುವ ಅಂತರವು ೨೩° ೮′ ೪೬″. ಇದನ್ನು ಅಯನಾಂಶವೆಂದು ಕರೆಯುತ್ತಾರೆ. ಭಾರತೀಯ ನಿರಯನ ರೇಖಾಂಶಕ್ಕೆ ಅಯನಾಂಶವಾದ ೨೩° ೮′ ೪೬″ನ್ನು ಸೇರಿಸಿದರೆ ಕ್ರಿ.ಶ. ೧೯೫೦ ರ ಸಾಯನ ರೇಖಾಂಶವು ಸಿದ್ಧಿಸುತ್ತದೆ. ಅಯನಾಂಶವು ವರ್ಷಕ್ಕೆ ೫೦½ ಕೋನ ಸೆಕಂಡುಗಳಂತೆ ವೃದ್ಧಿಯಾಗುತ್ತಿರುತ್ತದೆ.

೩. ನಕ್ಷೆಗಳನ್ನು ಉಪಯೋಗಿಸುವ ವಿಧಾನ

ಇನ್ನು ನಕ್ಷೆಗಳನ್ನು ಉಪಯೋಗಿಸುವ ರೀತಿಯನ್ನು ಕಲಿಯಲು ಎರಡನೆಯ ನಕ್ಷೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಈ ನಕ್ಷೆಯ ಕೆಳಭಾಗದಲ್ಲಿ ಮೀನ ಮೇಷಾದಿ ರಾಶಿಗಳಿಂದ ಹಿಡಿದು ಕನ್ಯಾರಾಶಿಯ ವರೆಗೆ ಭಾರತೀಯ ರೇಖಾಂಶಗಳನ್ನು ಗುರುತಿಸಿದೆ. ಅದರ ಕೆಳಗಡೆ ಪಾಶ್ಚಾತ್ಯ ಸಾಯನ ರೇಖಾಂಶ ಗಳನ್ನೂ ಗುರುತಿಸಿದೆ. ಸೌಕರ್ಯಕ್ಕಾಗಿ ಭಾರತೀಯ ರೇಖಾಂಶಗಳನ್ನೂ ಕ್ರಾಂತಿ ರೇಖಾಂಶದ ಬದಲು ವಿಷುವದ್ರೇಖಾಂಶಮಾನದಲ್ಲಿಯೇ ಗುರುತಿಸಿದೆ. ನಕ್ಷೆಯ ಮಧ್ಯಭಾಗದಲ್ಲಿ ಬೆಂ—ಬೆಂ ಎಂದು ಗುರುತಿಸಿರುವ ರೇಖೆಯು ಬೆಂಗಳೂರಿನ ಮತ್ತು ಬೆಂಗಳೂರಿನ ಅಕ್ಷಾಂಶದ (ಉದಾ. : ಮಂಗಳೂರು, ಹಾಸನ, ಮದರಾಸು) ಇತರ ಪ್ರದೇಶಗಳ ಊರ್ಧ್ವಬಿಂದುರೇಖೆ.[6] ನಕ್ಷೆಯಲ್ಲಿ ಗುರುತಿಸಿರುವ ಪ್ರತಿಯೊಂದು

[1] First Point of Aries. [2] Sign of Aries. [3] Sidereal. [4] *Zeta* Piscium.
[5] Constellation of Aries. [6] Zenith Line.

ಭಾರತೀಯ ರೇಖಾಂಶ ಸಂಖ್ಯೆಯ ಕೆಳಗಡೆಯೂ ಒಂದು ನಮ್ಮ ಸೌರಮಾಸ ನಾಮವನ್ನೂ ಒಂದು ಪಾಶ್ಚಾತ್ಯ ಮಾಸನಾಮವನ್ನೂ ಸಣ್ಣಾಕ್ಷರಗಳಲ್ಲಿ ಬರೆದಿದೆ. ಆ ರೇಖಾಂಶವು ಆ ಸೌರಮಾಸಾದಿ ದಿನದ ಅಥವಾ ಪಾಶ್ಚಾತ್ಯಮಾಸದ ಮಧ್ಯದಿನದ ರಾತ್ರಿ ೮ ಘಂಟೆಯ ಮಧ್ಯಾಹ್ನ ರೇಖೆ[1] ಎಂದು ತಿಳಿಯಬೇಕು. ಉದಾಹರಣೆಗೆ ಮೀನ ಸಂಕ್ರಮಣದ ದಿನ (ಮಾರ್ಚಿ ೧೫) ರಾತ್ರಿ ೮ ಘಂಟೆಯ ಮಧ್ಯಾಹ್ನರೇಖೆಯು ಭಾರತೀಯ ೯೦°ಗಳ ರೇಖಾಂಶ (ಕಟಕಾದಿ ರೇಖಾಂಶ). ಮಧ್ಯಾಹ್ನ ರೇಖೆ ಎಂದರೆ ಆ ಕಾಲದಲ್ಲಿ ಉತ್ತರಧ್ರುವದಿಂದ ಊರ್ಧ್ವಬಿಂದುವಿನ ಮೂಲಕ ಹಾಯ್ದು ದಕ್ಷಿಣಧ್ರುವವನ್ನು ಸೇರುವ ರೇಖೆ. ಈ ರೇಖಾಂಶವು ಬೆಂ—ಬೆಂ ರೇಖೆಯನ್ನು ಯಾವ ಬಿಂದುವಿನಲ್ಲಿ ಸಂಧಿಸುತ್ತದೆಯೋ ಅದು ಆ ಕಾಲದ ಬೆಂಗಳೂರಿನ ಊರ್ಧ್ವಬಿಂದು.

ನಕ್ಷೆಯಲ್ಲಿ ಕ್ರಾಂತಿವೃತ್ತವನ್ನೂ ಎಳೆದಿದೆ. ಈ ವೃತ್ತದ ಮೇಲೆ ಅಶ್ವಿನಿ, ಭರಣಿ, ಇತ್ಯಾದಿಯಾಗಿ ಗುರುತಿಸಿರುವ ಭಾಗಗಳು ಆಯಾ **ನಕ್ಷತ್ರ**ಪ್ರದೇಶಗಳನ್ನು ತೋರಿಸುತ್ತವೆ. ಇಲ್ಲಿ **ನಕ್ಷತ್ರ**ಪ್ರದೇಶವೆಂದರೆ ೧೩⅓° ರೇಖಾಂಶಾಂತರದ ಖಗೋಳ ಭಾಗ. ಇಪ್ಪತ್ತೇಳು **ನಕ್ಷತ್ರ**ಗಳಿಗೆ ಸರಿಯಾಗಿ ೨೭×೧೩⅓=೩೬೦ ಡಿಗ್ರಿಗಳಾಗುತ್ತವೆ. ಹಾಗೆಯೇ ಕ್ರಾಂತಿವೃತ್ತದ ಅಕ್ಕಪಕ್ಕಗಳಲ್ಲಿರುವ ಕೆಲವು ತಾರೆಗಳನ್ನು ೧, ೨, ೩, ಇತ್ಯಾದಿ ಸಂಖ್ಯೆಗಳಿಂದ ಸೂಚಿಸಿದೆ. ಈ ತಾರಾಸಂಖ್ಯೆಗಳು ಅಶ್ವಿನ್ಯಾದಿ **ನಕ್ಷತ್ರ**ಗಳ ಯೋಗತಾರೆಗಳನ್ನು ಕ್ರಮವಾಗಿ ಗುರುತಿಸುತ್ತವೆ. ಉದಾಹರಣೆಗೆ ೨೭ ರೇವತೀ ಯೋಗತಾರೆಯನ್ನೂ, ೧ ಅಶ್ವಿನೀ ಯೋಗತಾರೆಯನ್ನೂ, ೨ ಭರಣೀ ಯೋಗತಾರೆಯನ್ನೂ ಸೂಚಿಸುತ್ತವೆ.

ಈಗ ನಾವು ಪೂರ್ವದಿಕ್ಕಿನಲ್ಲಿರುವ ನಕ್ಷತ್ರಗಳನ್ನು ಪರಿಚಯಮಾಡಿಕೊಳ್ಳಬೇಕಾದರೆ ಪೂರ್ವ ಎಂದು ಬರೆದಿರುವ ಭಾಗವು ನಕ್ಷೆಯ ಕೆಳಭಾಗವಾಗುವಂತೆ ಪುಟವನ್ನು ತಿರುಗಿಸಿಕೊಳ್ಳಬೇಕು. ಆಗ ಮಧ್ಯಾಹ್ನ ರೇಖೆಯಿಂದ ೯೦°ಗಳು ಪೂರ್ವಕ್ಕಿರುವ ರೇಖಾಂಶವು ಹೆಚ್ಚುಕಡಿಮೆ ಆ ಹೊತ್ತಿನ ನಮ್ಮ ಪೂರ್ವದಿಗಂತ ರೇಖೆಯಾಗುತ್ತದೆ. ನಾವು ಉದಾಹರಣೆಗೆ ತೆಗೆದುಕೊಂಡಿರುವ ಕಾಲದಲ್ಲಿ (ಮೀನ ಸಂಕ್ರಮಣ ಅಥವಾ ಮಾರ್ಚಿ ೧೫ರ ರಾತ್ರಿ ೮ ಘಂಟೆ) ೨ನೆಯ ನಕ್ಷೆಯ ಪ್ರಕಾರ ೧೪ ಎಂದು ಗುರುತಿಸಿರುವ ತಾರೆಯು ಆಗ ತಾನೆ ಪೂರ್ವದಿಗಂತದಲ್ಲಿ ಹುಟ್ಟುತ್ತಿರುತ್ತದೆ. ಮೇಲೆ ವಿವರಿಸಿರುವಂತೆ ೧೪ ಎಂದಿರುವುದು ಚಿತ್ತಾ ತಾರೆ. ಈ ತಾರೆಗೆ ಸ್ವಲ್ಪ ಮೇಲ್ಭಾಗದಲ್ಲಿ ಬಲಗಡೆಗೆ ೧೩ (ಹಸ್ತಾತಾರೆ) ಗುರುತಿಸಿದೆ. ಹೀಗೆಯೇ ನಕ್ಷತ್ರಮಂಡಲದಲ್ಲಿ ಎಲ್ಲ ತಾರೆಗಳ ಸಾಪೇಕ್ಷಸ್ಥಾನಗಳೂ ನಕ್ಷೆಯಲ್ಲಿ

[1] Meridian.

ಗುರುತಿಸಿರುವಂತೆ ನಮಗೆ ಕಾಣುತ್ತವೆ. ಪೂರ್ವದಿಗಂತದಿಂದ ಮಧ್ಯಾಹ್ನರೇಖೆಯ ವರೆಗೂ ನಕ್ಷೆಯನ್ನು ಹೀಗಿಟ್ಟುಕೊಂಡು ನಕ್ಷತ್ರಗಳನ್ನು ಪರಿಶೀಲಿಸಬಹುದು. ಪಶ್ಚಿಮದಿಕ್ಕಿನ ನಕ್ಷತ್ರಗಳನ್ನು ಪರಿಚಯಮಾಡಿಕೊಳ್ಳಬೇಕಾದಲ್ಲಿ ಪಶ್ಚಿಮ ಎಂದು ಬರೆದಿರುವ ಭಾಗವನ್ನು ಕೆಳಭಾಗವಾಗುವಂತೆ ಪುಟವನ್ನು ತಿರುಗಿಸಿಕೊಂಡು ನಾವೂ ಪಶ್ಚಿಮಮುಖರಾಗಬೇಕು. ಹೀಗೆಯೇ ಉತ್ತರ ದಕ್ಷಿಣ ಭಾಗಗಳ ನಕ್ಷತ್ರಗಳನ್ನು ಪತ್ತೆಹಚ್ಚಲು ಉತ್ತರ ದಕ್ಷಿಣಗಳನ್ನು ಕೆಳಗೆ ಬರುವಂತೆ ನಕ್ಷೆಯನ್ನು ತಿರುಗಿಸಿಕೊಳ್ಳಬೇಕು.

ಸಂಕ್ರಮಣಾದಿಯ ಬದಲು ಇತರ ರಾತ್ರಿಗಳಲ್ಲಿಯೂ ನಕ್ಷೆಯನ್ನು ಉಪಯೋಗಿಸಬಹುದು. ಉದಾಹರಣೆಗೆ ಕುಂಭಮಾಸದ ೧೫ ನೆಯ ತೇದಿಯ (ಸುಮಾರು ಮಾರ್ಚಿ ೧) ರಾತ್ರಿ ೮ ಘಂಟೆಯ ಮಧ್ಯಾಹ್ನರೇಖೆಯು ಭಾರತೀಯ ರೇಖಾಂಶ ೭೫° ಗಳು (ಮಿಥುನರಾಶಿ ಮಧ್ಯ), ಹಾಗೆಯೇ ಆ ಹೊತ್ತಿನ ಪೂರ್ವದಿಗಂತ ರೇಖೆಯು ಸರಿ ಸುಮಾರು ೧೬೫° ಯ ರೇಖಾಂಶ (ಕನ್ಯಾ ಮಧ್ಯ); ಪಶ್ಚಿಮ ದಿಗಂತರೇಖೆಯು ೩೪೫° (ಮೀನ ಮಧ್ಯ). ಒಂದು ಘಂಟೆಗೆ ಖಗೋಳವು ೧೫° ಗಳು ಪಶ್ಚಿಮಕ್ಕೆ ಉರುಳಿದಂತೆ ತೋರುತ್ತದೆಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ರಾತ್ರಿ ೮ ಗಂಟೆಯಲ್ಲದೆ ಇತರ ಕಾಲಗಳಲ್ಲಿಯೂ ನಕ್ಷತ್ರಮಂಡಲವು ಹೇಗೆ ಕಾಣುತ್ತದೆಂಬುದನ್ನು ನಕ್ಷೆಯಿಂದ ತಿಳಿಯಬಹುದು. ಉದಾಹರಣೆಗೆ ಮೀನ ಸಂಕ್ರಮಣದ ದಿನ ರಾತ್ರಿ ೧೦ ಘಂಟೆಯ ಮಧ್ಯಾಹ್ನರೇಖೆಯು ೧೨೦°ಯ ರೇಖಾಂಶ (ಸಿಂಹರಾಶಿಯ ಆದಿ). ೩ ನೆಯ ನಕ್ಷೆಯನ್ನೂ ಎರಡನೆಯ ನಕ್ಷೆಯಂತೆಯೇ ಉಪಯೋಗಿಸಿಕೊಳ್ಳಬಹುದು.

ಎರಡು ಮತ್ತು ಮೂರನೆಯ ನಕ್ಷೆಗಳಲ್ಲಿ ವರಾಹಮಿಹಿರಾಚಾರ್ಯನ ಕಾಲದ ವಿಷುವದ್ರೇಖೆಯನ್ನೂ ತೋರಿಸಿದೆ. ಆತನ ಕಾಲದಲ್ಲಿ ಕ್ರಾಂತಿವೃತ್ತವನ್ನು ವಿಷುವದ್ರೇಖೆಯು ರೇವತೀತಾರೆಯಲ್ಲಿ ಮತ್ತು ಚಿತ್ತಾತಾರೆಯಲ್ಲಿ ಕತ್ತರಿಸುತ್ತಿತ್ತೆಂಬುದು ನಕ್ಷೆಗಳಿಂದ ವಿಶದವಾಗುತ್ತದೆ. ಈಗ ಬಳಕೆಯಲ್ಲಿರುವ ರೂಪದಲ್ಲಿ ನಮ್ಮ ಪಂಚಾಂಗಪದ್ಧತಿಯನ್ನು ಸುಧಾರಿಸಿದಾತನೇ ವರಾಹಮಿಹಿರಾಚಾರ್ಯನು. ಅದರಿಂದಲೇ ಆತನು ತನ್ನ ಕಾಲದ ವಸಂತವಿಷುವದ್ಬಿಂದುವಾಗಿದ್ದ ರೇವತೀತಾರೆಯನ್ನು ಭಾರತೀಯ ನಿರಯನ ಮೂಲರೇಖಾಂಶಾಧಾರವನ್ನಾಗಿ ಸ್ಥಾಪಿಸಿದನು. ಈಗಣ ಮೇಷಾಯನದ ಬಹುಭಾಗವು ಮೀನರಾಶಿಯಲ್ಲಿಯೂ, ವೃಷಭಾಯನದ ಬಹುಭಾಗವು ಮೇಷರಾಶಿಯಲ್ಲಿಯೂ ಇತ್ಯಾದಿಯಾಗಿ ಸೇರಿಹೋಗಿವೆಯೆಂಬುದೂ ನಕ್ಷೆಗಳ ಪರೀಕ್ಷೆಯಿಂದ ವ್ಯಕ್ತಪಡುತ್ತದೆ.

ಧ್ರುವಪ್ರದೇಶಗಳ ನಕ್ಷತ್ರ ಪರಿಚಯಕ್ಕೆ ೧ ಮತ್ತು ೪ ನೆಯ ನಕ್ಷೆಗಳನ್ನು ಉಪಯೋಗಿಸಬೇಕು. ಅವುಗಳನ್ನು ಉಪಯೋಗಿಸುವ ವಿಧಾನ ಹೀಗೆ. ಇಂದು ಮೀನಸಂಕ್ರಮಣದ ರಾತ್ರಿ ೮ ಘಂಟೆಯಾದರೆ, ಮೀನ—ಮಾರ್ಚಿ ಎಂದು ಬರೆದಿರುವ ಭಾಗವನ್ನು ನಮಗೆ ಮೇಲ್ಭಾಗವಾಗುವಂತೆ ೧ ನೆಯ ನಕ್ಷೆಯನ್ನು ತಿರುಗಿಸಿಕೊಳ್ಳಬೇಕು. ಬೆಂಗಳೂರಿನ ಅಕ್ಷಾಂಶವು ಉತ್ತರ ೧೩° ಗಳಾದುದರಿಂದ ಉತ್ತರಧ್ರುವ ಬಿಂದುವಿನಿಂದ ೧೩° ಗಳ ಅಂತರದಲ್ಲಿರುವ ತಾರೆಗಳೆಲ್ಲಾ ಯಾವಾಗಲೂ ನಮ್ಮ ದಿಗಂತದ ಮೇಲೆಯೇ ಇರುತ್ತವೆ. ನಕ್ಷೆಯಲ್ಲಿ ಬೆಂಗಳೂರಿನ ಈ ಪರಿಧ್ರುವ[1] ವೃತ್ತವನ್ನು ಗುರುತಿಸಿದೆ. ಈ ವೃತ್ತಕ್ಕೆ ಎಳೆದಿರುವ ಸ್ಪರ್ಶರೇಖೆಯು[2] ಮೀನ ಸಂಕ್ರಮಣದ (ಮಾರ್ಚಿ ೧೫ರ) ರಾತ್ರಿ ೮ ಘಂಟೆಯ ಉತ್ತರ ದಿಗಂತ ರೇಖೆ. ಈ ರೇಖೆಯ ಮೇಲಿರುವ ನಕ್ಷತ್ರಗಳೆಲ್ಲಾ ನಮಗೆ ಕಾಣುತ್ತವೆ. ಆ ಕಾಲಕ್ಕೆ ಸಪ್ತರ್ಷಿ ಮಂಡಲವು ಪೂರ್ತಿಯಾಗಿ ಹುಟ್ಟಿರುವುದು ನಕ್ಷೆಯಿಂದ ಕಂಡುಬರುತ್ತದೆ. ನಾಲ್ಕನೆಯ ನಕ್ಷೆಯನ್ನೂ ಇದೇ ರೀತಿಯಲ್ಲಿಯೇ ಉಪಯೋಗಿಸಿಕೊಳ್ಳಬಹುದು. ಆದರೆ ಈಗ ಪರಿಧ್ರುವವೃತ್ತದೊಳಗಣ ಪ್ರದೇಶವು ನಮಗೆ ಯಾವಾಗಲೂ ಅಗೋಚರವೆಂಬುದನ್ನು ತಿಳಿದಿರಬೇಕು. ಈ ನಕ್ಷೆಯಲ್ಲಿ ಕಾಣುವ ಪರಿಧ್ರುವ ವೃತ್ತಕ್ಕೆಳೆದಿರುವ ಸ್ಪರ್ಶರೇಖೆಯು ಮೀನಸಂಕ್ರಮಣದ ದಿನ ರಾತ್ರಿ ೮ ಘಂಟೆಯ ಬೆಂಗಳೂರಿನ ದಕ್ಷಿಣ ದಿಗಂತರೇಖೆ. ಮೀನ—ಮಾರ್ಚಿ ಎಂದು ಬರೆದಿರುವುದು ಮೇಲ್ಭಾಗವಾಗುವಂತೆ ನಕ್ಷೆಯನ್ನು ತಿರುಗಿಸಿಕೊಂಡರೆ, ಈ ರೇಖೆಯ ಮೇಲ್ಭಾಗದ ತಾರೆಗಳು ಆ ಕಾಲದಲ್ಲಿ ನಮಗೆ ದಕ್ಷಿಣದಿಕ್ಕಿನಲ್ಲಿ ಕಾಣುತ್ತವೆ. ಕೃತ್ರಿಮ ತ್ರಿಶಂಕು[3] ತಾರಾಪುಂಜವು ದಿಗಂತದ ಮೇಲೆ ಬಂದಿದೆ. ಅಗಸ್ತ್ಯತಾರೆಯು ಮಧ್ಯಾಹ್ನರೇಖೆಯನ್ನು ದಾಟಿ ಪಶ್ಚಿಮಕ್ಕಿಳಿದಿದೆ. ತ್ರಿಶಂಕು ತಾರಾಪುಂಜವು ಇನ್ನೊಂದು ಘಂಟೆಯೊಳಗೆ ಹುಟ್ಟುವುದರಲ್ಲಿದೆ. ಸಪ್ತರ್ಷಿಮಂಡಲದ ಪುಲಹ—ಕ್ರತುಗಳು ಹೇಗೆ ಉತ್ತರಧ್ರುವದ ದಿಕ್ಸೂಚಕ[4]ಗಳೋ ಹಾಗೆಯೇ ತ್ರಿಶಂಕು ಪಾದಶಿರಗಳು—ತೃತೀಯಾ ಪ್ರಥಮಗಳು—ದಕ್ಷಿಣಧ್ರುವದಿಕ್ಸೂಚಕಗಳು.

ಬೆಂಗಳೂರಲ್ಲದೆ ಇತರ ಸ್ಥಳಗಳಲ್ಲಿಯೂ ಇದೇ ನಕ್ಷತ್ರ ನಕ್ಷೆಗಳನ್ನು ಆಯಾ ಸ್ಥಳದ ಅಕ್ಷಾಂಶಕ್ಕನುಸಾರವಾಗಿ ಮೇಲಿನ ನಿಯಮಗಳನ್ನು ಮಾರ್ಪಡಿಸಿಕೊಂಡು ಉಪಯೋಗಿಸಿಕೊಳ್ಳಬಹುದು. ಆದರೆ ಕರ್ಣಾಟಕವು ಉತ್ತರ ಅಕ್ಷಾಂಶ ೧೧° ಗಳಿಂದ ೧೮° ಗಳೊಳಗೆ ಮಾತ್ರ ವ್ಯಾಪಿಸಿರುವುದರಿಂದ ಮೇಲಿನ ವಿವರಣೆಯೇ ಸರಿಸುಮಾರಾಗಿ ಅಖಿಲ ಕರ್ಣಾಟಕಕ್ಕೂ ಅನ್ವಯಿಸುತ್ತದೆ.

---

[1] Circum Polar. [2] Tangent. [3] False Cross. [4] Pointers.


೪. ತಾರಾರಾಶಿಗಳ ಹೆಸರುಗಳು

ಪುರಾತನ ಭಾರತೀಯ ಖಗೋಳಜ್ಞರು ಇತರ ದೇಶಗಳ ಸಮಕಾಲೀನ ಖಗೋಳಜ್ಞರಿಗಿಂತ ಯಾವ ದೃಷ್ಟಿಯಿಂದಲೂ ಹಿಂದೆ ಬಿದ್ದಿರದಿದ್ದರೂ, ಅವರು ಖಗೋಳವಿಜ್ಞಾನಾಭ್ಯಾಸವನ್ನು ಪಂಚಾಂಗ, ಫಲಜ್ಯೋತಿಶ್ಶಾಸ್ತ್ರಾಭಿವೃದ್ಧಿಗಳಿಗೆ ಸಹಾಯಕವಾಗಲೆಂದು ಮಾಡುತ್ತಿದ್ದರೆಂಬುದನ್ನು ಒಪ್ಪಿಕೊಳ್ಳಬೇಕು. ಈ ಶಾಸ್ತ್ರಗಳಿಗೆ ವಿಷಯಗಳಾದ "ಸೂರ್ಯಚಂದ್ರಾದಿ ನವಗ್ರಹಗಳ" ಪಥಗಳು ಕ್ರಾಂತಿವೃತ್ತದಿಂದ ಉತ್ತರ ದಕ್ಷಿಣ ೮° ಗಳೊಳಗೇ ಇರುವುದರಿಂದ ನಮ್ಮ ಪೂರ್ವಿಕರು ಈ ಪ್ರದೇಶದೊಳಗಣ ತಾರಾರಾಶಿಗಳಿಗೆ ಮಾತ್ರ ಸಾಮಾನ್ಯವಾಗಿ ಹೆಸರುಗಳನ್ನಿಟ್ಟಿದ್ದಾರೆ. ಉತ್ತರದಲ್ಲಿ ಸಪ್ತರ್ಷಿಮಂಡಲ, ದಕ್ಷಿಣದಲ್ಲಿ ತ್ರಿಶಂಕು ಎಂಬ ನಕ್ಷತ್ರಮಂಡಲ ನಾಮಗಳಿದ್ದರೂ ಹೀಗೆ ದ್ವಾದಶರಾಶಿಚಕ್ರ[1]ದ ಹೊರಗೆ ಹೆಸರಿಟ್ಟಿರುವುದು ಬಹಳ ಅಪರೂಪ. ರಾಶಿಚಕ್ರದ ಅಶ್ವಿನ್ಯಾದಿ ೨೭ ನಕ್ಷತ್ರಭಾಗಗಳನ್ನೂ ಹಾಗೂ ೧೨ ರಾಶಿಗಳನ್ನೂ ೨ನೆಯ ಮತ್ತು ೩ನೆಯ ನಕ್ಷೆಗಳಲ್ಲಿ ತೋರಿಸಿದೆ. ಇವಲ್ಲದೆ ಪಾಶ್ಚಾತ್ಯರು ಖಗೋಳವನ್ನೆಲ್ಲಾ ಬೇರೆ ಬೇರೆ ಭಾಗಗಳನ್ನಾಗಿ ವಿಂಗಡ ಮಾಡಿ ಒಂದೊಂದಕ್ಕೂ ಒಂದೊಂದು ತಾರಾರಾಶಿನಾಮವನ್ನು ಕೊಟ್ಟು ಅವುಗಳ ಎಲ್ಲೆಗಳನ್ನು ನಿರ್ಧರಿಸಿದ್ದಾರೆ. ಭೂಮಂಡಲದ ದೇಶಗಳ ಎಲ್ಲೆಗಳನ್ನು ಹೇಗೆ ಸ್ವಾಭಾವಿಕ ಲಕ್ಷಣಗಳಿಗೆ ಅಷ್ಟಾಗಿ ಗಮನಕೊಡದೆ ಮನಬಂದಂತೆ, ಶಕ್ತಿಯಿದ್ದಂತೆ ಎಳೆದಿದ್ದೇವೆಯೋ, ಹಾಗೆಯೇ ಅಷ್ಟೇ ಅವ್ಯವಸ್ಥೆಯಿಂದಲೇ ತಾರಾರಾಶಿಗಳ ಎಲ್ಲೆಗಳೂ ನಿರ್ಣಯವಾಗಿವೆಯೆಂದು ಹೇಳಬಹುದು.

ಸಮಗ್ರನಕ್ಷತ್ರಮಂಡಲದ ೮೯ ರಾಶಿನಾಮಗಳಲ್ಲಿ ಹಲವು ಗ್ರೀಕರ ಆದಿಕವಿ ಹೋಮರ್ ರಚಿಸಿದ ಮಹಾಕಾವ್ಯದ ನಾಯಕ ನಾಯಕಿಯರುಗಳ ಹೆಸರುಗಳು. ನಮ್ಮ ಪೂರ್ವಿಕರು ಹೆಸರಿಟ್ಟಿಲ್ಲದ ಈ ತಾರಾರಾಶಿಗಳಿಗೆ ಗ್ರೀಕ್ ಹೆಸರುಗಳಿಗೆ ಸರಿತೂಗುವಂತಹ ರಾಮಾಯಣ ಮಹಾಭಾರತಗಳ ಮಹಾ ವ್ಯಕ್ತಿಗಳ ಹೆಸರು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಿದೆ. ಪೌರಾಣಿಕ ವ್ಯಕ್ತಿಗಳ ಹೆಸರಿಟ್ಟಿರದ ಅನೇಕ ರಾಶಿಗಳೂ ಇವೆ. ಆದರೆ ಆ ಹೆಸರುಗಳೂ ಗ್ರೀಕ್ ಭಾಷೆಯಿಂದಲೇ ತೆಗೆದವು. ಅವುಗಳಿಗೆ ತಕ್ಕ ಸಂಸ್ಕೃತ ಹೆಸರುಗಳನ್ನೂ ಕೊಟ್ಟಿದೆ. ಗ್ರಂಥಕರ್ತನ ಅಜ್ಞಾನದಿಂದ ಪುರಾತನ ಭಾರತೀಯ ನಾಮಗಳಿರುವ ಒಂದೆರಡು ರಾಶಿಗಳಿಗೂ ನೂತನ ನಾಮಕರಣವಾಗಿರಬಹುದು. ಹೀಗಿದ್ದಲ್ಲಿ ವಾಚಕರು ಕ್ಷಮಿಸಬೇಕು. ಯಾವ ರಾಶಿಗಳಲ್ಲಿ ಚತುರ್ಥವರ್ಗದ್ದಕ್ಕಿಂತ ಅಧಿಕ ಕಾಂತಿಯ ತಾರೆಯು ಒಂದೂ ಇಲ್ಲವೋ

[1] Zodiac.


ಚಿತ್ರಪಟ



ಇನ್ನೂರಂಗುಲ ವ್ಯಾಸದ ಪಾಲೋಮಾರ್ ದೂರದರ್ಶಿನಿಯ ಉತ್ತರ ನೋಟ

—(ವಿಲ್ಸನ್ ಶಿಖರದ ಅವೇಕ್ಷಣಾಲಯದ ಅಧಿಕಾರಿಗಳ ಕೃಪೆಯಿಂದ)

ಪಂಚಮಪಟಿ



ಧನೂರಾಶಿಯ ದಿಕ್ಕಿನಲ್ಲಿ ಕಾಣುವ ಆಕಾಶಗಂಗೆಯ ಭಾಗ

ಅಂಥ ರಾಶಿಗಳ ಇಂಗ್ಲಿಷ್ ಹೆಸರುಗಳನ್ನು ನಕ್ಷೆಗಳಲ್ಲಿ ಗುರುತಿಸಿಲ್ಲ. ಪಟ್ಟಿಯಲ್ಲಿ ಆವರಣ ಚಿಹ್ನೆಯೊಳಗಿನ ಹೆಸರುಗಳು ಹಳೆಯವು.

೧ ನೆಯ ನಕ್ಷೆ

ಮೀನದಿಂದ ಸಿಂಹದ ವರೆಗೆ

೧. ಲಘುಸಪ್ತರ್ಷಿ—Ursa Minor
೨. ಕುಂತಿ—Cassiopeia
೩. ದೀರ್ಘಕಂಠ—Camelopardalis
೪. ಮಾರ್ಜಾಲ—Lynx

ಕನ್ಯೆಯಿಂದ ಕುಂಭದ ವರೆಗೆ

೫. ಸುಯೋಧನ—Draco
೬. (ಸಪ್ತರ್ಷಿಮಂಡಲ)—Ursa Major
೭. ಯುಧಿಷ್ಠಿರ—Cepheus
೮. ಮುಸಲೀ—Lacerta

೨ ನೆಯ ನಕ್ಷೆ

ಉತ್ತರಾರ್ಧ

೯. ದ್ರೌಪದಿ—Andromeda
೧೦. ತ್ರಿಕೋಣಿ—Triangulum
೧೧. (ಮೀನ)—Pisces
೧೨. (ಮೇಷ)—Aries
೧೩. ಪಾರ್ಥ—Perseus
೧೪. (ವೃಷಭ)—Taurus
೧೫. ವಿಜಯಸಾರಥಿ—Auriga
೧೬. (ಮೃಗರಾಶಿ); ಮಹಾವ್ಯಾಧ—Orion
೧೭. ಏಕಶೃಂಗೀ—Monoceros
೧೮. (ಮಿಥುನ)—Gemini
೧೯. ಲಘುಶ್ವಾನ—Canis Minor
೨೦. (ಕಟಕ)—Cancer
೨೧. ಲಘುಸಿಂಹ—Leo Minor
೨೨. (ಸಿಂಹ)—Leo
೨೩. ಷಷ್ಠಕ—Sextans

ದಕ್ಷಿಣಾರ್ಧ

೨೪. ತಿಮಿಂಗಿಲ—Cetus
೨೫. ಶಿಲ್ಪಶಾಲಾ—Sculptor
೨೬. ಚಕೋರ—Phoenix
೨೭. ವೈತರಣೀ—Eridanus
೨೮. ಅಗ್ನಿಕುಂಡ—Fornax
೨೯. ಶಶ—Lepus
೩೦. ವ್ರಶ್ಚನ—Caelum
೩೧. ಕಪೋತ—Columba
೩೨. ಮಹಾಶ್ವಾನ—Canis Major
೩೩. ನೌಕಾಪೃಷ್ಠ—Puppis
೩೪. ಅಜಗರ—Hydra
೩೫. ದಿಕ್ಸೂಚೀ—Pyxis
೩೬. ರೇಚಕ—Antila
೩೭. ಕಂದರ—Crater

೩ ನೆಯ ನಕ್ಷೆ

ಉತ್ತರಾರ್ಧ

೩೮. ಕಾಳಭೈರವ—Canes Venatici
೩೯. ಕೃಷ್ಣವೇಣೀ—Coma Berenices
೪೦. ಸಹದೇವ—Boötes

ಧಕ್ಷಿಣಾರ್ಧ

೫೪. (ಕನ್ಯಾ)—Virgo
೫೫. (ಹಸ್ತಾ)—Corvus
೫೬. ಕಿನ್ನರ[1]—Centaurus

[1] ಹಿಂದಿನ ಅಧ್ಯಾಯದಲ್ಲಿ ಈ ರಾಶಿಯನ್ನು ಕಬಂಧನೆಂದು ಕರೆದಿದೆ.

೪೧. ಉತ್ತರ ಕಿರೀಟ—Corona Borealis
೪೨. ಸರ್ಪಶಿರಸ್—Serpens Caput
೪೩. ಭೀಮ—Hercules
೪೪. ಉರಗಧರ—Ophiuchus
೪೫. ಸರ್ಪಪುಚ್ಛ—Serpens Cauda
೪೬. ವೀಣಾ—Lyra
೪೭. ಶರ—Sagitta
೪೮. ಗರುಡ—Aquila
೪೯. ರಾಜಹಂಸ—Cygnus
೫೦. ಶೃಗಾಲ—Vulpecula
೫೧. (ಧನಿಷ್ಠ)—Delphinus
೫೨. ಕಿಶೋರ—Equuleus
೫೩. ನಕುಲ—Pegasus
೫೭. (ತುಲಾ)—Libra
೫೮. ವೃಕ—Lupus
೫೯. ಖೇಟಕ—Scutum
೬೦. (ವೃಶ್ಚಿಕ)—Scorpius
೬೧. ದಕ್ಷಿಣ ಕಿರೀಟ—Corona Australis
೬೨. ಸೂಕ್ಷ್ಮದರ್ಶಿನಿ—Microscopium
೬೩. (ಧನುಸ್)—Sagittarius
೬೪. (ಮಕರ)—Capricornus
೬೫. ದಕ್ಷಿಣ ಮೀನ—Piscis Austrinus
೬೬. (ಕುಂಭ)—Aquarius
೬೭. ಬಕ—Grus

೪ ನೆಯ ನಕ್ಷೆ

ಮೀನದಿಂದ ಸಿಂಹದವರೆಗೆ

೬೮. ಶ್ಯೇನ—Tucana
೬೯. ಕಾಳಿಂಗ—Hydrus
೭೦. ಹೋರಾಸೂಚೀ—Horologium
೭೧. ಜಾಲ—Reticulum
೭೨. ಚಿತ್ರಫಲಕ—Pictor
೭೩. ಮತ್ಸ್ಯ—Dorado
೭೪. ಸಾನು—Mensa
೭೫. ದೇವನೌಕಾ—Carina
೭೬. ಶಫರೀ—Volans
೭೭. ನೌಕಾಪಟ—Vela
೭೮. ಚಂಚಲವರ್ಣಿಕಾ—Chameleon

ಕನ್ಯೆಯಿಂದ ಕುಂಭದವರೆಗೆ

೭೯. (ತ್ರಿಶಂಕು)—Crux
೮೦. ಮಶಕ—Musca
೮೧. ವೃತ್ತಿನಿ—Circinus
೮೨. ದಕ್ಷಿಣತ್ರಿಕೋಣಿ—Triangulum Australe
೮೩. ದೇವ ವಿಹಗ— Apus
೮೪. ಚತುಷ್ಕ—Norma
೮೫. ವೇದಿಕಾ—Ara
೮೬. ದೂರದರ್ಶಿನಿ—Telescopium
೮೭. ಮಯೂರ—Pavo
೮೮. ಸಿಂಧು—Indus
೮೯. ಅಷ್ಟಕ—Octans

ರಾಶಿಗಳಲ್ಲೆಲ್ಲಾ ಅಜಗರವು ವಿಸ್ತೀರ್ಣದಲ್ಲಿ ದೊಡ್ಡದು, ೧೩೦೩ ಚದರ ಡಿಗ್ರಿಗಳಷ್ಟು. ನಕ್ಷತ್ರಮಂಡಲದ ಒಟ್ಟು ವಿಸ್ತೀರ್ಣವು ೪೧,೨೫೨.೯೬ ಚದರ ಡಿಗ್ರಿಗಳು. ವೃತ್ತದ ಪರಿಧಿ ಅಥವಾ ಸುತ್ತಳತೆಯು ೩೬೦ ಡಿಗ್ರಿಗಳೆಂಬುದು ಹೇಗೆ ಎಲ್ಲ ವೃತ್ತಗಳಿಗೂ ಅನ್ವಯಿಸುವ ವಾಕ್ಯವೋ ಹಾಗೆಯೇ ಖಗೋಳದ ಮೈಯ ವಿಸ್ತೀರ್ಣವು ಎಲ್ಲ ಗೋಳಗಳಿಗೂ ಅನ್ವಯಿಸುತ್ತದೆ. ಅಂತೂ ಅಜಗರದ

ವಿಸ್ತೀರ್ಣವು ನಕ್ಷತ್ರಮಂಡಲದ ೩೨ ರಲ್ಲೊಂದುಭಾಗ. ತ್ರಿಶಂಕು ರಾಶಿಯು ರಾಶಿಗಳಲ್ಲೆಲ್ಲ ಚಿಕ್ಕದು. ಅದರ ವಿಸ್ತೀರ್ಣವು ೬೮ ೧/೨ ಚದರ ಡಿಗ್ರಿಗಳು, ಖಗೋಳದ ಆರುನೂರರಲ್ಲೊಂದು ಭಾಗ ಮಾತ್ರ. ಕಾಳಭೈರವದ ವಿಸ್ತೀರ್ಣವು (೪೬೫.೨) ರಾಶಿಗಳ ಸರಾಸರಿ ವಿಸ್ತೀರ್ಣಕ್ಕೆ (೪೬೩.೫) ಹೆಚ್ಚು ಕಡಿಮೆ ಸಮ. ಇಪ್ಪತ್ತೊಂಬತ್ತು ರಾಶಿಗಳು ಪೂರ್ತಿಯಾಗಿ ವಿಷುವದ್ವೃತ್ತದ ಉತ್ತರಕ್ಕೂ, ನಲವತ್ತಾರು ದಕ್ಷಿಣಕ್ಕೂ ಇವೆ. ಉಳಿದ ಹದಿನಾಲ್ಕು ರಾಶಿಗಳ ಉತ್ತರಾರ್ಧ ದಕ್ಷಿಣಾರ್ಧ ಭಾಗಗಳು ಹೆಚ್ಚು ಕಡಿಮೆ ಸಮ. ಸುಯೋಧನ ಮತ್ತು ವೈತರಣಿಗಳ ಎಲ್ಲೆಗಳ ರೇಖೆಗಳು ಬಹಳ ತೊಡಕಿನವು, ಎಲ್ಲೆಲ್ಲೋ ಬಳಸಿಕೊಂಡು ಹೋಗಿವೆ. ಅಜಗರದ ಅತಿದೂರದ ಬಿಂದುಗಳ ಅಂತರವು ೧೦೪ ೧/೪° ಗಳಾದರೆ ತ್ರಿಶಂಕುವಿನದು ೧೧ ೩/೪° ಗಳು ಮಾತ್ರ. ಸುಯೋಧನ ರಾಶಿಯು ಸಾಯನ ರೇಖಾಂಶ ೧೩೫° ಯಿಂದ ೩೩೦° ಯ ವರೆಗೂ ಅಂದರೆ ರೇಖಾಂಶದ ೧೯೫ ಡಿಗ್ರಿಗಳಲ್ಲಿ ಹಬ್ಬಿದೆ. ವೈತರಣಿಯು ಉತ್ತರ ಅಕ್ಷಾಂಶ ೨° ಯಿಂದ ದಕ್ಷಿಣ ಅಕ್ಷಾಂಶ ೬೧° ಯ ವರೆಗೂ ಅಂದರೆ ಅಕ್ಷಾಂಶದ ೬೩ ಡಿಗ್ರಿಗಳಲ್ಲಿ ವ್ಯಾಪಿಸಿದೆ. ರಾಶಿಗಳ ಸರಹದ್ದುಗಳ ವೈಪರೀತ್ಯಕ್ಕೆ ಮತ್ತೊಂದು ನಿದರ್ಶನ ಸಾಕೆಂದು ತೋರುತ್ತದೆ. ದ್ವಾದಶ ರಾಶಿಗಳಲ್ಲೊಂದಾದ ವೃಶ್ಚಿಕರಾಶಿಯು ಕ್ರಾಂತಿವೃತ್ತದ ಆರೂವರೆ ಡಿಗ್ರಿಗಳನ್ನು ಮಾತ್ರ ಹಾದಿದೆ ; ಅದರ ಬದಲು ದ್ವಾದಶರಾಶಿಗಳೊಳಗೆ ಸೇರದ ಉರಗಧರನು ಕ್ರಾಂತಿವೃತ್ತದ ಹದಿನೆಂಟೂವರೆ ಡಿಗ್ರಿಗಳಿಗಿಂತ ಸ್ವಲ್ಪ ಹೆಚ್ಚು ಭಾಗವನ್ನು ಆಕ್ರಮಿಸಿಕೊಂಡಿದಾನೆ. ಶಾಸ್ತ್ರೀಯವಾಗಿ ದ್ವಾದಶ ರಾಶಿಗಳಲ್ಲಿ ಪ್ರತಿಯೊಂದಕ್ಕೂ ಕ್ರಾಂತಿವೃತ್ತದ ೩೦° ಗಳು ಸಲ್ಲುತ್ತವೆ. ಇದನ್ನು ನಕ್ಷೆಗಳಿಂದ ಸುಲಭವಾಗಿ ತಿಳಿಯಬಹುದು.

೫. ನಕ್ಷತ್ರಮಂಡಲದ ಕಾಂತಿಯುತ ತಾರೆಗಳು

ಇಲ್ಲಿಯ ನಾಲ್ಕು ನಕ್ಷೆಗಳಲ್ಲಿಯೂ ಪ್ರಥಮವರ್ಗದ ತಾರೆಗಳನ್ನು ಕಿರಣಗಳಿಲ್ಲದ ದೊಡ್ಡ ಬಟ್ಟುಗಳಾಗಿಯೂ, ದ್ವಿತೀಯವರ್ಗದ ತಾರೆಗಳನ್ನು ಎರಡು ಕಿರಣಗಳ ಬಟ್ಟುಗಳಾಗಿಯೂ, ತೃತೀಯ, ಚತುರ್ಥವರ್ಗದ ತಾರೆಗಳನ್ನು ಮೂರು ನಾಲ್ಕು ಕಿರಣಗಳ ಬಟ್ಟುಗಳಾಗಿಯೂ ತೋರಿಸಿದೆ. ಚತುರ್ಥವರ್ಗಕ್ಕಿಂತ ಕಾಂತಿಹೀನ ತಾರೆಗಳನ್ನು ಸಾಮಾನ್ಯವಾಗಿ ಗುರುತಿಸಿಲ್ಲ. ಅಪರೂಪವಾಗಿ ಗುರುತಿಸಿರುವ ಕಡೆ ಅವುಗಳನ್ನು ಕಿರಣಗಳಿಲ್ಲದ ಸಣ್ಣ ಬಟ್ಟುಗಳಾಗಿ ತೋರಿಸಿದೆ.

ಖಗೋಳದಲ್ಲಿ ಪ್ರಥಮವರ್ಗದ್ದಕ್ಕಿಂತ ಹೆಚ್ಚಿನ ಕಾಂತಿಯ ತಾರೆಗಳ ಸಂಖ್ಯೆ ಹನ್ನೆರಡೇ ; ವ್ಯಾವಹಾರಿಕವಾಗಿ ೧ ೧/೨ ಕಾಂತಿವರ್ಗಾಂಕದ ವರೆಗಿನ ತಾರೆಗಳನ್ನೂ

ಪ್ರಥಮವರ್ಗಕ್ಕೇ ಸೇರಿದವು ಎಂದಿಟ್ಟುಕೊಂಡರೆ ಸಂಖ್ಯೆ ಇಪ್ಪತ್ತಾಗುತ್ತದೆ. ಕಾಂತಿವರ್ಗಾಂಕವು ಏರಿದಂತೆಲ್ಲ ಆ ವರ್ಗದ ತಾರೆಗಳ ಸಂಖ್ಯೆ ಹಿಂದಿನ ವರ್ಗದವುಗಳಿಗಿಂತ ಸುಮಾರು ಮೂರರಷ್ಟು ಹೆಚ್ಚುತ್ತ ಹೋಗುತ್ತದೆ. ಸಮಗ್ರಖಗೋಳದಲ್ಲಿ ೨, ೩, ೪, ೫ ಮತ್ತು ೬ ನೆಯ ಕಾಂತಿವರ್ಗಾಂಕಗಳಿಗಿಂತ ಅಧಿಕ ಕಾಂತಿಯ ತಾರೆಗಳ ಸಂಖ್ಯೆ ಕ್ರಮವಾಗಿ ೪೦, ೧೩೫, ೪೫೦, ೧,೫೦೦ ಮತ್ತು ೪,೮೦೦. ಆದಕಾರಣ ಮಾನವದೃಷ್ಟಿಗೋಚರ ತಾರೆಗಳ ಒಟ್ಟು ಸಂಖ್ಯೆ ೪,೮೦೦ ನ್ನು ಮೀರಲಾರದು. ಆದರೆ ಖಗೋಳದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ನಾವು ಏಕಕಾಲದಲ್ಲಿ ನೋಡಲಸಾಧ್ಯವಾದುದರಿಂದ, ಮೇಘರಹಿತವಾದ ಅಮಾವಾಸ್ಯೆಯ ರಾತ್ರಿ ಸಮುದ್ರಮಧ್ಯದಿಂದ ನಾವು ಶುಭ್ರಾಕಾಶವನ್ನೆಲ್ಲ ವೀಕ್ಷಿಸಿದರೂ ನಮಗೆ ಕಾಣಬಹುದಾದ ನಕ್ಷತ್ರಗಳ ಸಂಖ್ಯೆ ಹೆಚ್ಚೆಂದರೆ ೨,೪೦೦ ; ಸಾಮಾನ್ಯವಾಗಿ ನಮಗೆ ಕಾಣುವುದು ಒಂದೂವರೆ ಸಾವಿರ ಮಾತ್ರ. ಆಕಾಶದಲ್ಲಿ ನಮಗೆ ಕಾಣುವ ನಕ್ಷತ್ರಗಳು ಅಗಣಿತ ಎಂದು ನಾವು ತಿಳಿದುಕೊಂಡಿರುವುದು ನಮ್ಮ ಭ್ರಮೆ. ಮಂಜುಮಂಜಾಗಿ ತೋರುವ ಆಕಾಶಗಂಗೆಯ ತಾರಾಗುಚ್ಛಗಳನ್ನು ಈ ಲೆಕ್ಕದಲ್ಲಿ ಸೇರಿಸಿಲ್ಲ.

ಪ್ರಥಮವರ್ಗದ ತಾರೆಗಳು ನಕ್ಷತ್ರಮಂಡಲದ ಹೆಗ್ಗುರುತುಗಳು—ಭೂಮಿಯ ಲಂಡನ್, ಪ್ಯಾರೀ, ನ್ಯೂಯಾರ್ಕ್, ಕಲ್ಕತ್ತ, ಟೋಕಿಯೋಗಳಂತೆ. ಅವುಗಳ ಪರಿಚಯ ಚೆನ್ನಾಗಿದ್ದರೆ ಇತರ ನಕ್ಷತ್ರಗಳ ಪರಿಚಯವನ್ನು ಸುಲಭವಾಗಿ ಮಾಡಿಕೊಳ್ಳಬಹುದು. ಆದಕಾರಣ ಕೆಳಗೆ ಆ ಪ್ರಥಮವರ್ಗದ ತಾರೆಗಳು, ಅವುಗಳ ಪಾಶ್ಚಾತ್ಯ ನಾಮಗಳು, ಅವು ಇರುವ ರಾಶಿನಾಮಗಳನ್ನೂ ಕೊಟ್ಟಿದೆ. ಒಂದು ರಾಶಿಗೆ ಸೇರಿದ ನಕ್ಷತ್ರಗಳನ್ನು ಗುರುತಿಸಲು ಪಾಶ್ಚಾತ್ಯರು ಕಾಂತಿಕ್ಷೀಣಕ್ರಮದಲ್ಲಿ ರಾಶಿನಾಮ α, β ಇತ್ಯಾದಿ ಗ್ರೀಕ್ ಅಕ್ಷರಗಳಿಂದ ಸೂಚಿಸುತ್ತಾರೆ. ಉದಾಹರಣೆಗೆ *beta* Ursa Majoris ಎಂದರೆ Ursa Major ಅಥವಾ ಸಪ್ತರ್ಷಿಮಂಡಲರಾಶಿಯಲ್ಲಿ ಕಾಂತಿಕ್ರಮದಲ್ಲಿ ಎರಡನೆಯ ನಕ್ಷತ್ರ ಎಂದರ್ಥ. ನಾವು ಇದರ ಬದಲು ಸಪ್ತರ್ಷಿ ಮಂಡಲ ದ್ವಿತೀಯ ಎಂದು ಹೇಳಬಹುದು.

ಕಾಂತಿಕ್ರಮದಲ್ಲಿ ನಕ್ಷತ್ರಮಂಡಲದ ಮೊದಲಿನಿಪ್ಪತ್ತೆರಡು ತಾರೆಗಳು

ತಾರೆ	ಕಾಂತಿವರ್ಗಾಂಕ	ರಾಶಿನಾಮ	ಪಾಶ್ಚಾತ್ಯ ತಾರಾನಾಮ
೧. (ಲುಬ್ಧಕ)	—೧.೫೮	ಮಹಾಶ್ವಾನ ಪ್ರಥಮ	Sirius
೨. (ಅಗಸ್ತ್ಯ)	—೦.೮೬	ದೇವನೌಕಾ ಪ್ರಥಮ	Canopus
೩. (ಅಭಿಜಿತ್)	೦.೧೪	ವೀಣಾ ಪ್ರಥಮ	Vega
೪. (ಬ್ರಹ್ಮಹೃದಯ)	೦.೨೧	ವಿಜಯ ಸಾರಥಿ ಪ್ರಥಮ	Capella

೫. (ಸ್ವಾತೀ)	೦.೨೪	ಸಹದೇವ ಪ್ರಥಮ	Arcturus
೬. ಕಿನ್ನರಬಾಹು (ವಾಮ)	೦.೩೩	ಕಿನ್ನರ ಪ್ರಥಮ	Rigil Kentaurus
೭. ವ್ಯಾಧಪೃಷ್ಠ	೦.೩೪	ಮಹಾವ್ಯಾಧ ದ್ವಿತೀಯ	Rigel
೮. ಶ್ವಾನಮುಖ	೦.೪೮	ಲಘುಶ್ವಾನ ಪ್ರಥಮ	Procyon
೯. ವೈತರಣೀಮುಖ	೦.೬೦	ವೈತರಣೀ ಪ್ರಥಮ	Achernar
೧೦. ಕಿನ್ನರ ಬಾಹು (ದಕ್ಷಿಣ)	೦.೮೬	ಕಿನ್ನರ ದ್ವಿತೀಯ	*beta* Centauri
೧೧. (ಶ್ರವಣ)	೦.೮೯	ಗರುಡ ಪ್ರಥಮ	Altair
೧೨. (ಆರ್ದ್ರಾ)	೦.೯೨	ಮಹಾವ್ಯಾಧ ಪ್ರಥಮ	Betelgeux
೧೩. (ರೋಹಿಣೀ)	೧.೦೬	ವೃಷಭ ಪ್ರಥಮ	Aldebaran
೧೪. (ಚಿತ್ರಾ)	೧.೨೧	ಕನ್ಯಾ ಪ್ರಥಮ	Spica
೧೫. ಲವ	೧.೨೧	ಮಿಥುನ ದ್ವಿತೀಯ	Pollux
೧೬. (ಜ್ಯೇಷ್ಠಾ)	೧.೨೨	ವೃಶ್ಚಿಕ ಪ್ರಥಮ	Antares
೧೭. ಮೀನಾಕ್ಷಿ	೧.೨೯	ದಕ್ಷಿಣ ಮೀನ ಪ್ರಥಮ	Fomalhaut
೧೮. ಹಂಸಾಕ್ಷಿ	೧.೩೩	ರಾಜಹಂಸ ಪ್ರಥಮ	Arided, Deneb
೧೯. (ಮಖ)	೧.೩೪	ಸಿಂಹ ಪ್ರಥಮ	Regulus
೨೦. ತ್ರಿಶಂಕು ಮಧ್ಯಮ	೧.೫೦	ತ್ರಿಶಂಕು ದ್ವಿತೀಯ	*beta* Crucis
೨೧. ತ್ರಿಶಂಕು ಶಿರ	೧.೫೮	ತ್ರಿಶಂಕು ಪ್ರಥಮ	Acrux
೨೨. ಕುಶ	೧.೫೮	ಮಿಥುನ ಪ್ರಥಮ	Castor

ಈ ನಕ್ಷತ್ರಗಳಲ್ಲಿ ೨೧ ಮತ್ತು ೨೨ನೆಯವಾದ ತ್ರಿಶಂಕು ಶಿರ ಮತ್ತು ಕುಶತಾರೆಗಳ ಕಾಂತಿವರ್ಗಾಂಕವು ೧.೫೮ ಆದಕಾರಣ ಅವು ದ್ವಿತೀಯವರ್ಗಕ್ಕೆ ಸೇರುತ್ತವೆ. ಒಂದು ರಾಶಿಯ ನಕ್ಷತ್ರಗಳನ್ನು ಕಾಂತಿಕ್ರಮದಲ್ಲಿ ಪ್ರಥಮ, ದ್ವಿತೀಯ ಎಂದು ಕರೆಯುವುದು ನಿಯಮವಾದರೆ ತ್ರಿಶಂಕು ಶಿರವನ್ನು ತ್ರಿಶಂಕು ದ್ವಿತೀಯವೆಂದು ಕರೆಯಬೇಕಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ತ್ರಿಶಂಕು ಶಿರದಲ್ಲಿ ವಾಸ್ತವವಾಗಿ ಹತ್ತಿರ ಹತ್ತಿರ ಎರಡು ತಾರೆಗಳಿವೆ. ಬರಿಯ ಕಣ್ಣಿಗೆ ಎರಡೂ ಸೇರಿ ಒಂದೇ ಆಗಿ ಕಾಣುತ್ತವೆ. ಇಂಥ ತಾರೆಗಳಿಗೆ ತಾರಾಯುಗ್ಮ[1]ಗಳೆಂದು ಹೆಸರು. ತ್ರಿಶಂಕು ಶಿರದ ಎರಡು ತಾರೆಗಳಲ್ಲಿ ಪ್ರತಿಯೊಂದೂ ದ್ವಿತೀಯವರ್ಗದ್ದೇ. ಆದರೆ ಅವೆರಡರ ಕಾಂತಿಯೂ ಒಟ್ಟಿಗೆ ಸೇರಿ ನಮಗೆ ಪ್ರಥಮವರ್ಗದ ತಾರೆಯೊಂದರಂತೆ ತೋರುತ್ತದೆ. ಹಿಂದಿನ ಕಾಲದ ಖಗೋಳಜ್ಞರಿಗೆ ಇದರ ಯಮಳಸ್ವಭಾವ ತಿಳಿದಿರಲಿಲ್ಲವಾಗಿ ಈ ಯುಗ್ಮವನ್ನು ತ್ರಿಶಂಕುಪ್ರಥಮವೆಂದು ಕರೆದರು. ನಾವು ಕೊಟ್ಟಿರುವ ೧.೫೮ ಈ ಯುಗ್ಮದ ಕಾಂತಿತರತಾರೆಯೊಂದರ ವರ್ಗಾಂಕ. ಮಿಥುನ

[1] Double Star.

ಪ್ರಥಮವಾದ ಕುಶತಾರೆಯೂ ಇಂಥ ಒಂದು ತಾರಾಯುಗ್ಮ. ರೋಹಿಣೀ ತಾರೆಯನ್ನು ಪ್ರಥಮವರ್ಗದ ನಿರ್ದಿಷ್ಟತಾರೆಯಾಗಿ ಆಗಲೇ ಆರಿಸಿದ್ದೇವೆ, ಹಾಗೆಯೇ ಮಹಾಶ್ವಾನ ದ್ವಿತೀಯವನ್ನು ದ್ವಿತೀಯವರ್ಗದ ನಿರ್ದಿಷ್ಟತಾರೆಯನ್ನಾಗಿಟ್ಟುಕೊಳ್ಳಬಹುದು.

ಪ್ರಥಮವರ್ಗಕ್ಕೆ ಸೇರದಿದ್ದರೂ ಇತರ ಕಾರಣಗಳಿಂದ ಹೆಸರುಪಡೆದಿರುವ ಕೆಲವು ನಕ್ಷತ್ರಗಳಿವೆ. ಲಘುಸಪ್ತರ್ಷಿ ಮಂಡಲದ ಧ್ರುವನಕ್ಷತ್ರವನ್ನೇ ಇದಕ್ಕೆ ಮೊದಲನೆಯ ನಿದರ್ಶನವಾಗಿ ತೆಗೆದುಕೊಳ್ಳಬಹುದು. ಈ ನಕ್ಷತ್ರವು ಸದ್ಯಕ್ಕೆ ಉತ್ತರ ಧ್ರುವಬಿಂದುವಿನಿಂದ ಒಂದೇ ಡಿಗ್ರಿ ಅಂತರದಲ್ಲಿರುವುದೇ ಇದರ ಖ್ಯಾತಿಗೆ ಕಾರಣ, ಸಪ್ತರ್ಷಿಮಂಡಲದ ಏಳು ನಕ್ಷತ್ರಗಳಿಗೂ ಮರೀಚಿ, ಅತ್ರಿ,[1] ಅಂಗಿರಸ, ಪುಲಸ್ತ್ಯ, ಪುಲಹ,[2] ಕ್ರತು[3] ಮತ್ತು ವಸಿಷ್ಠ[4] ಎಂಬ ಏಳು ಋಷಿಗಳ ಹೆಸರುಗಳಿವೆ. ಇವುಗಳಲ್ಲಿ ನಾಲ್ಕು ಹೆಸರುಗಳನ್ನು ಮೊದಲನೆಯ ನಕ್ಷೆಯಲ್ಲಿ ಗುರುತಿಸಿದೆ. ಉಳಿದ ಮೂರರಲ್ಲಿ ಯಾವ ಹೆಸರು ಯಾವ ನಕ್ಷತ್ರಕ್ಕೆ ಸೇರಿದ್ದೆಂದು ಸರಿಯಾಗಿ ತಿಳಿದಿಲ್ಲವಾದ ಕಾರಣ ಗುರುತಿಸಿಲ್ಲ. ವಸಿಷ್ಠತಾರೆಗೆ ಅತಿಸಮೀಪದಲ್ಲಿ—೧೧ ಕೋನ ನಿಮಿಷಗಳ ಅಂತರದಲ್ಲಿ ಅಂದರೆ ಚಂದ್ರಬಿಂಬವ್ಯಾಸದ ಮೂರನೆಯ ಒಂದರ ಅಂತರದಲ್ಲಿ—ಪಂಚಮವರ್ಗದ ಕಿರುತಾರೆಯೊಂದು ಇದೆ. ಈ ತಾರೆಗೆ ಆದರ್ಶ ಋಷಿಪತ್ನಿ ಅರುಂಧತಿಯ[5] ಹೆಸರಿನ್ನಿಟ್ಟಿದಾರೆ.

ರಾತ್ರಿಯಾಕಾಶದ ಸೌಂದರ್ಯವು ಏಕರೀತಿಯದಲ್ಲ, ಅದರ ಒಂದೊಂದು ಭಾಗವು ಒಂದೊಂದು ಬಗೆಯ ಸೊಬಗನ್ನು ನಮ್ಮ ಕಣ್ಣಮುಂದೆ ಚೆಲ್ಲುತ್ತದೆ. ಉದಾಹರಣೆಗೆ ನಾವು ವೃಷಭರಾಶಿಯ ಕಡೆಗೆ ನಮ್ಮ ಗಮನವನ್ನು ತಿರುಗಿಸಿದರೆ ಅದರ ಬೆಡಗಿನ ವೈಶಿಷ್ಟ್ಯವು ಅದರ ಎರಡು ತಾರಾಗುಚ್ಛಗಳಲ್ಲಿದೆಯೆಂದು ಕೂಡಲೆ ಹೊಳೆಯುತ್ತದೆ. ಮೊದಲನೆಯದು ಕೃತ್ತಿಕಾಗುಚ್ಛ[6]. ಬರಿಯ ಕಣ್ಣಿಗೆ ಕಾಣುವ ಮೂರು ನಾಲ್ಕು ಗುಚ್ಛಗಳಲ್ಲಿ ಕೃತ್ತಿಕೆಯು ಅತಿ ದಟ್ಟವಾದುದು ಮತ್ತು ಬಹು ಮುದ್ದಾದುದು. ಈ ಗುಚ್ಛದಲ್ಲಿ ಆರು ತಾರೆಗಳು ಪುಟ್ಟ ಸಪ್ತರ್ಷಿಮಂಡಲದ ಆಕಾರದಲ್ಲಿ ಮಿನುಗುತ್ತಿವೆ. (ಸಪ್ತಮ ಪಟ ೧ ನೋಡಿ.) ಇವೆಲ್ಲ ತೃತೀಯ, ಚತುರ್ಥ, ಪಂಚಮ ವರ್ಗದ ತಾರೆಗಳಾದರೂ ಒಟ್ಟಾಗಿರುವುದರಿಂದ ಗುಚ್ಛವು ಅಧಿಕ ಕಾಂತಿಯಿಂದ ಬೆಳಗುವಂತೆ ತೋರುತ್ತದೆ. ವೇದಗಳ ಕಾಲದಲ್ಲಿ ಕೃತ್ತಿಕೆಯು ವಸಂತ ವಿಷುವದ್ಬಿಂದುವಾಗಿತ್ತಾದ್ದರಿಂದ ಹೆಚ್ಚು ಪ್ರಾಶಸ್ತ್ಯ ಪಡೆದಿತ್ತು. ಐರೋಪ್ಯರು ಇದನ್ನು ಪ್ಲೀಯಡೀಸ್ ಅಥವಾ ಸಪ್ತಕನ್ಯೆಯರು ಎಂದು ಕರೆಯುತ್ತಾರೆ. ಅಟ್ಲಾಸನ ಏಳು ಮಕ್ಕಳು

[1] Phecda. [2] Merak. [3] Dubhe. [4] Mizar. [5] Alcor. [6] Pleiades.

ಇವರೆಂದೂ, ಒಂದಾನೊಂದು ಕಾಲದಲ್ಲಿ ಇವರು ಏಳೂ ತಾರೆಗಳಾಗಿದ್ದರೆಂದೂ, ಏನೋ ಕಾರಣವಾಗಿ ಇವರಲ್ಲೊಬ್ಬಳು ಈಚೆಗೆ ಅದೃಶ್ಯಳಾಗಿ ಈಗ ಆರು ಕನ್ಯೆಯರೇ, ಉಳಿದಿದ್ದಾರೆಂದೂ ಅವರ ಐತಿಹ್ಯ.

ರೋಹಿಣೀತಾರೆ ಮತ್ತು ಅದರ ಹತ್ತಿರದ ಶೃಂಗಾಕಾರದ ಇನ್ನೈದು ತಾರೆಗಳು ಸೇರಿ ವೃಷಭದ ಎರಡನೆಯ ಗುಚ್ಛವಾಗುತ್ತವೆ. ಈ ಗುಚ್ಛದ ತಾರೆಗಳು ಕೃತ್ತಿಕೆಯ ದರಷ್ಟು ಹತ್ತಿರ ಹತ್ತಿರವಿಲ್ಲ. ಗ್ರೀಕ್ ಪೌರಾಣಿಕ ಕತೆಗಳ ಪ್ರಕಾರ ಅಟ್ಲಾಸನ ಮತ್ತೊಬ್ಬ ಹೆಂಡತಿಯ ಏಳು ಹೆಣ್ಣುಮಕ್ಕಳೇ ಈ ತಾರಾಗುಚ್ಛ. ಇದಕ್ಕೆ ಹೈಅಡೀಸ್[1] ಎಂದು ಹೆಸರಿಟ್ಟಿದಾರೆ. ಕ್ರಾಂತಿವೃತ್ತಕ್ಕೆ ಅತಿ ಸಮೀಪದಲ್ಲಿರುವ ಪ್ರಕಾಶಮಾನವಾದ ನಕ್ಷತ್ರಗಳಲ್ಲಿ ರೋಹಿಣಿಯೂ ಒಂದು. ವೃತ್ತವನ್ನು ಹೆಚ್ಚು ಕಡಿಮೆ ನಾಲ್ಕು ಸಮಭಾಗಗಳಾಗಿ ತುಂಡರಿಸಿರುವ ಪ್ರಥಮವರ್ಗದ ಈ ರೋಹಿಣೀ, ಮಖಾ, ಜ್ಯೇಷ್ಠಾ ಮತ್ತು ಮೀನಾಕ್ಷಿಗಳು ರಾಜತಾರೆಗಳೆಂಬ[2] ಹೆಸರನ್ನು ಸಂಪಾದಿಸಿವೆ.

ಖಗೋಳದ ರಾಶಿಗಳಲ್ಲೆಲ್ಲಾ ಮಹಾವ್ಯಾಧರಾಶಿಯು ಸುಪ್ರಸಿದ್ಧವಾದುದು. ಇದು ವೃಷಭದ ಆಗ್ನೇಯ ಪಕ್ಕದ ರಾಶಿ. ಈ ರಾಶಿಯಲ್ಲಿಯೂ ಇದರ ಸುತ್ತ ಮುತ್ತಲ ಪ್ರದೇಶದಲ್ಲಿಯೂ ಇರುವಷ್ಟು ಪ್ರಕಾಶಮಾನ ತಾರೆಗಳು ಖಗೋಳದ ಇತರ ಯಾವ ಪ್ರದೇಶದಲ್ಲಿಯೂ ಇಲ್ಲದಿರುವುದೇ ಮಹಾವ್ಯಾಧರಾಶಿಯ ಖ್ಯಾತಿಗೆ ಕಾರಣ. ಮಹಾವ್ಯಾಧನ ಮಧ್ಯದಲ್ಲಿ ರಾಶಿಯ ಚತುರ್ಥ, ಪಂಚಮ, ಷಷ್ಠತಾರೆಗಳು ಮೂರು ಹತ್ತಿರ ಹತ್ತಿರದಲ್ಲಿ—೧⅔° ಗಳ ಕೋನಾಂತರ—ಇವೆ. ಈ ಗುಂಪಿಗೆ ವ್ಯಾಧ ಶೃಂಖಲ[3]ವೆಂದು ಹೆಸರು. ಶೃಂಖಲಕ್ಕೆ ದಕ್ಷಿಣದಲ್ಲಿ ೪° ಗಳ ಕೋನಾಂತರದಲ್ಲಿ ಮೂರು ಕಿರುತಾರೆಗಳ ತಾರಾಗುಚ್ಛವಿದೆ. ಈ ಗುಚ್ಛಕ್ಕೆ ವ್ಯಾಧಖಡ್ಗ[4]ವೆಂದು ಹೆಸರು. ಖಡ್ಗದ ಮಧ್ಯತಾರೆಯು ತಾರೆಯೇ ಅಲ್ಲ, ಇದು ಒಂದು ಜ್ಯೋತಿರ್ಮೇಘ—ಜ್ಯೋತಿರ್ಮಯ ತಾರಾಧೂಳಿ. ಖಗೋಳದಲ್ಲಿ ಅಸಂಖ್ಯಾಕ ಜ್ಯೋತಿರ್ಮೇಘಗಳಿದ್ದರೂ ಬರಿಯ ಕಣ್ಣಿಗೆ ಕಾಣುವ ಎರಡೇ ಎರಡರಲ್ಲಿ ಮಹಾವ್ಯಾಧನ ಈ ಜ್ಯೋತಿರ್ಮೇಘವೇ ಅಧಿಕ ಕಾಂತಿಯುತವಾದುದು. (ಷಷ್ಠ ಪಟ ನೋಡಿ.) ಈ ರಾಶಿಯ ಉತ್ತರಭಾಗದ ಮೃಗಶಿರವನ್ನು ಪಾಶ್ಚಾತ್ಯರು ಮಹಾವ್ಯಾಧನ ಸಿಂಹಾಜಿನ[5]ವೆಂದು ಕರೆಯುತ್ತಾರೆ. ಮೃಗಶಿರವೂ ಮೂರು ತಾರೆಗಳ ಗುಚ್ಛ.

ಆರ್ದ್ರಾನಕ್ಷತ್ರ, ವ್ಯಾಧಪೃಷ್ಠ, ರೋಹಿಣೀ ಮತ್ತು ಲುಬ್ಧಕಗಳು ಸೇರಿ ಥಳಥಳಿಸುವ ವಜ್ರಾಕೃತಿಯನ್ನು ತಾಳುತ್ತವೆ. ಈ ಮಹಾವಜ್ರದ ಕಾಂತಿಯು

---

[1] Hyades. [2] Royal star. [3] Orion's Belt [4] Sword of Orion. [5] Lion's Skin.

ವೈದೃಶ್ಯದಿಂದ ನಮ್ಮ ಗಮನವನ್ನು ಸೆಳೆಯಲೆಂಬಂತೆ ವ್ಯಾಧನ ದಕ್ಷಿಣಕ್ಕೆ ಪುಟ್ಟ ವಜ್ರಾಕೃತಿಯ ಶಶರಾಶಿಯಿಹೆ. ಖಗೋಳದಲ್ಲಿ ಹೆಸರು ಪಡೆದಿರುವ ಮತ್ತೊಂದು ನಕ್ಷತ್ರ ವಜ್ರವಿದೆ. ಚಿತ್ತಾ, ಸ್ವಾತಿ, ಕಾಳಭೈರವ ಪ್ರಥಮ ಮತ್ತು ಸಿಂಹರಾಶಿಯ ಉತ್ತರಾ ನಕ್ಷತ್ರಗಳು ಸೇರಿ ಕನ್ಯಾವಜ್ರ[1]ವೆಂದು ಹೆಸರುಗಳಿಸಿವೆ. ಕನ್ಯಾವಜ್ರಕ್ಕೆ ದಕ್ಷಿಣದಲ್ಲಿಯೂ ವರ್ತರೇಕಿನಂತೆ ಹಸ್ತಾರಾಶಿಯ ಚತುಷ್ಕೋಣವಿದೆ. ಧನಿಷ್ಠಾ ಪುಂಜವೂ ಪುಟ್ಟ ವಜ್ರಾಕೃತಿಯದು. ಚಿತ್ತಾ ನಕ್ಷತ್ರದಿಂದ ಪೂರ್ವಕ್ಕೆ ೨೦° ಗಳಲ್ಲಿ ವಿಶಾಖೆಯಿದೆ. ಕೃತ್ತಿಕೆಯು ವಸಂತ ವಿಷುವದ್ಬಿಂದುವಾಗಿದ್ದ ಕಾಲದಲ್ಲಿ ವಿಶಾಖೆಯು ಶರದ್ವಿಷುವದ್ಬಿಂದುವಾಗಿತ್ತು. ಈ ತಾರೆಯಲ್ಲಿ ಕ್ರಾಂತಿವೃತ್ತವು ವಿಷುವದ್ವೃತ್ತ ವನ್ನು ಎರಡು ಶಾಖೆಗಳಾಗಿ ವಿಭಜಿಸುತ್ತಿದ್ದರಿಂದಲೇ ಋಷಿಗಳು ಇದನ್ನು ವಿಶಾಖಾ ಎಂದು ಕರೆದರು. ವಿಶಾಖೆಯು ತುಲಾ ಪ್ರಥಮ.

ಪಾರ್ಥ ದ್ವಿತೀಯವಾದ ಸೈಂಧವವು[2] ಇನ್ನೊಂದು ಹೆಸರಾಂತ ತಾರೆ. ಇದು ಚಂಚಲತಾರೆ, ಆದರೆ ಹಿಂದೆ ವರ್ಣಿಸಿರುವಂಥ ಯೌಧಿಷ್ಠಿರ ಚಂಚಲತಾರೆಯಲ್ಲ. ಸೈಂಧವವು ಗ್ರಹಣಯುಗ್ಮವಾದುದರಿಂದ ಚಂಚಲತಾರೆಯಾಗಿದೆ. ಗ್ರಹಣಯುಗ್ಮಗಳ ಲಕ್ಷಣವನ್ನು ಮುಂದೆ ವಿವರವಾಗಿ ನಾವು ವಿಮರ್ಶಿಸಲಿದ್ದೇವೆ. ಚಂಚಲತಾರೆಗಳು ಆಕಾಶದಲ್ಲಿ ಹೇರಳವಾಗಿದ್ದರೂ ಸೈಂಧವವು ಮಾನವನು ಮೊದಲು ಪತ್ತೆಹಚ್ಚಿದ ಚಂಚಲತಾರೆ. ಈ ನಕ್ಷತ್ರದ ಆವರ್ತಕ ಕಾಂತಿಲಕ್ಷಣವನ್ನು ಅರೇಬಿಯದ ಖಗೋಳಜ್ಞರು ಮೊಟ್ಟಮೊದಲು ಕಂಡುಹಿಡಿದು ಅದರ ವಿಚಿತ್ರ ನಡತೆಗೆ ಬೆರಗಾಗಿ ಇದನ್ನು ಪಿಶಾಚಿತಾರೆಯೆಂದು ಕರೆದರು.

ಸೈಂಧವವು ಪಿಶಾಚಿತಾರೆಯೆಂದು ಹೆಸರುಪಡೆದಿದ್ದರೆ ಮತ್ತೊಂದು ಚಂಚಲ ತಾರೆಯು ಕೌತುಕದ ತಾರೆಯೆಂದೆನ್ನಿಸಿಕೊಂಡಿದೆ. ಇದು ತಿಮಿಂಗಿಲ ಪಂಚದಶವಾದ ಮೀರಾ[3]ತಾರೆ. ಈ ನಕ್ಷತ್ರದ ಕಾಂತಿವರ್ಗಾಂಕವು ೧.೭ ರಷ್ಟಕ್ಕೆ ಹೆಚ್ಚಿ ೯.೬ ರಷ್ಟು ಕಾಂತಿಹೀನವಾಗುತ್ತದೆ. ಅಂದರೆ ಕಣ್ಣಿಗೆ ಕಾಣದಂತಾಗುವುದೇ ಅಲ್ಲದೆ ಸಾಮಾನ್ಯ ದೂರದರ್ಶಿನಿಗಳಿಗೂ ಕಾಣದಾಗುತ್ತದೆ. ಇದರ ಆವರ್ತಕಾಲ ೩೩೧ ದಿನಗಳು. ಮೀರಾತಾರೆಯು ಗ್ರಹಣಯುಗ್ಮವೂ ಅಲ್ಲ, ಯೌಧಿಷ್ಠಿರ ಚಂಚಲತಾರೆಯೂ ಅಲ್ಲ. ಮೀರಾ ನಕ್ಷತ್ರದ ಮತ್ತು ಇಂಥ ಇತರ ದೀರ್ಘಕಾಲಿಕ ರಕ್ತಚಂಚಲತಾರೆಗಳ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಲು ಇನ್ನೂ ಸಾಧ್ಯವಾಗಿಲ್ಲ. ಮೀರಾ ನಿಜವಾಗಿಯೂ ಕೌತುಕದ ತಾರೆಯೇ. ಈ ವಿಷಯದಲ್ಲಿಯೂ ಹೆಚ್ಚು ವಿಚಾರ ಮುಂದೆ ಮಾಡಬೇಕಾಗಿದೆ.

---

[1] Diamond of Virgin. [2] Algol. [3] Mira, o-Ceti.

೬. ನಕ್ಷತ್ರಮಂಡಲದ ಕೋನಾಂತರಗಳ ಅಂದಾಜು

ಖಗೋಳದ ಎರಡು ಬಿಂದುಗಳ ಅಥವಾ ತಾರೆಗಳ ಅಂತರವನ್ನು ಇಷ್ಟು ಡಿಗ್ರಿಗಳು, ಇಷ್ಟು ಕೋನ ನಿಮಿಷಗಳೆಂದು ನಾವು ಇದುವರೆಗೆ ಆಗಾಗ್ಗೆ ವಿವರಿಸಿದ್ದೇವೆ. ಕೋನಾಂತರವನ್ನು ನಿಖರವಾಗಿ ಅಳೆಯಲು ಯಂತ್ರೋಪಕರಣಗಳು ಅವಶ್ಯವಾದರೂ ಒಂದು ಡಿಗ್ರಿಯು ಖಗೋಳದಲ್ಲಿ ಎಷ್ಟು ಅಂತರವನ್ನು ಸೂಚಿಸುತ್ತದೆಂಬುದನ್ನು ಸುಮಾರಾಗಿಯಾದರೂ ನಾವು ತಿಳಿದುಕೊಳ್ಳಬೇಕಾದುದು ಅಗತ್ಯ. ಇದಕ್ಕಾಗಿ ನಿರ್ದಿಷ್ಟವಾದ ಕೋನಾಂತರಗಳ ಕೆಲವು ಜೊತೆ ತಾರೆಗಳನ್ನು ನಾವು ನಕ್ಷತ್ರಗೋಳದ ಅಡಿಕಡ್ಡಿಗಳನ್ನಾಗಿ ಆರಿಸಿಕೊಳ್ಳಬೇಕು. ಮೊದಲನೆಯದಾಗಿ ಚಂದ್ರನನ್ನೇ ತೆಗೆದುಕೊಳ್ಳಬಹುದು. ಪೂರ್ಣ ಚಂದ್ರಬಿಂಬದ ವ್ಯಾಸದ ಕೋನಾಂತರವು ಅರ್ಧ ಡಿಗ್ರಿ. ಅನಂತರ ವ್ಯಾಧಶೃಂಖಲದ ಮಧ್ಯತಾರೆಗೂ ಅದಕ್ಕೆ ಉತ್ತರದ ತಾರೆಗೂ—ವ್ಯಾಧ ಚತುರ್ಥ ಪಂಚಮ ತಾರೆಗಳಿಗೆ—ಇರುವ ಅಂತರ ೧½ ಡಿಗ್ರಿಗಳು. ವ್ಯಾಧಶೃಂಖಲದ ತುದಿ ತಾರೆಗಳ—ಚತುರ್ಥ ಷಷ್ಠ ತಾರೆಗಳ—ಅಂತರ ೩ ಡಿಗ್ರಿಗಳು; ವ್ಯಾಧಶೃಂಖಲವನ್ನು ಖಗೋಳದ ಗಜಕಡ್ಡಿ ಎಂದೆನ್ನಬಹುದು. ಶ್ರವಣ ತಾರೆಗೂ ಅದರ ಸಮೀಪದಲ್ಲಿ ಉತ್ತರಕ್ಕಿರುವ ತೃತೀಯ ವರ್ಗದ ತಾರೆಗೂ ೨° ಗಳ ಅಂತರವಿದೆ. ಲಘುಶ್ವಾನದ ಪ್ರಥಮ ದ್ವಿತೀಯಗಳಿಗೂ ಅಥವಾ ತ್ರಿಶಂಕು ಪ್ರಥಮ ದ್ವಿತೀಯಗಳಿಗೂ ಇರುವ ಅಂತರವು ೪°. ಸಪ್ತರ್ಷಿಮಂಡಲದ ಧ್ರುವದಿಕ್ಸೂಚಕಗಳಾದ ಪುಲಹ ಕ್ರತುಗಳಿಗೂ ಅಥವಾ ಕಿನ್ನರ ಬಾಹುಗಳಿಗೂ ೫° ಗಳ ಅಂತರವಾಗುತ್ತದೆ. ಬೆಂಗಳೂರಿನಲ್ಲಿ ಧ್ರುವತಾರೆಯ ಕೋನೋನ್ನತಿಯು ೧೩° ಅಥವಾ ಭಾರತೀಯ ಗಣನೆಯಂತೆ ಒಂದು **ನಕ್ಷತ್ರಾಂತರಕ್ಕೆ** ಸಮ. ಧ್ರುವತಾರೆಯಿಂದ ಕ್ರತುವಿಗಿರುವ ಅಂತರವು ೨೮° ಗಳು; ಮತ್ತು ಧ್ರುವತಾರೆಯಿಂದ ಕುಂತೀ ದ್ವಿತೀಯಕ್ಕಿರುವ ಅಂತರವು ೩೦° ಗಳು, ನಮ್ಮ ಒಂದು ರಾಶಿಗೆ ಸಮ. ಹೀಗೆಯೇ ನಕ್ಷೆಗಳ ಸಹಾಯದಿಂದ ಪಾಠಕರು ಇತರ ಮಾನಗಳನ್ನು ನಿರ್ಮಿಸಿಕೊಳ್ಳಬಹುದು.

ಇನ್ನು ಖಗೋಳದ ಎರಡು ಪ್ರಧಾನ ಮಹಾವೃತ್ತಗಳಾದ ವಿಷುವದ್ವೃತ್ತ ಮತ್ತು ಕ್ರಾಂತಿವೃತ್ತಗಳ ಪರಿಚಯ ಮಾಡಿಕೊಳ್ಳಬೇಕಾಗಿದೆ. ವಿಷುವದ್ವೃತ್ತವು ಮಹಾವ್ಯಾಧ ಚತುರ್ಥದ (ಶೃಂಖಲದ ಉತ್ತರತಮ ತಾರೆ) ಮೂಲಕ ಹಾಯ್ದು, ಕನ್ಯಾಷಷ್ಠ—ಚಿತ್ರಾತಾರೆಗೆ ೧೦° ಉತ್ತರದ ತೃತೀಯವರ್ಗದ ತಾರೆ—ಕುಂಭ ಪ್ರಥಮಗಳನ್ನು ಎಟುಕಿಕೊಂಡು ಹೋಗುತ್ತದೆ. ಶ್ರವಣತಾರೆಯು ವಿಷುವದ್ವೃತ್ತದಿಂದ ೯° ಗಳು ಉತ್ತರಕ್ಕಿದೆ. ಕ್ರಾಂತಿವೃತ್ತವು ಕೃತ್ತಿಕಾ (೩) ರೋಹಿಣೀ (೪) ತಾರೆಗಳ ಮಧ್ಯದಿಂದ ಹೊರಟು, ಮಿಥುನ ಚತುರ್ಥ, ಮಖಾ (೧೦) ತಾರೆಗಳನ್ನು

ಮುಟ್ಟಿ, ಚಿತ್ರಾ (೧೪) ವಿಶಾಖಾ (೧೬) ನಕ್ಷತ್ರಗಳ ಬಳಿ ಸಾರಿ, ಉತ್ತರಾಷಾಢಾ (೨೧) ತಾರೆಗೆ ೪° ಉತ್ತರದಲ್ಲಿ ಸಾಗಿ ಶತಭಿಷಾ (೨೪) ತಾರೆಯನ್ನು ಎಟುಕಿಕೊಂಡು ರೇವತೀ (೨೭) ತಾರೆಯನ್ನು ಸೇರುತ್ತದೆ.


ಈ ಎರಡು ವೃತ್ತಗಳಲ್ಲದೆ ಪ್ರಥಮ ದ್ವಿತೀಯ ವರ್ಗಗಳ ತಾರೆಗಳಿಂದ ಕಿಕ್ಕಿರಿದ ಕಾಂತಿತಾರಾರಾಶಿಗಳ ಶ್ರೇಣಿಯೊಂದು ನಭಾಂಗಣದ ಹೆದ್ದಾರಿಯಂತೆ ನಕ್ಷತ್ರಮಂಡಲವನ್ನು ಒಂದು ಮಹಾವೃತ್ತದಲ್ಲಿ ಬಳಸಿದೆ. ಹೆದ್ದಾರಿಗೆ ಹಾಸಿರುವ ರಾಶಿಗಳು ವೃಷಭ, ಮಹಾವ್ಯಾಧ, ಮಹಾಶ್ವಾನ, ನೌಕಾಪೃಷ್ಠ, ನೌಕಾಪಟ, ದೇವನೌಕಾ, ತ್ರಿಶಂಕು, ಕಿನ್ನರ, ವೃಕ, ವೃಶ್ಚಿಕ, ಉರಗಧರ, ಭೀಮ, ವೀಣಾ, ರಾಜಹಂಸ, ಯುಧಿಷ್ಠಿರ, ಕುಂತಿ ಮತ್ತು ಪಾರ್ಥ. ಈ ರಾಶಿಸ್ತೋಮವನ್ನು ಪಾಶ್ಚಾತ್ಯರು 'ಗೌಲ್ಡನ ಬೆಲ್ಟ್'[1] ಎಂದು ಕರೆಯುತ್ತಾರೆ. ಇದನ್ನು ನಾವು ಭುವನಮೋಹಿನೀ ಮೇಖಲಾ ಅಥವಾ ಸಂಕ್ಷೇಪವಾಗಿ ಮೋಹಿನೀಮೇಖಲಾ ಎಂದು ಕರೆಯಬಹುದು. ಮೇಖಲೆಯು ಉದ್ದಕ್ಕೂ ಆಕಾಶಗಂಗೆಯ ಪಶ್ಚಿಮದ ಪಕ್ಕಕ್ಕೆ ಅಂಟಿಕೊಂಡಿದೆ. ಆಕಾಶಗಂಗೆಯ ಒಡ್ಯಾಣಕ್ಕೆ ರಾಶಿಸ್ತೋಮವು ಮುತ್ತು, ವಜ್ರ, ಪಚ್ಚೆ, ಹವಳಗಳ ಗೆಜ್ಜೆಯನ್ನು ಹೆಣೆದಂತೆ ತೋರುತ್ತದೆ ಎಂದು ಹೇಳಿದರೆ ತಲೆಯೆತ್ತಿ ನಕ್ಷತ್ರಮಂಡಲವನ್ನು ಪರೀಕ್ಷಿಸಿರುವ ಯಾರೂ ಇದು ಬರಿಯ ಆಲಂಕಾರಿಕ ವಾಕ್ಯವೆಂದೆನ್ನಲಾರರು.

೭. ಧ್ರುವಪಥವೃತ್ತ; ಕ್ರಾಂತಿಧ್ರುವ

ಭೂಭ್ರಮಣದ ಅಕ್ಷವು ಭೂಪಥತಲಕ್ಕೆ ಸಮಕೋನದ ರೇಖೆಯನ್ನು ೨೩$\frac{೧}{೨}$° ಗಳ ಕೋನದಲ್ಲಿ ಮಂದವೇಗದಿಂದ ಸುತ್ತುತ್ತಿದೆಯೆಂದು ಹಿಂದೆಯೇ ತಿಳಿಸಿದೆ. ಈ ಸಮಕೋನದ ರೇಖೆಯು ಖಗೋಳವನ್ನು ಸಂಧಿಸುವ ಬಿಂದುಗಳಿಗೆ ಕ್ರಾಂತಿಧ್ರುವ ಬಿಂದು[2]ಗಳೆಂದು ಹೆಸರು. ಭೂಮಿಯ ಅಕ್ಷದ ದಿಕ್ಕು ಖಗೋಳದಲ್ಲಿ ನಿಧಾನವಾಗಿ ಬದಲಿಸುತ್ತಿರುವುದರಿಂದ ಉತ್ತರ ದಕ್ಷಿಣ ಧ್ರುವಬಿಂದುಗಳು ಕ್ರಾಂತಿಧ್ರುವಗಳನ್ನು ಅಪ್ರದಕ್ಷಿಣೆ ಮಾಡುತ್ತಿರುವಂತೆ ತೋರುತ್ತವೆ. (ಚಿತ್ರ ೯-೧೦) ಅಕ್ಷಧ್ರುವವು ಕ್ರಾಂತಿಧ್ರುವವನ್ನು ಒಂದು ಸಂಪೂರ್ಣ ಅಪ್ರದಕ್ಷಿಣೆ ಮಾಡಲು ಸುಮಾರು ೨೫,೮೦೦ ವರ್ಷಗಳು ಹಿಡಿಯುತ್ತವೆ. ವಿಷುವದ್ಬಿಂದುಗಳ ಅಪ್ರದಕ್ಷಿಣೆಯು[3] ಧ್ರುವಗಳ ಅಪ್ರದಕ್ಷಿಣೆಯಿಂದ ಫಲಿಸುವುದರಿಂದ, ವಿಷುವದ್ಬಿಂದುಗಳು ಕ್ರಾಂತಿವೃತ್ತವನ್ನು ಒಂದುಸಲ ಪೂರ್ತಿಯಾಗಿ ಅಪ್ರದಕ್ಷಿಣೆ ಮಾಡಲೂ ೨೫,೮೦೦ ವರ್ಷಗಳೆಂದೇ ಆಯಿತು.

---

[1] Gould's Belt. [2] Poles of the Ecliptic. [3] Precession of the Equinoxes.



ಚಿತ್ರ ೯-೧೦. ಬುಗುರಿಯ ಮತ್ತು ಭೂಮಿಯ ಭ್ರಮಣಗಳು

ಬುಗುರಿಯ ಅಕ್ಷವು ಊರ್ಧ್ವರೇಖೆಗೆ ಓರೆಯಾಗಿರುವಂತೆ ಭೂಮಿಯ ಅಕ್ಷವು ಕ್ರಾಂತಿಧ್ರುವರೇಖೆಗೆ ಓರೆಯಾಗಿದೆ. ಆದರೆ ಬುಗುರಿಯ ಅಕ್ಷವು ಊರ್ಧ್ವರೇಖೆಯನ್ನು ಪ್ರದಕ್ಷಿಣೆಮಾಡುತ್ತಿದೆ, ಅಲ್ಲದೆ ಅಕ್ಷಕ್ಕೂ ಊರ್ಧ್ವರೇಖೆಗೂ ಇರುವ ಕೋನವು ಬರಬರುತ್ತ ಹೆಚ್ಚುತ್ತ ಹೋಗುತ್ತದೆ. ಭೂಮಿಯ ಅಕ್ಷವಾದರೋ ಕ್ರಾಂತಿಧ್ರುವರೇಖೆಯನ್ನು ಅಪ್ರದಕ್ಷಿಣೆ ಮಾಡುತ್ತಿದೆ, ಮತ್ತು ಅಕ್ಷಕ್ಕೂ ಕ್ರಾಂತಿಧ್ರುವರೇಖೆಗೂ ಇರುವ ಕೋನಾಂತರವು ಅತಿ ಮಂದವೇಗದಿಂದ ಕಡಮೆಯಾಗುತ್ತಿದೆ.

ಉತ್ತರ ದಕ್ಷಿಣ ಧ್ರುವಪಥವೃತ್ತಗಳನ್ನು ೧ ನೆಯ ಮತ್ತು ೪ ನೆಯ ನಕ್ಷೆಗಳಲ್ಲಿ ತೋರಿಸಿದೆ. ೧ ನೆಯ ನಕ್ಷೆಯಲ್ಲಿ ವರಾಹಮಿಹಿರನ, ವೇದಾಂಗಜ್ಯೋತಿಷದ, ಪಿರಮಿಡ್ಡುಗಳ ಮತ್ತು ಕಲಿಯುಗಾದಿಯ ಕಾಲಗಳಲ್ಲಿಯ ಧ್ರುವಬಿಂದುವಿನ ಸ್ಥಾನಗಳನ್ನೂ ಗುರುತಿಸಿದೆ. ನಮ್ಮ ಕಾಲದಲ್ಲಿ ಧ್ರುವಬಿಂದುವು ಧ್ರುವತಾರೆಯಿಂದ ೧° ಅಂತರದಲ್ಲಿರುವುದೂ ಗೊತ್ತಾಗುತ್ತದೆ. ಕ್ರಿ.ಶ. ೧೩,೮೦೦ ರ ಹೊತ್ತಿಗೆ ಉತ್ತರ ಧ್ರುವಬಿಂದುವು ಪ್ರಥಮವರ್ಗದ ಅಭಿಜಿತ್ ತಾರೆಯ ಸಮೀಪದಲ್ಲಿರುತ್ತದೆ. ಆಗ ಅಭಿಜಿತ್ ತಾರೆಯು ಧ್ರುವತಾರೆಯೆಂದು ಕರೆಸಿಕೊಳ್ಳುವುದು. ೪ ನೆಯ ನಕ್ಷೆಯಲ್ಲಿ ದಕ್ಷಿಣಧ್ರುವಪಥವೃತ್ತವನ್ನು ಗುರುತಿಸಿದೆ. ಕ್ರಿ.ಶ. ೧೩,೮೦೦ ರ ಸುಮಾರಿನಲ್ಲಿ ದಕ್ಷಿಣಧ್ರುವಬಿಂದುವು ಪ್ರಥಮವರ್ಗದ ಅಗಸ್ತ್ಯತಾರೆಗೆ ೭-೮ ಡಿಗ್ರಿಗಳಷ್ಟು ಸಮೀಪದಲ್ಲಿರುತ್ತದೆ. ಈ ಧ್ರುವಚಲನೆಯ ಕಾರಣವಾಗಿ ಪ್ರತಿಯೊಂದು ಸ್ಥಳಕ್ಕೂ ಕಾಲಕಾಲಕ್ಕೆ ನಕ್ಷತ್ರಮಂಡಲದ ದೃಶ್ಯವು ಬದಲಿಸುತ್ತಿರುತ್ತದೆ. ಉದಾಹರಣೆಗೆ ಇಟಲಿ, ಗ್ರೀಸ್ ದೇಶಗಳಿಗೆ ಈಗ ತ್ರಿಶಂಕು, ಕಿನ್ನರ ನಕ್ಷತ್ರಪುಂಜಗಳು ಸದಾ ಅಗೋಚರಗಳು. ಆದರೆ ಎರಡು ಮೂರು ಸಾವಿರ ವರ್ಷಗಳ ಹಿಂದೆ ಧ್ರುವಸ್ಥಾನಗಳು ಬೇರೆ ಇದ್ದುದರಿಂದ ಈ ತಾರಾಪುಂಜಗಳು ಗ್ರೀಸ್, ಇಟಲಿಗಳಿಗೂ ಆಗ ಕೊಂಚಕಾಲ ಕಾಣುತ್ತಿದ್ದುವು. ಅದರಿಂದಲೇ ಹೋಮರ್ ಕವಿಯ ಮಹಾಕಾವ್ಯಗಳಲ್ಲಿ ಈ ನಕ್ಷತ್ರಪುಂಜಗಳ ವರ್ಣನೆ ಇದೆ. ಇನ್ನು ೧೦,೦೦೦ ವರ್ಷಗಳು ಕಳೆದ ಮೇಲೆ ನಮ್ಮ ದೇಶಕ್ಕೆ ಅಗಸ್ತ್ಯತಾರೆಯು ದಕ್ಷಿಣಪರಿಧ್ರುವ ವೃತ್ತದೊಳಗೆ ಸೇರಿ ಅಗೋಚರವಾಗುವುದು.

ಮೇಲಿನ ವಿವರಣೆಯಿಂದ ಖಗೋಳದಲ್ಲಿ ವಿಷುವದ್ರೇಖೆಯು ಕಾಲಕಳೆದಂತೆ ಬೇರೆ ಬೇರೆ ರಾಶಿಗಳ ಮೂಲಕ ಹಾದುಹೋದರೂ ಕ್ರಾಂತಿವೃತ್ತವು ನಕ್ಷತ್ರಮಂಡಲಕ್ಕೆ ಸಾಪೇಕ್ಷವಾಗಿ ಸ್ಥಿರವೆಂಬ ಅರ್ಥ ಬರುತ್ತದೆ. ಇದು ಅಷ್ಟು ಸರಿಯಲ್ಲ, ಏಕೆಂದರೆ ಈ ವಿಶ್ವದಲ್ಲಿ ಸ್ಥಿರವೆಂಬುದು ಯಾವುದೂ ಇಲ್ಲ. ಕ್ರಾಂತಿವೃತ್ತವೂ ಹೀಗೆ ಸ್ಥಿರವಲ್ಲವಾದರೂ ಅದರ ಚಲನೆಯು ಅತಿ ಮಂದ. ನಕ್ಷತ್ರಮಂಡಲಕ್ಕೆ ಸಾಪೇಕ್ಷವಾಗಿ ಕ್ರಾಂತಿವೃತ್ತವು ವರ್ಷ ಒಂದಕ್ಕೆ ಅರ್ಧಕೋನಸೆಕೆಂಡಿನಂತೆ (ನಿಖರವಾಗಿ ೦.೪೭೦೮) ಸರಿಯುತ್ತಿದೆಯೆಂದು ವೀಕ್ಷಣೆಗಳಿಂದ ತಿಳಿದುಬಂದಿದೆ. ಅಕ್ಷಧ್ರುವ, ಕ್ರಾಂತಿಧ್ರುವಗಳಿಗಿರುವ ಕೋನಾಂತರವೂ ಕೂಡ ಇದೇ ವೇಗದಲ್ಲಿ ಕಡಿಮೆಯಾಗುತ್ತಿದೆ.

ಭೂಮಿಯ ಅಕ್ಷದ ಚಲನೆಯ ತೊಡಕು ಇಷ್ಟಕ್ಕೂ ನಿಂತಿಲ್ಲ. ನಾವು ೧ ನೆಯ ಮತ್ತು ೪ ನೆಯ ನಕ್ಷೆಗಳಲ್ಲಿ ತೋರಿಸಿರುವಂತೆ ಧ್ರುವಪಥವು ಸರಾಗ


ವೃತ್ತಾಕಾರದಲ್ಲಿಲ್ಲ, ಸಣ್ಣ ವಂಕಿಯ ವೃತ್ತಾಕಾರದಲ್ಲಿದೆ. ಇದಕ್ಕೆ ಚಂದ್ರನು ಕಾರಣ. ನಾವು ಸಾಮಾನ್ಯವಾಗಿ ಚಂದ್ರನು ಭೂಪ್ರದಕ್ಷಿಣೆ ಮಾಡುತ್ತಿದಾನೆಂದು ಹೇಳುತ್ತೇವೆ. ನಿಜವಾಗಿ ನೋಡಿದರೆ ಭೂಮಿ ಚಂದ್ರರು ಪರಸ್ಪರ ಪ್ರದಕ್ಷಿಣೆ ಮಾಡುತ್ತಿದಾರೆ. ಆದರೆ ಭೂಮಿಯು ಚಂದ್ರನಿಗಿಂತ ಬಹಳ ಭಾರಕಾಯನಾದುದ ರಿಂದ ಭೂಮಿಯ ಚಂದ್ರಪ್ರದಕ್ಷಿಣ ಪಥವೃತ್ತವು ಬಹಳ ಸಣ್ಣದು, ಸುಮಾರು ೩,೦೦೦ ಮೈಲಿಗಳ ತ್ರಿಜ್ಯದ್ದು. ಅಂತೂ ಇದರ ಕಾರಣವಾಗಿ ಭೂಮಿಯ ವಿವಿಧ ಭಾಗಗಳ ಮೇಲೆ ಚಂದ್ರನ ಆಕರ್ಷಣ ಬಲವು ಬೇರೆ ಬೇರೆಯಾಗಿ ಧ್ರುವಪಥವೃತ್ತ ದಲ್ಲಿ ಸೂಕ್ಷ್ಮ ಬದಲಾವಣೆಗಳಾಗುತ್ತವೆ. ಇದರಿಂದ ವೃತ್ತವು ವಂಕಿಯಾಗುತ್ತದೆ.

೫. ಆಕಾಶಕಾಯಗಳ ಭಾರ, ಉಷ್ಣಾಂಶ, ಗಾತ್ರಗಳ ನಿರ್ಣಯ

೧. ಭೂಮಿ ಸೂರ್ಯರ ಭಾರ

ವಿಶ್ವದ ದೂರಗಳಿಗೆ ಭೂಮಿಯ ವ್ಯಾಸವೇ ಅಡಿಗಡ್ಡಿ ಎಂಬುದನ್ನು ಗ್ರಹಿಸಿ ದ್ದೇವೆ. ಹಾಗೆಯೇ ಆಕಾಶಕಾಯಗಳ ಭಾರಕ್ಕೆ ಭೂಮಿಯು ತೂಕದ ಕಲ್ಲು ಎಂದು ಹೇಳಬಹುದು. ಭೂಮಿಯು ಒಂದು ಪುಟ್ಟ ಚಿನ್ನದ ಗೋಳದಮೇಲೆ ಪ್ರಯೋಗಿಸುವ ಆಕರ್ಷಣ ಬಲವನ್ನು ಅಂದರೆ ಆ ಗೋಳದ ತೂಕವನ್ನು ಆದೇ ಗೋಳದ ಮೇಲೆ ಒಂದು ದೊಡ್ಡ ಸೀಸದ ಅಥವಾ ಚಿನ್ನದ ಗೋಳವು ಪ್ರಯೋಗಿಸುವ ಆಕರ್ಷಣ ಬಲದೊಂದಿಗೆ ಹೋಲಿಸಿ ಎರಡು ಬಲಗಳ ಪ್ರಮಾಣದಿಂದ ಭೌತವಿಜ್ಞಾನಿಯು ಭೂಮಿಯ ವಸ್ತುಸಾಮಗ್ರಿಯು ಆ ಸೀಸದ ಗೋಳದ ಸಾಮಗ್ರಿಗಿಂತ ಎಷ್ಟರಷ್ಟು ದೊಡ್ಡದು ಎಂದು ಗುಣಿಸಿ ಭೂಮಿಯ ಭಾರ (ಜಡತ್ವ)ವನ್ನು ನಿರ್ಣಯಿಸಿದಾನೆ. (ಚಿತ್ರ ೧೧.) ಇದು ಹತ್ತು ತೊಲಗಳ ತೂಕದ ಒಂದು ಪದಾರ್ಥಕ್ಕೂ ಹತ್ತು ತೊಲದ ಮೇಲೆ ಒಂದು ತೊಲದ ಲಕ್ಷಾಂಶದಷ್ಟು ಹೆಚ್ಚಾಗಿ ತೂಗುವ ಇನ್ನೊಂದು ಪದಾರ್ಥಕ್ಕೂ ಇರುವ ತೂಕ ವ್ಯತ್ಯಾಸವನ್ನು ನಿಷ್ಕೃಷ್ಟವಾಗಿ ನಿರ್ಣಯಿಸಿದಂತೆ! ಇಂಥ ಸೂಕ್ಷ್ಮಪ್ರಯೋಗಗಳಿಂದ ಭೂಮಿಯ ಭಾರವು ೬ ಕೋಟಿ ಕೋಟಿ ಕೋಟಿ (೬×೧೦⁻²¹) ಟನ್‌ಗಳೆಂದು ನಿರ್ಧರವಾಗಿದೆ.

ಸೂರ್ಯ ಭೂಮಿಗಳಿಗಿರುವ ದೂರವೂ, ಸೂರ್ಯನನ್ನು ಭೂಮಿಯು ಪ್ರದಕ್ಷಿಣೆ ಮಾಡುವ ಕಾಲವೂ ತಿಳಿದಿರುವುದರಿಂದ ನ್ಯೂಟನನ ಗುರುತ್ವಾಕರ್ಷಣ ನಿಯಮ ಗಳಿಂದ ಸೂರ್ಯನ ಭಾರವನ್ನು ಈಗ ಗುಣಿಸಬಹುದು. ಭೂಮಿಯ ಭಾರವನ್ನು ಟನ್‌ಗಳಲ್ಲಿ ಹೇಳಿದರೇ ೨೨ ಅಂಕೆಗಳ ದೊಡ್ಡ ಸಂಖ್ಯೆಯಾಗಿದೆ ಎನ್ನುವುದನ್ನು ನೋಡಿದ್ದೇವೆ. ಇನ್ನು ಸೂರ್ಯನ ಭಾರಕ್ಕೆ ಎಷ್ಟು ಸಂಖ್ಯೆಗಳನ್ನು ಉಪಯೋಗಿಸ



ಚಿತ್ರ ೧೧. ಭೂಮಿಯ ಭಾರವನ್ನು ನಿರ್ಣಯಿಸುವ ವಿಧಾನ

A ಚಿತ್ರದಲ್ಲಿ ಚಿನ್ನದ ಗೋಳದ (ಚಿ) ಮತ್ತು ತೂಕದ ಕಲ್ಲುಗಳ ಸಮಭಾರ ಸ್ಥಿತಿಯನ್ನು ತಕ್ಕಡಿಯ ಮುಳ್ಳು ಸೂಚಿಸುತ್ತದೆ.

B ಚಿತ್ರದಲ್ಲಿ ಚಿನ್ನದ ಗೋಳದ ಕೆಳಗೆ ದೊಡ್ಡ ಸೀಸದ ಗೋಳವೊಂದನ್ನು (ಸೀ) ಇಟ್ಟಿದೆ. ಇದರ ಆಕರ್ಷಣೆಯ ಕಾರಣವಾಗಿ ಚಿನ್ನದ ತೂಕವು ಎಷ್ಟು ಹೆಚ್ಚಿದೆ ಎಂಬುದನ್ನು ತಕ್ಕಡಿಯ ಮುಳ್ಳು ತಿಳಿಸುತ್ತದೆ. ಚಿನ್ನದ ಮತ್ತು ಸೀಸದ ಗೋಳಗಳ ಕೇಂದ್ರಗಳಿಗಿರುವ ದೂರವನ್ನೂ, ಚಿನ್ನದ ಗೋಳಕ್ಕೂ ಭೂಮಿಯ ಕೇಂದ್ರಕ್ಕೂ ಇರುವ ದೂರವನ್ನೂ ಅಳೆದರೆ ಭೂಮಿಯ ಭಾರವು ಸೀಸದ ಗೋಳದ ಭಾರಕ್ಕಿಂತ ಎಷ್ಟರಷ್ಟು ದೊಡ್ಡದೆಂದು ಗುಣಿಸಬಹುದು.

ಬೇಕು? ಸೂರ್ಯನ ಭಾರವು ಭೂಭಾರದ ೩,೩೩,೦೦೦ ದಷ್ಟು. ಇದು ಕೋಟಿ ಕೋಟಿ ಕೋಟಿ ಕೋಟಿ ಟನ್‌ಗಳ ಐದರಲ್ಲೊಂದು ಭಾಗವಾಗುತ್ತದೆ (೨×೧೦^{೨೭}). ಸೂರ್ಯನ ಘನಗಾತ್ರವು[1] ಭೂಮಿಯದರ ೧೩ ಲಕ್ಷದಷ್ಟಾದ ಕಾರಣ ಅವನ ಸಾಂದ್ರತೆಯು[2] ಭೂಮಿಯ ಸಾಂದ್ರತೆಯ ನಾಲ್ಕರಲ್ಲೊಂದು ಭಾಗ. ಭೂಮಿಯು ನೀರಿನ ೫⅓ ಯಷ್ಟು ಮತ್ತು ಸೂರ್ಯನು ನೀರಿನ ೧⅓ ಯಷ್ಟು ಸಾಂದ್ರವಾಗಿವೆ.

೨. ದೃಷ್ಟಿಯುಗ್ಮ[3]ಗಳ ಭಾರ

ಬರಿಯ ಕಣ್ಣಿಗೆ ಒಂದೇ ಆಗಿ ತೋರುವ ನಕ್ಷತ್ರಗಳಲ್ಲಿ ಕೆಲವು ದೂರದರ್ಶಿನಿಗೆ ಹತ್ತಿರ ಹತ್ತಿರವಿರುವ ಎರಡು ನಕ್ಷತ್ರಗಳಾಗಿ ತೋರುತ್ತವೆ. ಇವಕ್ಕೆ ತಾರಾದ್ವಯಗಳೆಂದು ಹೆಸರು. ಒಂದೊಂದುವೇಳೆ ಈ ನಕ್ಷತ್ರಗಳು ಒಂದಕ್ಕೊಂದು ಬಹಳ ದೂರದಲ್ಲಿದ್ದರೂ ಒಂದೇ ದಿಕ್ಕಿನಲ್ಲಿರುವುದರಿಂದ ನಮಗೆ ತಾರಾದ್ವಯಗಳಾಗಿ ಕಾಣುತ್ತವೆ. ಕೊಠಡಿಯೊಳಗೆ ಕುಳಿತಿರುವವನಿಗೆ ಕಿಟಿಕಿಯ ಸಲಾಕಿಯೂ, ಅದೇ ದೃಷ್ಟಿಪಥದಲ್ಲಿರುವ ದೂರದ ದೀಪದ ಕಂಬವೂ ಅಕ್ಕಪಕ್ಕದಲ್ಲಿರುವಂತೆ ತೋರುವ ಹಾಗೆ ಇದು. ಹೀಗೆ ಯಾವ ಭೌತ ಸಂಬಂಧವೂ ಇಲ್ಲದ ಜೊತೆಗಳು ತಾರಾದೃಗ್ದ್ವಯಗಳು[4] ಮಾತ್ರ, ಇವು ಬಹಳ ಅಪರೂಪ ಮತ್ತು ನಮ್ಮ ದೃಷ್ಟಿಯಿಂದ ಗಮನಾರ್ಹವೂ ಅಲ್ಲ. ಅನೇಕ ತಾರಾದ್ವಯಗಳು ಒಂದರ ಹತ್ತಿರ ಒಂದಿದ್ದು ಪರಸ್ಪರ ಆಕರ್ಷಣ ಬಲಗಳ ಕಾರಣವಾಗಿ ಒಂದರ ಸುತ್ತ ಇನ್ನೊಂದು ಪ್ರದಕ್ಷಿಣೆ ಮಾಡುತ್ತಿವೆ. ಇಂತಹ ವ್ಯೂಹಕ್ಕೆ ತಾರಾಯುಗ್ಮ[5]ವೆಂದು ಹೆಸರು.

ದೂರದರ್ಶಿನಿಯ ಸಹಾಯದಿಂದ ತಾರಾಯುಗ್ಮಗಳ ಪ್ರದಕ್ಷಿಣ ಕಾಲಗಳನ್ನೂ ಅವುಗಳ ಕೋನಾಂತರಗಳನ್ನೂ ಕಂಡುಹಿಡಿಯಬಹುದು. ದಿಗ್ವ್ಯತ್ಯಾಸ ವಿಧಾನದಿಂದ ವ್ಯೂಹದ ದೂರವನ್ನೂ ನಿರ್ಣಯಿಸಿದರೆ, ಯುಗ್ಮದ ಕೋನಾಂತರದಿಂದ ತಾರೆ ತಾರೆಗಿರುವ ದೂರವೂ ಗುಣಿತಕ್ಕೆ ಸಿಕ್ಕುತ್ತದೆ. ದೂರ ಮತ್ತು ಪ್ರದಕ್ಷಿಣ ಕಾಲಗಳು ಗೊತ್ತಾದರೆ ಗುರುತ್ವಾಕರ್ಷಣ ನಿಯಮಗಳಿಂದ ಭಾರಗಳನ್ನು ಗುಣಿಸಬಹುದು. ತಾರಾಯುಗ್ಮಗಳ ಪ್ರದಕ್ಷಿಣ ಕಾಲಗಳು ಒಂದೂವರೆ ವರ್ಷದಿಂದ ನೂರಾರು ವರ್ಷಗಳೂ ಇರಬಹುದು. ಎಷ್ಟೋ ತಾರಾಯುಗ್ಮಗಳು ಅವುಗಳನ್ನು ಪತ್ತೆಮಾಡಿದಂದಿನಿಂದ ಒಂದು ಪ್ರದಕ್ಷಿಣೆಯನ್ನೂ ಪೂರಯಿಸಿಲ್ಲ. ಉದಾಹರಣೆಗೆ ಕುಶತಾರಾಯುಗ್ಮದ ಪ್ರದಕ್ಷಿಣ ಕಾಲವು ೩೦೦ ವರ್ಷಗಳಿಗಿಂತ ಹೆಚ್ಚು. ಯುಗ್ಮದ ತಾರೆಗಳಿಗಿರುವ ದೂರವು ಸೂರ್ಯ-ಪ್ಲುಟೋಗಳ ದೂರಕ್ಕಿಂತ ಅಧಿಕ. ಅಳತೆಗೆ ಸಿಕ್ಕಿರುವ ದೃಷ್ಟಿ

---

[1] Volume. [2] Density. [3] Visual Binary. [4] Optical doubles.

ಯುಗ್ಮಗಳ ಪಥತ್ರಿಜ್ಯಗಳ ಕೋನಾಂತರವು ೦.೧೬ರಿಂದ ೧೭.೫ ಕೋನ ಸೆಕೆಂಡುಗಳವರೆಗಿವೆ.


೩. ವರ್ಣಪಟಲ ಯುಗ್ಮಗಳು[1]


ಪಿಕರಿಂಗ್ ಎಂಬ ಖಗೋಳಜ್ಞನು ೧೮೮೯ ರಲ್ಲಿ ಸಪ್ತರ್ಷಿಮಂಡಲದ ವಸಿಷ್ಠ ತಾರೆಯ ವರ್ಣಪಟಲದಲ್ಲಿ ಒಂದು ವಿಚಿತ್ರವನ್ನು ಕಂಡನು. ಈ ಪಟಲದ ರೇಖೆಗಳು ಒಂದೊಂದುಸಲ ಜೋಡಿಗಳಾಗಿ ಒಡೆದೂ, ಒಂದೊಂದುಸಲ ದಪ್ಪರೇಖೆಗಳಾಗಿಯೂ, ಉಳಿದ ಕಾಲಗಳಲ್ಲಿ ಸ್ಪಷ್ಟವಾದ ಏಕರೇಖೆಗಳಾಗಿಯೂ ಕಂಡವು. ಅಲ್ಲದೆ ಈ ವಿವಿಧ ದೃಶ್ಯಗಳು ಒಂದೇ ಕ್ರಮದಲ್ಲಿ ಆವರ್ತಗಳೆಂದೂ ಅವುಗಳ ಆವರ್ತ ಕಾಲವು[2] ೨೦½ ದಿನಗಳೆಂದೂ ನಿರ್ಣಯಿಸಿದನು. ವಸಿಷ್ಠತಾರೆಯೊಡ್ಡಿದ ಈ ಒಗಟನ್ನು ಆತನು ಬಹು ಸಮಂಜಸವಾಗಿ ಹೀಗೆ ಬಿಡಿಸಿದನು.

ವಸಿಷ್ಠತಾರೆಯು ವಾಸ್ತವವಾಗಿ ಸಮಕಾಂತಿಯ ಒಂದೇ ವರ್ಣವರ್ಗದ ಎರಡು ತಾರೆಗಳ ವ್ಯವಸ್ಥೆ. ಇವು ಒಂದನ್ನು ಮತ್ತೊಂದು ಪರಸ್ಪರ ೨೦½ ದಿನಗಳಲ್ಲಿ ಪ್ರದಕ್ಷಿಣೆ ಮಾಡುತ್ತವೆ. ಹೀಗೆ ಸುತ್ತುತ್ತಿರುವಾಗ ಇವುಗಳನ್ನು ಸೇರಿಸುವ ರೇಖೆಯು ನಮ್ಮ ದೃಷ್ಟಿರೇಖೆಗೆ ಸಮಕೋನದಲ್ಲಿರುವಾಗ ಒಂದು ನಮಗೆ ಅಭಿಮುಖವಾಗಿ ಬರುತ್ತಿರುತ್ತದೆ, ಇನ್ನೊಂದು ವಿಮುಖವಾಗಿ ನಮ್ಮಿಂದ ಹೋಗುತ್ತಿರುತ್ತದೆ. (ಚಿತ್ರ ೧೨.) ಆ ಸಮಯದಲ್ಲಿ ತೆಗೆದ ವರ್ಣಪಟಲದಲ್ಲಿ ಅಭಿಮುಖತಾರೆಯ ರೇಖೆಗಳು ನೀಲಿಯ ಕಡೆಗೂ, ವಿಮುಖತಾರೆಯ ರೇಖೆಗಳು ಕೆಂಪಿನ ಕಡೆಗೂ ಹೆಜ್ಜೆ ಇಡುವುದರಿಂದ ರೇಖಾದ್ವಯಗಳು ಕಾಣುತ್ತವೆ. ತಾರೆಗಳನ್ನು ಸಂಧಿಸುವ ರೇಖೆಯು ದೃಷ್ಟಿರೇಖೆಯ ದಿಕ್ಕಿನಲ್ಲಿಯೇ ಇರುವಾಗ ಎರಡು ತಾರೆಗಳೂ ದೃಷ್ಟಿರೇಖೆಗೆ ಲಂಬವಾಗಿ ಚಲಿಸುವುದರಿಂದ ವರ್ಣಪಟಲದ ರೇಖೆಗಳ ಸ್ಥಾನಪಲ್ಲಟವಾಗುವುದೇ ಇಲ್ಲ. ಆಗ ಎರಡು ತಾರೆಗಳಿಂದ ಸ್ಪಷ್ಟವಾದ ಒಂದೇ ರೇಖೆಯು ಕಾಣುತ್ತದೆ. ಉಳಿದ ಕಾಲಗಳಲ್ಲಿ ದೃಷ್ಟಿಪಥದ ದಿಕ್ಕಿನಲ್ಲಿ ತಾರೆಗಳ ವೇಗಾಂಗಗಳು[3] ಹೆಚ್ಚು ಕಡಿಮೆಯಾಗುವುದರಿಂದ ವರ್ಣರೇಖೆಗಳ ಸ್ಥಾನವ್ಯತ್ಯಾಸವೂ ಹೆಚ್ಚುಕಡಿಮೆಯಾಗುತ್ತದೆ. ಈ ಸ್ಥಾನಪಲ್ಲಟಗಳನ್ನು ಅಳೆದು ತಾರೆಗಳ ವೇಗಗಳನ್ನು ಗುಣಿಸಬಹುದು. ಈ ತಾರೆಗಳು ಒಂದಕ್ಕೊಂದು ಅತಿ ಹತ್ತಿರವಿರುವುದರಿಂದ ಯಾವ ದೂರದರ್ಶಿನಿಗೂ ಇವು ಪ್ರತ್ಯೇಕತಾರೆಗಳಾಗಿ ಕಾಣುವುದಿಲ್ಲ. ವರ್ಣಪಟಲದ ಪರೀಕ್ಷೆಯಿಂದಲ್ಲದೆ ಇಂಥ ತಾರೆಗಳು ಯುಗ್ಮವೆಂದು ತಿಳಿಯಲಸಾಧ್ಯವಾದ್ದರಿಂದ ಇವಕ್ಕೆ ವರ್ಣಪಟಲಯುಗ್ಮಗಳೆಂದು ಹೆಸರು.


---

[1] Spectroscopic Binaries. [2] Periodic Time. [3] Velocity Component.



AURIGA
ORION
PISCES




ನಕ್ಷೆ ೩. ಗ್ರೀಷ್ಮ-ವರ್ಷ-ಶರತ್ಕಾಲಗಳ ನಕ್ಷತ್ರಗಳು



ನಕ್ಷೆ ೧. ಉತ್ತರ ದಿಕ್ಕಿನ ನಕ್ಷತ್ರಗಳು


VELA
MUSCA
DORADO
RETICULUM
TRIANGULUM

ವಸಿಷ್ಠತಾರೆಯ ಯುಗ್ಮಸ್ವರೂಪವನ್ನು ಪತ್ತೆಮಾಡಿದಂದೀಚೆಗೆ ಸಾವಿರಾರು ವರ್ಣಪಟಲಯುಗ್ಮಗಳ ಪಥಗಳು ನಿರ್ಧರವಾಗಿವೆ. ಈ ಯುಗ್ಮಗಳ ತಾರೆಗಳ ಪ್ರದಕ್ಷಿಣವೇಗವು ಸಾಮಾನ್ಯವಾಗಿ ಅಧಿಕವಾದುದು—ಸೆಕೆಂಡೊಂದಕ್ಕೆ ೩೦೦ ಮೈಲಿಗಳ ವರೆಗೂ ಇರುವುದುಂಟು. ಪ್ರದಕ್ಷಿಣಕಾಲವು ೨½ ಘಂಟೆಗಳಿಂದ ಹಲವು ವರ್ಷಗಳ ವರೆಗೂ ಹಿಡಿಯುವುದುಂಟು. ಪ್ರದಕ್ಷಿಣಕಾಲವು ಹೆಚ್ಚಿದಂತೆ



ಚಿತ್ರ ೧೨. ವರ್ಣಪಟಲದಿಂದ ತಾರೆಯ ಯುಗ್ಮಸ್ವಭಾವವು ಬಯಲಿಗೆ ಬರುವ ವಿಧಾನ

ಸಾಮಾನ್ಯವಾಗಿ ತಾರೆತಾರೆಗಳ ದೂರವೂ ಅಧಿಕವಾಗುವುದರಿಂದ, ಅಷ್ಟಕ್ಕೆ ಯುಗ್ಮವು ದೃಷ್ಟಿಯುಗ್ಮವಾಗಿಯೇ ಕಂಡುಬಿಡುತ್ತದೆ. ಯುಗ್ಮದ ತಾರೆಗಳ ಕಾಂತಿಗಳು ವಸಿಷ್ಠಯುಗ್ಮದಂತೆ ಒಂದೇ ಆಗಿರಬೇಕಾಗಿಲ್ಲ. ಎರಡು ತಾರೆಗಳ ಕಾಂತಿವ್ಯತ್ಯಾಸವು ಅಧಿಕವಾದರೆ ಕಾಂತಿಹೀನ ತಾರೆಯ ರೇಖೆಗಳು ವರ್ಣಪಟಲದಲ್ಲಿ ಮೂಡುವುದಿಲ್ಲ. ಕಾಂತಿತರ ರೇಖೆಯ ಸ್ಥಾನಗಳಲ್ಲಿಯೇ ಒಂದು ಸಲ ರಕ್ತಪಲ್ಲಟ ಒಂದು ಸಲ ನೀಲಿಪಲ್ಲಟ ಹೀಗೆ ರೇಖೆಯು ಉಯ್ಯಾಲೆಯಾಡುತ್ತಿರುವಂತೆ ತೋರುತ್ತದೆ. (ಸಪ್ತಮಪಟ ೨ ನೋಡಿ) ಇವುಗಳನ್ನು ಅಳೆದು ಪ್ರದಕ್ಷಿಣ ವೇಗವನ್ನು ಗುಣಿಸಬಹುದು. ಆದರೆ ವರ್ಣಪಟಲದ ಪರೀಕ್ಷೆಮಾತ್ರದಿಂದ ತಾರಾಪಥವನ್ನು ಸಂಪೂರ್ಣವಾಗಿ ನಿರ್ಧರಿಸಲಾಗುವುದಿಲ್ಲ. ಈ ವಿಧಾನದಿಂದ ಪಥನಿರ್ಣಯಕ್ಕೆ

ಬೇಕಾದ ಅಂಗಗಳಲ್ಲಿ ಒಂದು ಅಂಗ ಮಾತ್ರ—ಪಥತಲವು ದೃಷ್ಟಿರೇಖೆಗೆ ಓರೆಯಾಗಿರುವ ಕೋನ—ಅಜ್ಞಾತವಾಗಿ ಉಳಿಯುತ್ತದೆ. ಈ ಕಾರಣಗಳಿಂದ ತಾರೆಗಳ ಭಾರಗಳ ಪ್ರಮಾಣ ಮತ್ತು ಅವುಗಳ ಕನಿಷ್ಠತಮ ಭಾರಗಳನ್ನು ಗುಣಿಸಬಹುದೇ ಹೊರತು ಭಾರಗಳನ್ನೇ ನಿಖರವಾಗಿ ಗುಣಿಸಲಾಗುವುದಿಲ್ಲ. ವರ್ಣಪಟಲ ಯುಗ್ಮವು ಗ್ರಹಣ ಯುಗ್ಮವೂ[1] ಆದರೆ ಈ ನ್ಯೂನಾಂಗವೂ ಅಳತೆಗೆ ಸಿಗುತ್ತದೆ. ಆಗ ತಾರಾಪಥವು ಸಂಪೂರ್ಣವಾಗಿ ಜ್ಞಾತವಾಗುತ್ತದೆ.

೪. ಗ್ರಹಣ ಯುಗ್ಮಗಳ ಭಾರ

ತಾರಾಯುಗ್ಮ ಪಥಗಳ ತಲವು ನಮ್ಮ ದೃಷ್ಟಿರೇಖೆಗೆ ಸರಿಯಾಗಿ ಸಮಕೋನದಲ್ಲಿದ್ದರೆ ನಮ್ಮ ದಿಕ್ಕಿನಲ್ಲಿ ನಕ್ಷತ್ರಗಳ ವೇಗಾಂಗವೇನೂ ಇರುವುದಿಲ್ಲವಾಗಿ ವರ್ಣಪಟಲ ರೇಖೆಗಳ ಸ್ಥಾನಪಲ್ಲಟವೂ ಆಗುವುದಿಲ್ಲ, ಯುಗ್ಮಸ್ವರೂಪವೂ ನಮಗೆ ಪತ್ತೆಯಾಗುವುದಿಲ್ಲ. ಪಥತಲವು ಬಾಗಿದಂತೆ ದೃಷ್ಟಿವೇಗಾಂಗವು ಹೆಚ್ಚಿ ಯುಗ್ಮಸ್ವರೂಪವು ವ್ಯಕ್ತವಾಗುತ್ತದೆ. ಪಥತಲವು ಹೆಚ್ಚುಕಡಿಮೆ ನಮ್ಮ ದೃಷ್ಟಿರೇಖೆಯ ದಿಕ್ಕಿನಲ್ಲಿಯೇ ಇದ್ದರೆ ಒಂದು ತಾರೆಯು ಇನ್ನೊಂದು ತಾರೆಗೆ ಅಡ್ಡಲಾಗಿ ಬಂದಾಗ ಆ ತಾರೆಯ ಗ್ರಹಣವಾಗುತ್ತದೆ—ಚಂದ್ರನು ಅಡ್ಡಬಂದು ಸೂರ್ಯನ ಗ್ರಹಣವಾದಂತೆ—ಮತ್ತು ಗ್ರಹಣದ ಫಲವಾಗಿ ಯುಗ್ಮದ ಕಾಂತಿಯು ಕಡಿಮೆಯಾಗಿ ತೋರುತ್ತದೆ. ಪ್ರತಿಯೊಂದು ಪ್ರದಕ್ಷಿಣೆಯಲ್ಲಿಯೂ ಹೀಗೆ ಗ್ರಹಣವಾಗುವುದರಿಂದ ತಾರೆಯ ಕಾಂತಿಯು ಆವರ್ತಕವಾಗಿ ಏರಿ ಇಳಿಯುತ್ತದೆ. ಇಂಥ ಯುಗ್ಮಗಳಿಗೆ ಗ್ರಹಣ ಯುಗ್ಮಗಳೆಂದು ಹೆಸರು. ಚಂಚಲತಾರೆಗಳ ಹಲವು ವರ್ಗಗಳಲ್ಲಿ ಗ್ರಹಣಯುಗ್ಮಗಳದು ಒಂದು ಪ್ರಧಾನವಾದ ವರ್ಗ.

ಹಿಂದಿನ ಅಧ್ಯಾಯದಲ್ಲಿ ಉದಹರಿಸಿರುವ ಸೈಂಧವತಾರೆಯು ಗ್ರಹಣಯುಗ್ಮಗಳಿಗೆ ಮಾದರಿತಾರೆ. ಇದರ ಚಂಚಲತ್ವವು ಬರಿಯ ಕಣ್ಣಿಗೂ ವ್ಯಕ್ತವಾಗುತ್ತದೆ. ಇದರ ಕಾಂತಿಯು ಸಾಮಾನ್ಯವಾಗಿ ೨.೩ ರ ವರ್ಗಾಂಕದ್ದು. ಸುಮಾರು ೫ ಘಂಟೆಗಳಲ್ಲಿ ಈ ಕಾಂತಿಯು ೩.೫ ವರ್ಗಾಂಕಕ್ಕಿಳಿದು ಇನ್ನೈದು ಘಂಟೆಗಳಲ್ಲಿ ಪುನಃ ೨.೩ ಕ್ಕೇ ಏರುತ್ತದೆ. ಅಂದರೆ ಗ್ರಹಣಕಾಲವು ೧೦ ಘಂಟೆಗಳು (ನಿಷ್ಕೃಷ್ಟವಾಗಿ ೯.೬೬ ಘಂಟೆಗಳು) ಎಂದಾಯ್ತು. ಗ್ರಹಣ ಮೋಕ್ಷವಾದಮೇಲೆ ೬೦ ಘಂಟೆಗಳ ಕಾಲ ಕಾಂತಿವರ್ಗಾಂಕವು ೨.೩ ರಲ್ಲಿಯೇ ಇರುತ್ತದೆ. ಆದರೆ ಈ ೬೦ ಘಂಟೆಗಳಲ್ಲಿ ೩.೨ ರಿಂದ ೩.೮ ನೆಯ ಆರು ಘಂಟೆಗಳ ಕಾಲದಲ್ಲಿ ಕಾಂತಿವರ್ಗಾಂಕವು ೨.೩ ರಿಂದ

---


[1] Eclipsing Binary.

೨.೩೫ಕ್ಕೆ ಇಳಿದು ಪುನಃ ೨.೩ಕ್ಕೆ ಏರುತ್ತದೆ. ಅಂತೂ ಒಟ್ಟು ಆವರ್ತಕಾಲವು ೬೪ ಘಂಟೆಗಳು, ಈ ಕಾಲದಲ್ಲಿ ೧೦ ಘಂಟೆಗಳ ಅವಧಿಯ ಒಂದು ಪ್ರಧಾನ ಗ್ರಹಣವೂ, ೬ ಘಂಟೆಗಳ ಅವಧಿಯ ಒಂದು ಲಘುಗ್ರಹಣವೂ ಸಂಭವಿಸುತ್ತವೆ.

ಗ್ರಹಣಯುಗ್ಮಗಳ ಕಾಂತಿವ್ಯತ್ಯಾಸವನ್ನು ಕಾಲಕಾಲಕ್ಕೂ ನಿಷ್ಕೃಷ್ಟವಾಗಿ ನಿರ್ಧರಿಸಲು ಆಧುನಿಕ ಖಗೋಳಜ್ಞರು ಕಾಂತಿಯನ್ನು ವಿದ್ಯುತ್ಪ್ರವಾಹವನ್ನಾಗಿ ಮಾರ್ಪಡಿಸಬಲ್ಲ ಪ್ರಭಾವಿದ್ಯುತ್ಕೋಶವನ್ನು[1] ಉಪಯೋಗಿಸುತ್ತಾರೆ. ಈ ಸಾಧನವು ಗ್ರಹಣಯುಗ್ಮದ ಕಾಂತಿರೇಖೆಯನ್ನು[2] ಅಂದರೆ ಯಾವಯಾವ ಕಾಲದಲ್ಲಿ ಯುಗ್ಮದ ಕಾಂತಿಯು ಎಷ್ಟೆಷ್ಟೆಂದು ಸೂಚಿಸುವ ರೇಖೆಯನ್ನು ಚಿತ್ರಿಸುತ್ತದೆ. ಇದರ ಜೊತೆಗೆ ಆಯಾ ಕಾಲದ ವರ್ಣಪಟಲವನ್ನೂ ವರ್ಣಪಟಲಗ್ರಾಹಿಯು ಚಿತ್ರಿಸುತ್ತದೆ. ಇವೆರಡರ ಪರೀಕ್ಷೆಯನ್ನೂ ವಿಚಾರಪೂರ್ವಕವಾಗಿ ನಡೆಸಿದರೆ ಯುಗ್ಮರಹಸ್ಯವನ್ನು ಸಂಪೂರ್ಣವಾಗಿ ಭೇದಿಸಿದಂತೆಯೇ ಆಗುತ್ತದೆ.

೧೩ ನೆಯ ಚಿತ್ರದಲ್ಲಿ ಒಂದು ತಾರಾಯುಗ್ಮದ ಕಾಂತಿರೇಖೆ ಮತ್ತು ವರ್ಣಪಟಲಗಳನ್ನು ಕೊಟ್ಟು ಅದರ ಕೆಳಗೆ ಆ ರೇಖೆ, ವರ್ಣಪಟಲಗಳ ಪರೀಕ್ಷೆಯಿಂದ ನಾವು ತೀರ್ಮಾನಕ್ಕೆ ಬರಬೇಕಾದಂಥ ಯುಗ್ಮದ ತಾರೆಗಳ ಗಾತ್ರ ಮತ್ತು ಪಥಗಳನ್ನೂ ತೋರಿಸಿದೆ. ಇಲ್ಲಿ ಉದಹರಿಸಿರುವ ಯುಗ್ಮದ ತಾರೆಗಳಲ್ಲಿ ಒಂದರ ಕಾಂತಿ ಅಧಿಕ, ಇನ್ನೊಂದರದು ಕಡಿಮೆ; ಇವುಗಳಲ್ಲಿ ಕಾಂತಿತಾರೆಯು ಗಾತ್ರದಲ್ಲಿ ಚಿಕ್ಕದಾಗಿರಬೇಕು, ಕೃಷ್ಣತಾರೆಯು ದೊಡ್ಡದಾಗಿರಬೇಕು. ಕಾಂತಿತಾರೆಗೆ ಕೃಷ್ಣತಾರೆಯು ಅಡ್ಡಬಂದಾಗ ಪ್ರಧಾನಗ್ರಹಣವಾಗುತ್ತದೆ. ಕೃಷ್ಣತಾರೆಗೆ ಕಾಂತಿತಾರೆಯು ಅಡ್ಡಬಂದಾಗ ಸಣ್ಣ ಗ್ರಹಣವಾಗುತ್ತದೆ. ಪ್ರಧಾನಗ್ರಹಣಕಾಲದಿಂದ ಲಘುಗ್ರಹಣದ ಕಾಲದ ವರೆಗೆ ಕಾಂತಿಯು ಸ್ವಲ್ಪವಾಗಿ ಏರುವುದರಿಂದಲೂ ಮತ್ತು ಲಘುಗ್ರಹಣ ಕಾಲದಿಂದ ಪ್ರಧಾನಗ್ರಹಣಕಾಲದವರೆಗೆ ಕಾಂತಿಯು ಸ್ವಲ್ಪ ಇಳಿಯುವುದರಿಂದಲೂ ಕಾಂತಿತಾರೆಗೆ ಅಭಿಮುಖವಾಗಿರುವ ಕೃಷ್ಣತಾರೆಯ ಅರ್ಧಭಾಗದ ಕಾಂತಿಯು ಅದಕ್ಕೆ ವಿಮುಖವಾಗಿರುವ ಅರ್ಧಭಾಗದ ಕಾಂತಿಗಿಂತಲೂ ಸ್ವಲ್ಪ ಹೆಚ್ಚಿರಬೇಕೆಂದೂ ಸ್ಪಷ್ಟವಾಗುತ್ತದೆ; ಏಕೆಂದರೆ ಪ್ರಧಾನಗ್ರಹಣವಾದಮೇಲೆ ಕೃಷ್ಣತಾರೆಯ ಕಾಂತಿತರಾರ್ಧದ ಹೆಚ್ಚುಹೆಚ್ಚು ಭಾಗವು ನಮ್ಮ ಕಡೆಗೆ ತಿರುಗುತ್ತದೆ. ಯುಗ್ಮದ ಈ ತೆರನಾದ ಸಾಮಾನ್ಯ ವರ್ಣನೆಯಲ್ಲದೆ ಕಾಂತಿರೇಖೆ, ವರ್ಣಪಟಲ ಮತ್ತು ದಿಗ್ವ್ಯತ್ಯಾಸಗಳ ಅಂಕಿ ಅಂಶಗಳಿಂದ ಒಂದೊಂದು ತಾರೆಯ ವ್ಯಾಸ, ಭಾರ, ಸಾಂದ್ರತೆ; ತಾರೆಗಳಿಗಿರುವ ಪರಸ್ಪರ ದೂರ, ಅವುಗಳ ಪಥಾಕಾರ, ಕಾಂತಿತರಾರ್ಧ

[1] Photoelectric Cell. [2] Light Curve.



ಚಿತ್ರ ೧೩. ಗ್ರಹಣಯುಗ್ಮದ ಒಗಟನ್ನು ವರ್ಣಪಟಲವು ಬಿಡಿಸುವ ರೀತಿ

ಕೃಷ್ಣಾರ್ಧಗಳ ಕಾಂತಿಪ್ರಮಾಣ ಮತ್ತು ಪಥತಲಕ್ಕೂ ದೃಷ್ಟಿರೇಖೆಗೂ ಇರುವ ಕೋಣಾಂತರ ಇವೆಲ್ಲವನ್ನೂ ನಿರ್ಣಯಿಸಬಹುದು. ಇದುವರೆಗೆ ಸುಮಾರು ನಾಲ್ಕು ನೂರು ಗ್ರಹಣಯುಗ್ಮಗಳು ಪರಿಶೀಲನೆಗೆ ಸಿಕ್ಕಿವೆ. ಇವುಗಳ ಪ್ರದಕ್ಷಿಣಕಾಲಗಳು ೬ ಘಂಟೆಗಳಿಂದ ೨೯ ವರ್ಷಗಳ ವರೆಗೂ ಹಬ್ಬಿವೆ.

೫. ತಾರಾನೇಕಗಳು[1]

ಕುಶತಾರೆಯು ದೃಷ್ಟಿಯುಗ್ಮವೆಂದು ಆಗಲೇ ತಿಳಿಸಿದೆ. ವರ್ಣಪಟಲ ವೀಕ್ಷಣೆಯಿಂದ ಯುಗ್ಮದ ಒಂದೊಂದು ತಾರೆಯೂ ಒಂದೊಂದು ವರ್ಣಪಟಲಯುಗ್ಮವೆಂದು ತಿಳಿದುಬಂದಿದೆ. ಅಂದರೆ ನಮ್ಮ ಕಣ್ಣಿಗೆ ಒಂದಾಗಿ ತೋರುವ ಕುಶತಾರೆಯು ನಾಲ್ಕು ನಕ್ಷತ್ರಗಳ ವ್ಯೂಹ. ಅಷ್ಟೇ ಅಲ್ಲ. ಈ ಚತುಷ್ಕಕ್ಕೆ ಸುಮಾರು ಮುಕ್ಕಾಲು ಕೋನ ನಿಮಿಷದ ಅಂತರದಲ್ಲಿ ಅತಿ ಕ್ಷೀಣಕಾಂತಿಯ (೯ ರ ವರ್ಗಾಂಕ) ತಾರೆಯೊಂದು ದೂರದರ್ಶಿನಿಗೆ ಕಾಣುತ್ತದೆ. ಇದರ ಚಲನೆಯ ಪರೀಕ್ಷೆಯಿಂದ ಇದೂ ಕುಶವ್ಯೂಹಕ್ಕೇ ಸೇರಿದ್ದೆಂದು ತೀರ್ಮಾನಿಸಬೇಕಾಗುತ್ತದೆ. ಇದು ಪ್ರಧಾನಕುಶನನ್ನು ಪ್ರಾಯಶಃ ಹತ್ತಿಪ್ಪತ್ತುಸಾವಿರ ವರ್ಷಗಳಲ್ಲಿ ಒಂದು ಪ್ರದಕ್ಷಿಣೆ ಮಾಡುತ್ತಿರುವಂತೆ ತೋರುತ್ತದೆ. ವರ್ಣಪಟಲವು ಈ ಕಾಂತಿಹೀನ ತಾರೆಯನ್ನೂ ಯುಗ್ಮವನ್ನಾಗಿ ಬಿಡಿಸಿದೆ. ಅಲ್ಲಿಗೆ ಕುಶತಾರಾವ್ಯವಸ್ಥೆಯಲ್ಲಿ ಆರು ನಕ್ಷತ್ರಗಳಿದ್ದ ಹಾಗಾಯಿತು. ಕೃತ್ತಿಕಾಗುಚ್ಛವೂ ಗುರುತ್ವಾಕರ್ಷಣನಿಯಮಕ್ಕೆ ಕಟ್ಟುಬಿದ್ದು ಆರು ನಕ್ಷತ್ರಗಳ ಒಂದು ವ್ಯೂಹವಾಗಿ ತನ್ನ ಪಥವನ್ನು ತುಳಿಯುತ್ತಿದ್ದರೂ ಆ ಗುಚ್ಛವನ್ನು ಆರು ಸಮಾನರಾಷ್ಟ್ರಗಳ ಸಂಸ್ಥೆಗೆ ಹೋಲಿಸಬಹುದು. ಕುಶಷಟ್ಕವು ಈ ದೃಷ್ಟಿಯಿಂದ ಆರು ಸಂಸ್ಥಾನಗಳ ಸಂಯುಕ್ತರಾಷ್ಟ್ರ. ಇಂದಿನ ವರೆಗಿನ ವೀಕ್ಷಣೆಗಳಿಂದ ಪ್ರತಿ ನೂರು ತಾರೆಗಳಲ್ಲಿ ೧೫ ತಾರಾದ್ವಯಗಳು ೫ ತಾರಾತ್ರಯ ಅಥವಾ ತಾರಾನೇಕಗಳೂ, ಉಳಿದುವು ಒಂಟಿಗಳೆಂದೂ ಕಂಡುಬಂದಿದೆ.

ಒಂಟಿ ತಾರೆಯಾಗಿದ್ದರೆ ನಮಗೆಂದೆಂದಿಗೂ ತಿಳಿಯಲಸಾಧ್ಯವಾದ ಎಷ್ಟೋ ಸೋಜಿಗವಾದ ವಿಷಯಗಳನ್ನು ಗ್ರಹಣಯುಗ್ಮವು ಹೊರಗೆಡಹುತ್ತದೆಂಬುದಕ್ಕೆ ವೃಷಭರಾಶಿಯ ಒಂದು ಚಂಚಲತಾರೆಯು ಸೊಗಸಾದ ನಿದರ್ಶನ. ಈ ಯುಗ್ಮದ ಕಾಂತಿಯ ಆವರ್ತಕಾಲವು ೨ ದಿನ ೧೮ ಘಂಟೆ ೨೯ ನಿಮಿಷಗಳು. ಅದರಲ್ಲಿ ಪೂರ್ಣ ಗ್ರಹಣಕಾಲವು ೮೪ ನಿಮಿಷಗಳು. ಈ ಕಾಲದಲ್ಲಿ ತಾರೆಯ ವರ್ಣಪಟಲವು K_0 ವರ್ಣವರ್ಗದ್ದಾಗಿದ್ದು, ಉಳಿದ ಕಾಲದಲ್ಲಿ B_9 ವರ್ಣವರ್ಗದ್ದಾಗಿರುತ್ತದೆ. ಯುಗ್ಮದ

[1] Multiple Stars.

ವರ್ಣಪಟಲಗಳಲ್ಲಿ ಮತ್ತೊಂದು ವಿಚಿತ್ರವನ್ನು ೧೯೪೧ ರಲ್ಲಿ ಜಾಯ್ ಎಂಬಾತನು ಪತ್ತೆ ಹಚ್ಚಿದನು. ಪೂರ್ಣಗ್ರಹಣ ಪ್ರಾರಂಭವಾದ ಕೂಡಲೆ ವರ್ಣಪಟಲದಲ್ಲಿ ಅದುವರೆಗೂ ಇಲ್ಲದಿದ್ದ ಜಲಜನಕದ ಕಾಂತಿರೇಖೆಗಳು ಹುಟ್ಟಿ ಅವುಗಳಿಗೆ ರಕ್ತಪಲ್ಲಟ ವಿದ್ದುದೂ, ಪೂರ್ಣಗ್ರಹಣ ಬಿಡುಗಡೆಯಾಗುವುದಕ್ಕೆ ಮುಂಚೆ ಸ್ವಲ್ಪಕಾಲ ಅವಕ್ಕೆ ನೀಲಿಪಲ್ಲಟವಿದ್ದುದೂ, ಗ್ರಹಣಮಧ್ಯಕಾಲದಲ್ಲಿ ಜಲಜನಕದ ಕಾಂತಿರೇಖೆಗಳು ಅದೃಶ್ಯ ವಾದದ್ದೂ ಈತನ ಗಮನವನ್ನು ಸೆಳೆಯಿತು. ಯುಗ್ಮದ ಈ ನಡತೆಗೆ ಆತನು ಕೊಟ್ಟ ವ್ಯಾಖ್ಯಾನ ಹೀಗೆ.

ನಮಗೆ ಒಂದಾಗಿ ಕಾಣುವ ಈ ಯುಗ್ಮದಲ್ಲಿ ಒಂದು ಮಹಾಕಾಂತಿಯ ಬಿಳಿಯ ನಕ್ಷತ್ರವೂ ಒಂದು ಕ್ಷೀಣಕಾಂತಿಯ ಹಳದಿಯದೂ ಇವೆ. ಹಳದಿಯದರ ವ್ಯಾಸವು ಬಿಳಿಯದರ ಎರಡರಷ್ಟು. ಬಿಳಿಯ ತಾರೆಯ ಸುತ್ತಲೂ ಥಳಥಳ ಉರಿಯು ತ್ತಿರುವ ಜಲಜನಕದ ಬಳೆಯಿರಬೇಕು. ಈ ಬಳೆಯೇ ಜಲಜನಕದ ಕಾಂತಿರೇಖೆಗಳ ಉತ್ಪತ್ತಿಸ್ಥಾನ. ಬಳೆಯ ವ್ಯಾಸವು ಹಳದಿಯ ತಾರೆಯ ವ್ಯಾಸಕ್ಕಿಂತ ಸ್ವಲ್ಪ ಕಡಮೆ, ಏಕೆಂದರೆ ಗ್ರಹಣ ಮಧ್ಯದಲ್ಲಿ ಸ್ವಲ್ಪಕಾಲ ಜಲಜನಕದ ರೇಖೆಗಳು ಮಾಯವಾಗು ತ್ತವೆ. ಗ್ರಹಣೇತರ ಕಾಲದಲ್ಲಿ ಬಿಳಿಯ ತಾರೆಯ ಪ್ರಕಾಶಮಾನವಾದ B ವರ್ಗದ ವರ್ಣಪಟಲವು ಬಳೆಯ ವರ್ಣಪಟಲವನ್ನಾಗಲಿ ಹಳದಿ ತಾರೆಯ ವರ್ಣಪಟಲ ವನ್ನಾಗಲಿ ಕಾಣಗೊಡಿಸುವುದಿಲ್ಲ. ಆದರೆ ಹಳದಿ ತಾರೆಯು ಗ್ರಹಣಾರಂಭದಲ್ಲಿ ಬಿಳಿಯ ತಾರೆಗೆ ಅಡ್ಡಬಂದಾಗ ಅದರ ಬಳೆ ಮಾತ್ರ ಸ್ವಲ್ಪಕಾಲ ಬೆಳಗುತ್ತದೆ. ಇದೇ ರೀತಿಯಲ್ಲಿಯೇ ಬಿಳಿಯ ತಾರೆಯು ಹಳದಿಯದರ ಹಿಂದಿನಿಂದ ಈಚೆಗೆ ಬರುವ ಮುಂಚೆಯೂ ಬಳೆಯು ಬೆಳಗುತ್ತದೆ. ಈ ಕಾಲಗಳಲ್ಲಿ ಜಲಜನಕದ ಕಾಂತಿರೇಖೆಗಳು K ವರ್ಗದ ಕ್ಷೀಣಕಾಂತಿಯ ವರ್ಣಪಟಲದ ಮೇಲೆ ಮೂಡುತ್ತವೆ. ಕಾಂತಿರೇಖೆ ಗಳ ಸ್ಥಾನಪಲ್ಲಟದಿಂದ ಜಲಜನಕದ ಅನಿಲವು ಬಳೆಯಲ್ಲಿ ಸೆಕಂಡೊಂದಕ್ಕೆ ೨೧೭ ಮೈಲಿ ಗಳ ವೇಗದಲ್ಲಿ ಬಳಸುತ್ತಿದೆಯೆಂದೂ, ಇದರ ಪ್ರದಕ್ಷಿಣ ಕಾಲವು ೧೪ ಘಂಟೆ ಗಳಾದ್ದರಿಂದ ಬಳೆಯ ವ್ಯಾಸವು ಸೂರ್ಯನ ವ್ಯಾಸದ ನಾಲ್ಕರಷ್ಟೆಂದೂ ಜಾಯ್ ತಿರ್ಮಾನಿಸಿದಾನೆ! ಇಂಥ ಜ್ಯೋತಿಕಂಕಣದ ನಕ್ಷತ್ರ* ಯಾವುದೂ ಇದುವರೆಗೆ ಯಾರ ಕಣ್ಣಿಗೂ—ದೂರದರ್ಶಿನಿಯ ಕಣ್ಣಿಗೂ—ನೇರವಾಗಿ ಬಿದ್ದಿಲ್ಲ. ಇದು ವರ್ಣಪಟಲದ ದಿವ್ಯದೃಷ್ಟಿಗೆ ಮಾತ್ರ ಸಾಧ್ಯ!

* ದೂರದರ್ಶಿನಿಯಲ್ಲಿ ಶನಿಗ್ರಹವನ್ನು ನೋಡಿದರೆ ಕಂಕಣತೊಟ್ಟಂತೆ ಕಾಣುವ ಆ ಗ್ರಹದ ಸುಂದರದೃಶ್ಯವನ್ನು ಇದು ನೆನಪಿಗೆ ತರುತ್ತದೆ. ಆದರೆ ಶನಿಯು ಸ್ವಕಾಂತಿಯಿಂದ ಬೆಳಗುವ ತಾರೆಯಲ್ಲ, ಸೂರ್ಯನ ಬೆಳಕನ್ನು ಪ್ರತಿಫಲಿಸುವ ಗ್ರಹ.

೬. ಭಾರ—ಕಾಂತಿನಿಯಮವು[1]

ಇಲ್ಲಿಯುವರೆಗೆ ವಿವರಿಸಿರುವ ಪ್ರಯೋಗಮಾರ್ಗಗಳಿಂದ ದೃಷ್ಟಿಯುಗ್ಮ ಅಥವಾ ಗ್ರಹಣಯುಗ್ಮ ಅಂತೂ ತಾರಾಯುಗ್ಮಗಳ ಭಾರಗಳನ್ನು ಮಾತ್ರ ನಿರ್ಣಯಿಸಬಹುದು. ಬಿಡಿತಾರೆಗಳ ಭಾರಗಳನ್ನು ನಿರ್ಣಯಿಸುವ ವಿಧಾನವನ್ನು ಪ್ರಸಿದ್ಧ ಭೌತಜ್ಞನಾದ ಎಡ್ಡಿಂಗ್‌ಟನ್‌ನು ಶುದ್ಧ ಗಣಿತಮಾರ್ಗದಿಂದ ಕಂಡು ಹಿಡಿದನು. ಈತನು ವಿವಿಧ ಭಾರಗಳ ಅನಿಲಗೋಳಗಳು ಜಗತ್ತಿನಲ್ಲಿ ದೂರದೂರವಾಗಿ ಹರಡಿದ್ದಿದ್ದರೆ ಆ ಗೋಳಗಳು ಕಾಲಕ್ರಮೇಣ ಹೇಗೆ ಪರಿಣಮಿಸುವುವೆಂಬುದನ್ನು ಚಲನವಿಜ್ಞಾನನಿಯಮ[2]ಗಳಿಗನುಸಾರವಾಗಿ ಗುಣಿಸಲು ತೊಡಗಿದನು. ಗೋಳಗಳಲ್ಲಿ ಹತ್ತು ಗ್ರಾಂಗಳಷ್ಟು (ಸುಮಾರು ೧ ತೊಲ) ಭಾರದ್ದನ್ನು ಮೊದಲನೆಯ ಗೋಳ, ನೂರು ($೧೦^{೨}$), ಸಾವಿರ ($೧೦^{೩}$), ಹತ್ತು ಸಾವಿರ ($೧೦^{೪}$) ಇತ್ಯಾದಿ ಗ್ರಾಂಗಳ ಗೋಳಗಳನ್ನು ೨ ನೆಯ, ೩ ನೆಯ, ೪ ನೆಯ ಇತ್ಯಾದಿ ಗೋಳಗಳೆಂದು ಕರೆಯೋಣ. ಈ ಸಂಕೇತದಂತೆ ಉದಾಹರಣೆಗೆ ೩೪ ನೆಯ ಗೋಳವೆಂದರೆ $೧೦^{೩೪}$ ಗ್ರಾಂ ತೂಕದ ಅನಿಲಗೋಳವೆಂಬುದನ್ನು ತಿಳಿದಿರಬೇಕು.

ಅನಿಲದ ಕಣಗಳ ಆಕರ್ಷಣ ಬಲಗಳ ಕಾರಣದಿಂದ ಕಾಲಕ್ರಮದಲ್ಲಿ ಇಂಥ ರಾಶಿಗಳು ಕುಗ್ಗುತ್ತ ಹೋಗುತ್ತವೆ. ಕುಗ್ಗಿದಂತೆಲ್ಲ ಕಾವು ಉಂಟಾಗುತ್ತದೆ. ಗೋಳದ ಕ್ರಮಸಂಖ್ಯೆ ಹೆಚ್ಚಿದಂತೆ ಭಾರವು ಹೆಚ್ಚಾದ ಕಾರಣ, ಗೋಳದ ಮಧ್ಯ ಭಾಗದಲ್ಲಿ ಒತ್ತಡವೂ ಕ್ರಮಸಂಖ್ಯೆಯಂತೆ ಹೆಚ್ಚುತ್ತದೆ. ಅದಕ್ಕನುಗುಣವಾಗಿ ಉಷ್ಣಾಂಶವೂ ಏರುತ್ತದೆ. ಆದ್ದರಿಂದ ಎಲ್ಲ ಗೋಳಗಳೂ ಒಂದೇ ಸ್ಥಿತಿಯಿಂದ ಆರಂಭಿಸಿದರೂ ಸಾಕಷ್ಟು ಕಾಲ ಕಳೆದಮೇಲೆ ೨೫ ನೆಯ ಗೋಳವು ೨೪ ನೆಯದಕ್ಕಿಂತ ಬಿಸಿಯಾಗಿರುತ್ತದೆ, ೨೬ ನೆಯದು ೨೫ ನೆಯದಕ್ಕಿಂತ ಬಿಸಿ, ಹೀಗೆಯೇ ಇತರ ಗೋಳಗಳೂ. ಹೀಗೆ ಉತ್ಪತ್ತಿಯಾದ ಉಷ್ಣಶಕ್ತಿಯು ಗೋಳದ ಮಧ್ಯದಿಂದ ಅನಿಲರಾಶಿಯನ್ನು ತೂರಿಕೊಂಡು ಹೊರಬೀಳುತ್ತದೆ. ಹೊರಬೀಳುವಾಗ ಈ ಶಕ್ತಿಯು ಗೋಳದ ಮೇಲೆ ಬೀರುವ ಪ್ರಭಾವವು ಅದ್ಭುತವಾದದ್ದು.

ಅನಿಲಕಣಗಳ ಚಲನೆಯಿಂದ ಒತ್ತಡ ಅಥವಾ ಸಂಮರ್ದವು ಹುಟ್ಟುತ್ತದೆಂಬುದು ನಮಗೆ ಪರಿಚಿತವಾದ ಸಂಗತಿ. ಇದೇ ರೀತಿಯಲ್ಲಿಯೇ, ನಮಗಷ್ಟು ಪರಿಚಿತವಲ್ಲದಿದ್ದರೂ, ಉಷ್ಣಕಿರಣಗಳು, ಬೆಳಕಿನ ಕಿರಣಗಳೇ ಮುಂತಾದ ವಿಸರಣ ಕಿರಣಗಳ ಚಲನೆ ಅಥವಾ ವ್ಯಾಪನೆಯಿಂದಲೂ ಒತ್ತಡವು ಹುಟ್ಟುತ್ತದೆ. ಇದರ ಅರ್ಥ ಕೈ ಬೀಸಿ ಕೆನ್ನೆಗೆ ಹೇಗೆ ಏಟು ಕೊಡಬಹುದೋ ಹಾಗೆಯೇ ಬೆಳಕು ಬೀರಿಯೂ ಏಟು ಕೊಡ

[1] Mass—Luminosity Law. [2] Dynamical Laws.

ಬಹುದೆಂದು. ಇದು ನಮ್ಮ ಅನುಭವಕ್ಕೆ ಬಂದಿಲ್ಲ ನಿಜ. ಅದಕ್ಕೆ ಕಾರಣವೂ ಇದೆ. ಬೆಳಕಿನ ಕಿರಣಗಳ ಹೊಡೆತದಿಂದುಂಟಾಗುವ ನೋವು ನಾವು ಅನುಭವಿಸುವಷ್ಟಾಗಲು ಬೆಳಕಿನ ತೀಕ್ಷ್ಣತೆಯು ಅಗಾಧವಾಗಿರಬೇಕು. ಇಷ್ಟೊಂದು ತೇಜಸ್ಸಿನ ಬೆಳಕನ್ನು ಭೂಮಿಯ ಮೇಲೆ ಉತ್ಪತ್ತಿಮಾಡುವ ವಿಧಾನವನ್ನು ನಾವಿನ್ನೂ ಅರಿತಿಲ್ಲ. ಆದರೂ ಬೆಳಕಿಗೆ ಒತ್ತಡವಿದೆಯೆಂದು ವಿಜ್ಞಾನಿಗಳು ಹಲವು ಸೂಕ್ಷ್ಮ ಪ್ರಯೋಗಗಳಿಂದ ಅಸಂದಿಗ್ಧವಾಗಿ ತೋರಿಸಿದ್ದಾರೆ. ಆದಕಾರಣ ಈಗ ನಾವು ಪರಿಶೀಲಿಸುತ್ತಿರುವ ಅನಿಲಗೋಳಗಳನ್ನು ಗುರುತ್ವಾಕರ್ಷಣಬಲವು ಕುಗ್ಗಿಸಲು ತೊಡಗಿರುವಂತೆಯೇ, ಗೋಳದ ಮಧ್ಯದಿಂದ ತಪ್ಪಿಸಿಕೊಂಡು ಹೊರಗೆ ಬರುತ್ತಿರುವ ವಿಸರಣಶಕ್ತಿಯು[1] ಹಿಗ್ಗಿಸಲು ತೊಡಗಿರುತ್ತದೆ. ಆದರೆ ಗೋಳಗಳು ಸಣ್ಣವಾಗಿದ್ದರೆ ಉಷ್ಣಾಂಶವು ಕಡಿಮೆಯಾದಕಾರಣ, ವಿಸರಣಶಕ್ತಿಯ ಒತ್ತಡವು ತೀರ ಕಡಿಮೆಯಾಗಿ ಗುರುತ್ವಾಕರ್ಷಣಶಕ್ತಿಯ ಮುಂದೆ ಅದರ ಪ್ರಭಾವವೇನೂ ನಡೆಯುವುದಿಲ್ಲ. ಹಾಗಲ್ಲದೆ ಗೋಳವು ಬಹಳ ದೊಡ್ಡದಾದರೆ ಆ ಮಾತೇ ಬೇರೆಯೆಂದು ಎಡ್ಡಿಂಗ್‌ಟನ್ ತೋರಿಸಿದನು.

ಅನಿಲಗೋಳದ ಭಾರವು ೧೦^{೩೨} ಗ್ರಾಂಗಳಿಗೆ (೩೨ ನೆಯ ಗೋಳ) ಏರಿದಾಗ ಅನಿಲರಾಶಿಯ ಮಧ್ಯಭಾಗವು ಪ್ರಚಂಡ ಒತ್ತಡಕ್ಕೆ ಸಿಕ್ಕಿ ಅದರ ಉಷ್ಣಾಂಶವು ಹಲವುಕೋಟಿ ಡಿಗ್ರಿಗಳಿಗೆ ಹತ್ತುತ್ತದೆ. ಈ ಅಪರಿಮಿತ ಶಾಖದಿಂದ ಉತ್ಪತ್ತಿಯಾದ ವಿಸರಣಶಕ್ತಿಯು ಹೊರಕ್ಕೆ ತಪ್ಪಿಸಿಕೊಂಡು ಬರುವಾಗ ಅದು ಉಪಯೋಗಕ್ಕೆ ತರುವ ಒತ್ತಡವು ಗುರುತ್ವಾಕರ್ಷಣದ ಒತ್ತಡಕ್ಕಿಂತ ಅಷ್ಟೇನೂ ಕಡಿಮೆಯಾಗುವುದಿಲ್ಲ. ಆದಕಾರಣ ಈ ಭಾರದ ಅನಿಲರಾಶಿಯು ತನ್ನ ಭಾರದ ಕಾರಣವಾಗಿಯೇ ಸ್ವಕಾಂತಿಯಿಂದ ಬೆಳಗುವುದೇ ಅಲ್ಲದೆ, ಅನಿಲರಾಶಿಯನ್ನು ಭೇದಿಸಿಕೊಂಡು ಹೊರಗೆ ಬರುತ್ತಿರುವ ಈ ಕಾಂತಿಯ ಒತ್ತಡವು ತನ್ನ ಭಾರಕ್ಕೆ ತಾನೇ ಕುಗ್ಗುತ್ತಿರುವ ರಾಶಿಯ ಸಂಕೋಚನವೇಗವನ್ನು ತಡೆಗಟ್ಟುತ್ತದೆ. ಇನ್ನು ೩೩, ೩೪ ಮತ್ತು ೩೫ ನೆಯ ಗೋಳಗಳ ಪರಿಸ್ಥಿತಿ ಏನಾಗುವುದೆಂದು ಗುಣಿಸಿದರೆ, ವಿಸರಣಶಕ್ತಿಯ ಒತ್ತಡವು ಕ್ರಮವಾಗಿ ಹೆಚ್ಚುತ್ತ ಬಂದು ಗುರುತ್ವಾಕರ್ಷಣಶಕ್ತಿ ಮತ್ತು ವಿಸರಣ ಶಕ್ತಿಗಳು ಸಮಸ್ಪರ್ಧಿಗಳಾಗಿ ನಿಂತು ರಾಶಿಯನ್ನು ಸಮಸ್ಥಿತಿಯಲ್ಲಿ—ಹಿಗ್ಗದೆ, ಕುಗ್ಗದೆ—ನಿಲ್ಲಿಸುತ್ತವೆ ಎಂಬ ಫಲಿತಾಂಶ ಬರುತ್ತದೆ. ಅನಿಲಗೋಳದ ಭಾರವು ೧೦^{೩೫} ಗ್ರಾಂಗಳನ್ನೂ ಮೀರಿದರೆ ವಿಸರಣಶಕ್ತಿಯ ಕೈ ಮೇಲಾಗುತ್ತದೆ, ಅಂದರೆ ತೇಜಸ್ಸಿನ ಹೊರ ಒತ್ತಡವು ಹೆಚ್ಚಿ ರಾಶಿಯು ಬಿರಿದುಬಿಡಬೇಕಾಗುತ್ತದೆ. ಗೋಳ

[1] Radiant Energy.

ವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸೆಣಸುತ್ತಿರುವ ಈ ಶಕ್ತಿಗಳಲ್ಲಿ ಗುರುತ್ವಾಕರ್ಷಣದ್ದು ಎಷ್ಟುಭಾಗ ಮತ್ತು ವಿಸರಣವಿಕರ್ಷಣದ್ದು ಎಷ್ಟುಭಾಗ ಎಂಬುದನ್ನು ಕೆಳಗಿನ ಪಟ್ಟಿಯು ತೋರಿಸುತ್ತದೆ. ೩೨ ಕ್ಕಿಂತ ಸಣ್ಣ ಗೋಳಗಳಲ್ಲಿ ವಿಸರಣ ಶಕ್ತಿಯ ಪಾತ್ರ ಕೆಲಸಕ್ಕೆ ಬಾರದ್ದು, ಹಾಗೆಯೇ ೩೮ ಕ್ಕಿಂತ ದೊಡ್ಡಗೋಳಗಳಲ್ಲಿ ಗುರುತ್ವಾಕರ್ಷಣ ಶಕ್ತಿಯ ಪಾತ್ರ ಕೆಲಸಕ್ಕೆ ಬಾರದ್ದಾದಕಾರಣ ಅವನ್ನು ಪಟ್ಟಿಯಲ್ಲಿ ಸೇರಿಸಿಲ್ಲ.

ಗೋಳ ಸಂಖ್ಯೆ	ಹಿಗ್ಗಿಸಲು ತೊಡಗಿರುವ ವಿಸರಣಶಕ್ತಿ	ಕುಗ್ಗಿಸಲು ತೊಡಗಿರುವ ಅನಿಲದ ಒತ್ತಡದ ಶಕ್ತಿ
೩೨	೧೬	೯,೯೮೪
೩೩	೧,೦೬೦	೮,೯೪೦
೩೪	೫,೭೦೦	೪,೩೦೦
೩೫	೮,೫೦೦	೧.೫೦೦
೩೬	೯,೫೧೦	೪೯೦
೩೭	೯,೮೪೦	೧೬೦
೩೮	೯,೯೫೦	೫೦

ಕಾಗದ ಪೆನ್ಸಿಲ್ಲು ತೆಗೆದುಕೊಂಡು ಎಡ್ಡಿಂಗ್‌ಟನ್ ಲೆಕ್ಕವನ್ನೇನೋ ಗುಣಿಸಿದ್ದಾನೆ, ಆದರೆ ಆತನ ಲೆಕ್ಕ ಸರಿಯೆಂಬುದಕ್ಕೆ ಸಮರ್ಥನೆ ಏನಾದರೂ ಉಂಟೇ ಎಂದು ಕೇಳಬೇಕಾದ್ದು ಸಹಜ. ತಲೆಯೆತ್ತಿ ನೋಡಿದಾಗ ನಮಗೆ ಮತ್ತು ನಮ್ಮ ಸಾಧನಗಳಿಗೆ ಕಾಣುವ ಎಲ್ಲ ನಕ್ಷತ್ರಗಳೂ ಎಡ್ಡಿಂಗ್‌ಟನ್‌ನ ವಾದವನ್ನು ಸಮರ್ಥಿಸುವಂಥವೇ. ಇದುವರೆಗೆ ಪತ್ತೆಯಾಗಿರುವ ನಕ್ಷತ್ರಗಳಲ್ಲೆಲ್ಲ ಹಗುರವಾದ ನಕ್ಷತ್ರದ ಭಾರವು ಸೂರ್ಯನ ಭಾರದ ಸುಮಾರು $\frac{೧}{೭}$ ರಷ್ಟು. ಸೂರ್ಯನ ಭಾರವು ೨×೧೦^{೩೩} ಗ್ರಾಂಗಳು. ಸೂರ್ಯನಿಗಿಂತ ೭೦ ರಷ್ಟಕ್ಕಿಂತ ಹೆಚ್ಚಿನ ಭಾರದ ನಕ್ಷತ್ರ ಸಿಕ್ಕಿಲ್ಲ. ಅಲ್ಲಿಗೆ ಎಲ್ಲ ನಕ್ಷತ್ರಗಳೂ ೩೩ ರಿಂದ ೩೫ ರ ವರೆಗಿನ ಕ್ರಮಸಂಖ್ಯೆಯೊಳಗಿನವೇ ಅಥವಾ ಲಘುತಮ ನಕ್ಷತ್ರಕ್ಕೂ ಭಾರತಮ ನಕ್ಷತ್ರಕ್ಕೂ ಇರುವ ಭಾರಪ್ರಮಾಣವು ೧ ರಿಂದ ೫೦೦ ಎಂದಾಯಿತು. ಆದರೆ ಅತಿ ಹಗುರದ ಮತ್ತು ಅತಿ ಭಾರದ ಅಸಾಧಾರಣ ನಕ್ಷತ್ರಗಳೊಂದೆರಡನ್ನು ಬಿಟ್ಟುಬಿಟ್ಟರೆ ನಕ್ಷತ್ರಗಳ ಭಾರಪ್ರಮಾಣವು ೧ ರಿಂದ ೫೦ರೊಳಗೇ ಇದೆ. (೩೩-೩೪ ನೆಯ ಗೋಳಗಳು) ಇದನ್ನು ಮನುಷ್ಯರ ಭಾರಪ್ರಮಾಣದೊಂದಿಗೆ ಹೋಲಿಸಬಹುದು. ಶಿಶುವಿನ

ಭಾರವು ಸಾಮಾನ್ಯವಾಗಿ ೫ ಪೌಂಡುಗಳಿಗೆ ಕಡಮೆ ಇರುವುದಿಲ್ಲ. ೨೫೦ ಪೌಂಡುಗಳನ್ನು ಭಾರಿ ಮನುಷ್ಯನ ತೂಕವೆಂದು ಹೇಳಬಹುದು. ಅಪರೂಪವಾಗಿ ೪೦೦ ಪೌಂಡಿನವರೂ ಇರಬಹುದು, ಸರಿಯಾಗಿ ಬೆಳೆಯದ ೨-೩ ಪೌಂಡಿನ ಶಿಶುಗಳೂ ಹುಟ್ಟಬಹುದು.

ನಕ್ಷತ್ರಗಳ ಭಾರಗಳ ಸಂಶೋಧನೆಯನ್ನು ಎಡ್ಡಿಂಗ್‌ಟನ್ ಇಷ್ಟಕ್ಕೇ ನಿಲ್ಲಿಸಲಿಲ್ಲ. ಭಾರ ಹೆಚ್ಚಿದಂತೆ ಉಷ್ಣಾಂಶವು ಹೆಚ್ಚುವುದರಿಂದ ತೇಜಸ್ಸೂ ಹೆಚ್ಚುತ್ತದೆ. ನಕ್ಷತ್ರದ ಭಾರಕ್ಕೂ ಅದರ ಸಹಜಕಾಂತಿಗೂ ಇರುವ ಈ ಸಂಬಂಧವನ್ನು ಅವನು ಸಪರಿಮಾಣವಾಗಿ ಗುಣಿಸಿದನು. ಹೀಗೆ ಗುಣಿಸಿದ ಭಾರ—ಕಾಂತಿನಿಯಮವನ್ನು ಕೆಳಗೆ ಪಟ್ಟಿಯ ರೂಪದಲ್ಲಿ ಕೊಟ್ಟಿದೆ.

ಎಡ್ಡಿಂಗ್‌ಟನ್‌ನ ಭಾರ-ಕಾಂತಿ ನಿಯಮ

ನಕ್ಷತ್ರದ ಭಾರ (ಸೂರ್ಯನ ಭಾರ=೧)	೦.೨	೦.೪	೧.೨	೩.೪	೮	೧೬	೩೦
ನಕ್ಷತ್ರದ ಸಹಜ ಕಾಂತಿ ವರ್ಗಾಂಕ	೧೨	೮	೪	೦	—೨	—೩	—೫

ಅತಿ ವಿಸ್ಮಯಕರವಾದ ಈ ಭಾರ-ಕಾಂತಿ ನಿಯಮವು ಸಂಪೂರ್ಣವಾಗಿ ತಾತ್ತ್ವಿಕ ನಿಯಮ. ನಕ್ಷತ್ರಗಳಿಗೆ ಸಂಬಂಧಿಸಿದ ಯಾವ ಪ್ರಾಯೋಗಿಕ ಅಂಕಿಅಂಶಗಳನ್ನೂ ಆಧಾರವಾಗಿ ತೆಗೆದುಕೊಳ್ಳದೆ ಎಡ್ಡಿಂಗ್‌ಟನ್‌ನು ಈ ನಿಯಮವನ್ನು ಸಾಧಿಸಿದನು. ತಾರಾಯುಗ್ಮಗಳ ಭಾರಗಳನ್ನು ಪ್ರಯೋಗಮಾರ್ಗಗಳಿಂದ ನಿರ್ಧರಿಸಬಹುದೆಂದು ನಮಗೆ ತಿಳಿದಿದೆ. ಎಲ್ಲ ವರ್ಗಗಳ ಯುಗ್ಮಗಳೂ ಹೀಗೆ ಪ್ರಯೋಗಕ್ಕೆ ಸಿಕ್ಕಿವೆ. ಈ ವಿವಿಧ ತಾರೆಗಳ ಭಾರ, ಸಹಜಕಾಂತಿಗಳನ್ನು ಮೇಲಿನ ನಿಯಮದ ಭಾರ-ಕಾಂತಿಗಳಿಗೆ ಹೋಲಿಸಿದರೆ ಬಹಳ ಸಮರ್ಪಕವಾಗಿ ತಾಳಿಕೆ ಬರುತ್ತದೆ. ಆದಕಾರಣ ಯುಗ್ಮವಲ್ಲದಿದ್ದರೂ ತಾರೆಯ ದೂರವೊಂದು ನಿರ್ಣಯವಾದರೆ ಅದರ ಸಹಜಕಾಂತಿಯನ್ನು ಗುಣಿಸಿ ಈ ನಿಯಮದಿಂದ ಒಂಟಿ ತಾರೆಯ ಭಾರವನ್ನು ನಿರ್ಧರಿಸಬಹುದು.

೭. ಯೌಧಿಷ್ಠಿರ ಚಂಚಲತಾರೆಗಳ ಸಂಕೋಚ ವ್ಯಾಕೋಚ ವಾದ

ಹಿಂದೆ ವಿವರಿಸಿರುವ ಗ್ರಹಣಯುಗ್ಮಗಳ ಲಕ್ಷಣಗಳನ್ನು ಮನನ ಮಾಡಿದ ಮೇಲೆ ಯೌಧಿಷ್ಠಿರ ಚಂಚಲತಾರೆಗಳೂ ಏಕೆ ಗ್ರಹಣಯುಗ್ಮಗಳಾಗಿರಬಾರದು

ಎಂದನ್ನಿಸುವುದು ಸ್ವಾಭಾವಿಕ. ಸಾಲದ್ದಕ್ಕೆ ಈ ತಾರೆಗಳ ವರ್ಣಪಟಲ ರೇಖೆಗಳೂ ಅವುಗಳ ಕಾಂತಿಯ ಆವರ್ತಕಾಲಕ್ಕೆ ಸರಿಯಾಗಿ ಆವರ್ತಸ್ಥಾನಪಲ್ಲಟಗಳನ್ನೂ ತೋರುತ್ತವೆ. ಆದರೆ ಈ ಸ್ಥಾನಪಲ್ಲಟದಲ್ಲಿ ಒಂದು ವೈಶಿಷ್ಟ್ಯವಿದೆ. ತಾರೆಯ ವೇಗವು ನಮಗೆ ಅಭಿಮುಖವಾಗಿ ಅಧಿಕತಮವಾದಾಗ ಕಾಂತಿಯು ಅಧಿಕತಮವಾಗಿರುತ್ತದೆ. ವಿಮುಖವೇಗವು ಅಧಿಕತಮವಾದಾಗ ಕಾಂತಿಯು ಕನಿಷ್ಠತಮವಾಗಿ ಕಾಣುತ್ತದೆ. ಹೀಗೆ ಇವುಗಳ ಕಾಂತಿರೇಖೆಗಳು ಗ್ರಹಣಯುಗ್ಮಗಳ ಕಾಂತಿರೇಖೆಗಳಂತಲ್ಲವಾದ್ದರಿಂದ ಯೌಧಿಷ್ಠಿರಗಳು ಗ್ರಹಣಯುಗ್ಮಗಳಾಗಿರುವುದು ಸಾಧ್ಯವಲ್ಲ.

ಯೌಧಿಷ್ಠಿರ ತಾರೆಗಳ ಕಾಂತಿರೇಖೆಗಳು ಅರ್ಥವಾಗುವಂಥ ಒಂದು ವಾದವನ್ನು ಶೇಪ್ಲಿಯು ಪ್ರತಿಪಾದಿಸಿದ್ದಾನೆ. ಈತನ ವಾದದಂತೆ ಈ ತಾರೆಗಳು ಬೃಹದ್ಗಾತ್ರದ ಅಲ್ಪಸಾಂದ್ರತೆಯ ತಾರೆಗಳು. ಇವು ಪ್ರಾಣಿಗಳ ಹೃತ್ಕೋಶಗಳಂತೆ ತುಡಿಯುತ್ತವೆ—ಹಿಗ್ಗುತ್ತವೆ, ಕುಗ್ಗುತ್ತವೆ. ಈ ನಾಡಿವೇಗವೇ ಇವುಗಳ ಆವರ್ತಕಾಲ. ಈ ತಾರೆಗಳ ಸಂಕೋಚನ ವೇಗವು ಅಧಿಕವಾದಾಗ ಇವುಗಳ ವರ್ಣಪಟಲ ರೇಖೆಗಳು ಅಧಿಕ ವಿಮುಖವೇಗವನ್ನು ತೋರುತ್ತವೆ, ಕಾಂತಿಯು ಕಡಮೆಯಾಗುತ್ತದೆ. ತಾರೆಗಳು ರಭಸದಿಂದ ಹಿಗ್ಗುತ್ತಿರುವಾಗ ವರ್ಣರೇಖೆಗಳು ಅಭಿಮುಖವೇಗವನ್ನು ತೋರುತ್ತವೆ, ಕಾಂತಿಯು ವೃದ್ಧಿಯಾಗುತ್ತದೆ.

ಯೌಧಿಷ್ಠಿರ ತಾರೆಗಳಲ್ಲಿ ಶಕ್ತಿಯ ಉತ್ಪತ್ತಿ ಮತ್ತು ಅದರ ವಿನ್ಯಾಸ ಅಥವಾ ವಿಲೇವಾರಿಗಳಿಗಿರಬೇಕಾದ ಸಮನ್ವಯವು ತಪ್ಪಿದರೆ ಗುರುತ್ವಾಕರ್ಷಣ ಮತ್ತು ವಿಸರಣ ಶಕ್ತಿಗಳಿಗೆ ತಾರೆಯನ್ನು ಸಮಸ್ಥಿತಿಯಲ್ಲಿರಿಸಲು ಕಷ್ಟಸಾಧ್ಯವಾಗಿ ಅವು ಹೀಗೆ ಹೆಣಗಬೇಕಾದೀತು. ಈ ಸಮನ್ವಯವು ತಪ್ಪಲು ಕಾರಣವೇನಿರಬಹುದು? ಪ್ರಾಯಶಃ ಲಕ್ಷಾಂತರ ವರ್ಷಗಳ ಹಿಂದೆ ಇಂಥ ತಾರೆಯ ಸಮೀಪದಲ್ಲಿ ಮತ್ತೊಂದು ತಾರೆಯು ಹಾದುಹೋಗಿರಬೇಕು. ಯೌಧಿಷ್ಠಿರ ತಾರೆಯು ಅಲ್ಪಸಾಂದ್ರತೆಯ ಅನಿಲಗೋಳವಾದ ಕಾರಣ ಆ ಹಾದಿಹೋಕತಾರೆಯ ಆಕರ್ಷಣಕ್ಷೇತ್ರಕ್ಕೆ ಸಿಕ್ಕಿದಾಗ ಅದರ ದಿಕ್ಕಿನಲ್ಲಿ ಸುಲಭವಾಗಿ ಹಿಗ್ಗುತ್ತದೆ. ಹೀಗೆ ಹಿಗ್ಗುವಾಗ ತಾರೆಯ ಹೊರಮೈ ಬಿರಿದು ಪ್ರಚಂಡ ಉಷ್ಣಾಂಶದ ಅಂತರಾಳದಿಂದ ಅಗಾಧ ಪ್ರಮಾಣದಲ್ಲಿ ಭೀಕರ ಸ್ಫೋಟಕ ಸಾಮಗ್ರಿಗಳೂ, ತೀವ್ರ ತೇಜಸ್ಸೂ ಸೋರಿಹೋಗುತ್ತವೆ. ಇಷ್ಟು ಹೊತ್ತಿಗೆ ಹಾದಿಹೋಕತಾರೆಯು ತನ್ನ ದಾರಿಹಿಡಿದು ಮುಂದೆ ಸಾಗಿದ್ದರೆ, ಯೌಧಿಷ್ಠಿರ ತಾರೆಯು ಕುಸಿಯುತ್ತದೆ, ಆದರೆ ತನ್ನ ಪೂರ್ವರೂಪ ತಾಳಿದ ಕೂಡಲೆ ಕುಸಿಯುವುದು ನಿಲ್ಲುವುದಿಲ್ಲ. ಕುಸಿತದ ರಭಸಕ್ಕೆ ಮತ್ತಷ್ಟು ಹೆಚ್ಚಾಗಿಯೇ ತಾರೆಯು ಕುಗ್ಗುತ್ತದೆ. ಕುಗ್ಗಿದ್ದರಿಂದ ಉಷ್ಣ ಹೆಚ್ಚಾಗುತ್ತದೆ, ವಿಸರಣಶಕ್ತಿಯು ತಾರೆಯನ್ನು

ಪುನಃ ಹಿಗ್ಗಿಸುತ್ತದೆ, ಮೈ ಬಿರಿದು ತೀಕ್ಷ್ಣತೇಜಸ್ಸು ಸೋರಿಹೋಗಿ ಅದರ ಕಾರಣ ವಾಗಿ ಪುನಃ ಕುಗ್ಗುತ್ತದೆ. ಈ ರೀತಿಯಲ್ಲಿ ತಾರೆಯ ಸಂಕೋಚ ವ್ಯಾಕೋಚ ಚಕ್ರವು ಉರುಳಿ ಸಾಗುತ್ತದೆ.

ಭಾರದಿಂದ ಹಿಗ್ಗಿರುವ ಸ್ಪ್ರಿಂಗನ್ನು ನಾವು ಒಂದುಸಲ ಜಗ್ಗಿ ಎಳೆದುಬಿಟ್ಟರೆ ಅದು ಹೇಗೆ ಅನಂತರ ಹಲವುಬಾರಿ ಮೇಲೆ ಕೆಳಗೆ ತೂಗಾಡುತ್ತದೆಯೋ ಹಾಗೆಯೇ ಯೌಧಿಷ್ಠಿರ ತಾರೆಯೂ ತುಡಿಯುತ್ತದೆಂದು ಹೇಳಬಹುದು. ಘರ್ಷಣೆ[1]ಯಿರುವುದ ರಿಂದ ಸ್ಪ್ರಿಂಗಿನ ತೂಗಾಟದ ಚಲನೆಯು ಬೇಗನೆ ನಿಂತುಹೋಗುತ್ತದೆ. ಯೌಧಿಷ್ಠಿರ ತಾರೆಯು ಶೂನ್ಯಾಕಾಶದಲ್ಲಿ ತೇಲುತ್ತಿರುವುದರಿಂದ ಅದರ ಚಲನೆಗೆ ಅಡ್ಡಿಬರುವ ಘರ್ಷಣೆಯು ಅಂತರ್ಘರ್ಷಣೆ[2] ಬಿಟ್ಟರೆ ಬೇರೆ ಯಾವುದೂ ಇಲ್ಲ. ಆದ್ದರಿಂದ ಆರಂಭ ವಾದ ಸಂಕೋಚ ವ್ಯಾಕೋಚಗಳು ತಡೆಯಿಲ್ಲದೆ ಸಾವಿರಾರು ವರ್ಷಗಳ ಕಾಲ, ಲಕ್ಷಾಂತರ ವರ್ಷಗಳ ಕಾಲ ನಡೆಯುತ್ತವೆ.

ಹಿಂದಿನ ಅಧ್ಯಾಯದಲ್ಲಿ ಯೌಧಿಷ್ಠಿರ ತಾರೆಗಳ ಕಾಂತಿ-ಕಾಲ ನಿಯಮದ ವಿಚಾರ ನಡೆದಿದೆ. ಎಡ್ಡಿಂಗ್‌ಟನ್‌ನ ಗುಣಿತದಂತೆ ಈ ತಾರೆಗಳ ಆವರ್ತಕಾಲವು ಅವುಗಳ ಸಾಂದ್ರತೆಯ ವರ್ಗಮೂಲಕ್ಕೆ ಸರಿಸುಮಾರಾಗಿ ವಿಲೋಮಾನುಪಾತ[3] ವಾಗಿರಬೇಕು, ಅಂದರೆ ಒಂದು ಯೌಧಿಷ್ಠಿರ ತಾರೆಯ ಸಾಂದ್ರತೆಯು ಮತ್ತೊಂದರ ಸಾಂದ್ರತೆಯ ನಾಲ್ಕರಲ್ಲೊಂದಾದರೆ, ಅದರ ಆವರ್ತಕಾಲವು ಆ ಮತ್ತೊಂದರ ಎರಡರಷ್ಟಿರಬೇಕು. ಈ ನಿಯಮವನ್ನು ಯೌಧಿಷ್ಠಿರ ತಾರೆಗಳು ಪಾಲಿಸುತ್ತವೆ.

೮. ತಾರೆಗಳ ಉಷ್ಣಾಂಶ

ಖಂಡವಾದ[4]ಕ್ಕನುಸಾರವಾಗಿ ವಿಸರಣ ಶಕ್ತಿಯ ಸರಿಯಾದ ಸ್ವರೂಪವನ್ನು ವಿಜ್ಞಾನಿಯು ಗ್ರಹಿಸುವವರೆಗೂ ತಾರೆಗಳ ಉಷ್ಣಾಂಶವು ಬರಿಯ ಊಹೆಯ ಮಾತಾಗಿತ್ತು. ಕಬ್ಬಿಣದ ಸಲಾಕಿಯೊಂದನ್ನು ಕಾಯಿಸಿದರೆ ಮೊದಲು ಅದು ಮಾಸಲು ಕೆಂಪಾಗಿ, ಅನಂತರ ಕಾವು ಹೆಚ್ಚಿದಂತೆ ಕಡುಕೆಂಪು, ಹಳದಿ ಮಿಶ್ರಕೆಂಪು, ಕೊನೆಗೆ ಹೊಳೆಯುವ ಬಿಳುಪು ಬಣ್ಣಕ್ಕೆ ತಿರುಗುತ್ತದೆಂದು ಎಲ್ಲರಿಗೂ ತಿಳಿದಿದೆ. ಹಾಗೆಯೇ ಸಲಾಕಿಯು ಆರಿದರೆ ಪ್ರತಿಕ್ರಮದಲ್ಲಿ ಇದೇ ಬಣ್ಣಗಳನ್ನು ತಾಳಿ ಕಪ್ಪಗಾಗುತ್ತದೆ. ಕಬ್ಬಿಣದ ಬದಲು ಬೆಳ್ಳಿ, ತಾಮ್ರ, ಬಂಗಾರ ಹೀಗೆ ತಣ್ಣಗಿರುವಾಗ ವಿವಿಧ ವರ್ಣ ಗಳಿಂದ ಕಾಣುವ ಯಾವ ಪದಾರ್ಥವನ್ನು ಕಾಯಿಸಿದರೂ ಉಷ್ಣಾಂಶವು ಏರಿದಂತೆ ಎಲ್ಲ ಪದಾರ್ಥಗಳೂ ಆ ಉಷ್ಣಾಂಶಕ್ಕೆ ಸರಿಯಾದ ಬಣ್ಣಗಳಿಂದಲೇ ಹೊಳೆಯುತ್ತವೆ.

---

[1] Friction. [2] Internal friction. [3] Inversely proportional.
[4] Quantum Theory.

ಆದಕಾರಣ ಬಿಸಿಪದಾರ್ಥಗಳ (ಸುಮಾರು ೫೦೦ ಸೆಂಟಿಗ್ರೇಡ್ ಡಿಗ್ರಿಗಳಿಗಿಂತ ಅಧಿಕ ಉಷ್ಣಾಂಶದ ಪದಾರ್ಥಗಳ) ಉಷ್ಣಾಂಶಗಳನ್ನು ಅವುಗಳ ಬಣ್ಣ ನೋಡಿ ಊಹಿಸಬಹುದು.

ಬರಿಯ ಕಣ್ಣಿನಿಂದಲೇ ನಕ್ಷತ್ರವು ಯಾವ ಬಣ್ಣದ್ದೆಂದು ಗೊತ್ತುಹಚ್ಚಿ ಅದರ ಉಷ್ಣಾಂಶವು ಇಷ್ಟೇ ಎಂದು ಹೇಳಲಿಕ್ಕಾಗದಿದ್ದರೂ, ಸೂಕ್ಷ್ಮಯಂತ್ರೋಪಕರಣಗಳ ಸಹಾಯದಿಂದ ಇದೇ ಮಾರ್ಗವನ್ನನುಸರಿಸಿ ತಾರೆಗಳ ಉಷ್ಣಾಂಶಗಳನ್ನು ವಿಜ್ಞಾನಿಗಳು ನಿರ್ಧರಿಸಿದ್ದಾರೆ. ತಾರೆಯ ವರ್ಣಪಟಲವನ್ನು ಬಿಂಬಗ್ರಾಹಿಯ ಫಲಕದ ಮೇಲೆ ಹಿಡಿಯುವುದರ ಬದಲು ವರ್ಣಪಟಲದ ವಿವಿಧ ವರ್ಣಗಳಲ್ಲಿ ಉಷ್ಣಶಕ್ತಿಯು ಯಾವ ಪ್ರಮಾಣಗಳಲ್ಲಿ ಹರಡಿದೆ ಎಂಬುದನ್ನು ಕೆಲವು ಸೂಕ್ಷ್ಮ ಉಷ್ಣಶಕ್ತಿಮಾಪಕ ಯಂತ್ರಗಳಿಂದ ನಿರ್ಣಯಿಸುತ್ತಾರೆ. ತಾರೆಯ ಉಷ್ಣಾಂಶವು ಕಡಿಮೆ ಇದ್ದರೆ ಉಷ್ಣಶಕ್ತಿಯಲ್ಲಿ ಹೆಚ್ಚುಭಾಗ ಕೆಂಪುಬಣ್ಣದಲ್ಲಿ ಅಡಕವಾಗಿರುತ್ತದೆ. ಉಷ್ಣಾಂಶವು ಏರಿದಂತೆ ಒಟ್ಟು ಉಷ್ಣಶಕ್ತಿಯ ಬಹುಭಾಗ ಕ್ರಮವಾಗಿ ಹಳದಿ, ಹಸುರು ಮತ್ತು ನೀಲಿ ಬಣ್ಣಗಳಲ್ಲಿ ಅಡಗಿರುತ್ತದೆ. ಉಷ್ಣಶಕ್ತಿಯು ವಿವಿಧ ವರ್ಣಗಳಲ್ಲಿ ಹರಡಿರುವ ಪ್ರಮಾಣಕ್ಕೂ, ವಿಸರಣವಸ್ತುವಿನ ಉಷ್ಣಾಂಶಕ್ಕೂ ಇರುವ ಸಂಬಂಧವನ್ನು ಖಚಿತವಾದ ವಿಸರಣನಿಯಮಗಳು ನಿಷ್ಕೃಷ್ಟವಾಗಿ ತಿಳಿಸುತ್ತವೆ. ನಕ್ಷತ್ರದ ಒಳಭಾಗದಿಂದ ಹರಿದುಬರುವ ತೇಜಶ್ಶಕ್ತಿಯನ್ನು ಸಂಪೂರ್ಣವಾಗಿ ವಿಸರಿಸುವಂಥ ಹೊರಮೈ ನಕ್ಷತ್ರಕ್ಕಿದ್ದರೆ ಆ ಹೊರಮೈಯ ಉಷ್ಣಾಂಶವನ್ನು ವಿಸರಣ ನಿಯಮಗಳಿಂದ ಗುಣಿಸಬಹುದು. ವಿವಿಧ ವರ್ಣವರ್ಗಗಳ ತಾರೆಗಳ ಹೊರಮೈಯ ಉಷ್ಣಾಂಶಗಳನ್ನು ಕೆಳಗಿನ ಪಟ್ಟಿಯು ತಿಳಿಸುತ್ತದೆ. ಇವುಗಳ ಒಳಶರೀರದ ಉಷ್ಣಾಂಶವು ೨ ರಿಂದ ೫ ಕೋಟಿ ಡಿಗ್ರಿಗಳಿರಬೇಕೆಂದೂ ಲೆಕ್ಕಮಾಡಿದ್ದಾರೆ.

ವರ್ಣವರ್ಗ	ಉಷ್ಣಾಂಶ—ಸೆಂಟಿಗ್ರೇಡ್ ಡಿಗ್ರಿಗಳು	ವರ್ಣವರ್ಗ	ಉಷ್ಣಾಂಶ—ಸೆಂಟಿಗ್ರೇಡ್ ಡಿಗ್ರಿಗಳು
O	೩೫,೦೦೦-೨೫,೦೦೦	G_0	೫,೭೫೦
B_0	೨೦,೦೦೦	G_5	೫,೪೦೦
B_5	೧೪.೦೦೦	K_0	೪.೯೦೦
A_0	೧೦,೬೦೦	K_5	೪,೩೦೦
A_5	೮,೨೦೦	M_0	೩,೪೦೦
F_0	೭,೧೦೦	M_2	೨,೮೭೦
F_5	೬,೩೦೦	M_8	೧,೭೮೦

ವರ್ಣಪಟಲಗಳ ವಿವಿಧ ರೇಖೆಗಳ ಪರಿಶೀಲನೆಯಿಂದ ಮಾತ್ರ ವರ್ಣವರ್ಗಗಳನ್ನು O, B, A ಇತ್ಯಾದಿ ಕ್ರಮದಲ್ಲಿ ವಿಂಗಡಿಸಿದ್ದರೂ ಇದೇ ಕ್ರಮವು ಉಷ್ಣಾಂಶಕ್ಕನುಸಾರವಾಗಿದೆ ಎಂಬುದು ಪಟ್ಟಿಯಿಂದ ವ್ಯಕ್ತಪಡುತ್ತದೆ. R, N, ಮತ್ತು S ವರ್ಗಗಳು ಉಷ್ಣಾಂಶದ ದೃಷ್ಟಿಯಿಂದ M ವರ್ಗದ ಉಪವರ್ಗಗಳೊಳಗೇ ಸೇರಿಹೋಗುತ್ತವೆ. ಆದರೆ ಅವುಗಳ ವರ್ಣಪಟಲಗಳಲ್ಲಿ ಇಂಗಾಲ-ಸಾರಜನಕ[1], ಇಂಗಾಲ-ಜಲಜನಕ[2], ಇಂಗಾಲ-ಇಂಗಾಲ[3] ಈ ಅಣುಗಳ ರೇಖಾವ್ಯೂಹಗಳು[4] ವಿಪುಲವಾಗಿ ಎದ್ದು ಕಾಣುವುದರಿಂದ ಅವಕ್ಕೆ R, N ಮತ್ತು S ಗಳೆಂದು ಬೇರೆಯಾಗಿ, ನಕ್ಷತ್ರಗಳ ಉಷ್ಣಾಂಶಗಳ ನಿರ್ಣಯವಾಗುವುದಕ್ಕಿಂತ ಮುಂಚೆಯೇ, ಖಗೋಳಜ್ಞರು ನಾಮಕರಣಮಾಡಿದ್ದರು. ೫೦,೦೦೦ ಡಿಗ್ರಿಗಳಿಗಿಂತ ಅಧಿಕ ಉಷ್ಣಾಂಶದ ಒಂದೆರಡು ನಕ್ಷತ್ರಗಳೂ ಪತ್ತೆಯಾಗಿವೆ. ಈಚೆಗೆ ಫ್ಲಾನ್ ಬೀಸ್‌ಬ್ರೋಕ್ ಎಂಬಾತನು ಗರುಡರಾಶಿಯಲ್ಲಿ ೧೯ ನೆಯ ಸಹಜಕಾಂತಿ ವರ್ಗಾಂಕದ ತಾರೆಯೊಂದನ್ನು ಕಂಡುಹಿಡಿದಿದ್ದಾನೆ. ಇದರ ಕಾಂತಿಯು ಸೂರ್ಯನ ಕಾಂತಿಯ ಹತ್ತುಲಕ್ಷದಲ್ಲೊಂದಂಶದಷ್ಟು! ಇದಕ್ಕಿಂತ ಕ್ಷೀಣಕಾಂತಿಯ ನಕ್ಷತ್ರವು ಇದುವರೆಗೆ ವೀಕ್ಷಣೆಗೆ ಸಿಕ್ಕಿಲ್ಲ. ಇದರ ಉಷ್ಣಾಂಶವು ೧,೫೦೦ ಡಿಗ್ರಿಗಳಿಗಿಂತ ಕಡಮೆಯೇ ಇರಬೇಕು.

೯. ಕ್ಯಾಲ್ಸಿಯಂ ಪರಮಾಣುವಿನ ನೃತ್ಯಕೌಶಲ

ತಾರೆಗಳ ವರ್ಣಪಟಲಗಳನ್ನು ಪರಿಶೀಲಿಸುತ್ತಿರುವಾಗ ನಾವು F ವರ್ಗಕ್ಕಿಂತ ಕೆಳಗಿನ ತಾರೆಗಳಲ್ಲಿ ಕ್ಯಾಲ್ಸಿಯಂ ಲೋಹದ ಕೃಷ್ಣರೇಖೆಗಳು ಎದ್ದು ಕಾಣುತ್ತವೆಂಬುದನ್ನು ಗಮನಿಸಿದೆವು. ಸೂರ್ಯನ ವರ್ಣಪಟಲದಲ್ಲಿಯೂ ಕ್ಯಾಲ್ಸಿಯಂನ ಕೃಷ್ಣರೇಖೆಗಳು ಪ್ರಧಾನ ಪಾತ್ರ ವಹಿಸಿವೆ. ಸೂರ್ಯನ ಮತ್ತು ನಕ್ಷತ್ರಗಳ ವರ್ಣಪಟಲಗಳು ಆ ಕಾಯಗಳ ಬಾಹ್ಯವಾತಾವರಣಗಳ ಸ್ಥಿತಿಗಳನ್ನು ಪ್ರತಿಬಿಂಬಿಸುತ್ತವೆಂಬುದನ್ನು ನಾವು ಮರೆಯಬಾರದು. ಹೀಗಿದ್ದಲ್ಲಿ, ಹಗುರವಾದ ಜಲಜನಕ, ಹೀಲಿಯಂ, ಆಮ್ಲಜನಕ ಮೊದಲಾದ ಪರಮಾಣುಗಳಿಗಿಂತ ಅಧಿಕ ಪ್ರಮಾಣದಲ್ಲಿ ಭಾರವಾದ ಕ್ಯಾಲ್ಸಿಯಂ ಪರಮಾಣುಗಳು ಹೇಗೆ ಸೂರ್ಯನನ್ನು ಆವರಿಸಿರುವ ವಾಯುಮಂಡಲದಲ್ಲಿ ತೇಲಾಡುತ್ತಿವೆ ಎಂಬುದು ಅನೇಕ ವರ್ಷಗಳಿಂದ ವಿಜ್ಞಾನಿಗಳು ಬಿಡಿಸಲಾಗದ ಒಗಟಾಗಿತ್ತು.

ಈ ಒಗಟನ್ನು ಬಿಡಿಸಲು ಹಾದಿ ತೋರಿಸಿದ ವಿಜ್ಞಾನಿಗಳಲ್ಲಿ ಮೊದಲನೆಯವನು ಕಲ್ಕತ್ತೆಯ ಮೇಘನಾದ ಸಹ. ಸೂರ್ಯನ ಬಾಹ್ಯವಾತಾವರಣದಲ್ಲಿರುವ

[1] CN. [2] CH. [3] C_2. [4] Band Spectra.

ಕ್ಯಾಲ್ಷಿಯಂ ಪರಮಾಣುಗಳು ಸಾಮಾನ್ಯಸ್ಥಿತಿಯಲ್ಲಿಲ್ಲ, ವಿದ್ಯುತ್‌ಸ್ಥಿತಿ[1]ಯಲ್ಲಿವೆ, ಅಂದರೆ ಅವುಗಳ ಹೊರವಲಯಗಳ ಎಲೆಕ್ಟ್ರಾನ್‌ಗಳಲ್ಲಿ ಒಂದನ್ನೋ ಎರಡನ್ನೋ ಅವು ಕಳೆದುಕೊಂಡಿವೆ. ವಾತಾವರಣದ ಉಷ್ಣಾಂಶವು ಅಧಿಕವಾಗಿರುವುದರಿಂದ ಹೀಗೆ ಎಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುವುದು ಪರಮಾಣುಗಳಿಗೆ ಸಾಧ್ಯವೆಂದು ಆತನು ತೋರಿಸಿದ್ದಲ್ಲದೆ, ಅನಿಲದ ಒತ್ತಡ ಇಷ್ಟಿದ್ದರೆ, ಉಷ್ಣಾಂಶ ಇಷ್ಟಿದ್ದರೆ, ಒಟ್ಟು ಪರಮಾಣುಗಳಲ್ಲಿ ಎಷ್ಟುಭಾಗ ಒಂದು ಎಲೆಕ್ಟ್ರಾನ್ ಕಳೆದುಕೊಂಡಿರುತ್ತವೆ, ಎಷ್ಟುಭಾಗ ಎರಡು ಅಥವಾ ಹೆಚ್ಚು ಎಲೆಕ್ಟ್ರಾನ್‌ಗಳನ್ನು ಕಳೆದುಕೊಂಡಿರುತ್ತವೆ ಎಂಬುದನ್ನು ಗುಣಿಸುವ ಮಾರ್ಗವನ್ನೂ ತೋರಿಸಿಕೊಟ್ಟನು. ಈತನ ಔಷ್ಣಿಕ ವಿದ್ಯುತ್‌ಸ್ಥಿತಿ ಅಥವಾ ಔಷ್ಣಿಕಾಯನವಾದವು[2] ಕ್ಯಾಲ್ಷಿಯಂ ಲೋಹವು ಸೌರ ವಾಯುಮಂಡಲದಲ್ಲಿ ತೇಲುತ್ತಿರುವುದರ ಮರ್ಮವನ್ನೂ ಬಯಲಿಗೆಳೆಯಿತು. ಗಣಿತರಹಿತ ಭಾಷೆಯಲ್ಲಿ ಅದನ್ನು ಹೀಗೆ ವಿವರಿಸಬಹುದು.

ಕ್ಯಾಲ್ಷಿಯಂ ಪರಮಾಣುವಿನ ಹೊರವಲಯದ ಎಲೆಕ್ಟ್ರಾನ್ ಕಣವು ಸೂರ್ಯನ ಶರೀರವನ್ನು ಭೇದಿಸಿಕೊಂಡು ಬರುತ್ತಿರುವ ಅವನ ಕಿರಣಗಳ ಒಂದು ಭಾಗವನ್ನು ಹೀರಿ ತನ್ನ ಸಾಮಾನ್ಯಪಥದಿಂದ ಸ್ವಲ್ಪ ಹೊರಗಿರುವ ಇನ್ನೊಂದು ಪಥಕ್ಕೆ ಹಾರುತ್ತದೆ. ಕಿಂಚಿತ್ಕಾಲ ಈ ಪಥದಲ್ಲಿ ಹಲವು ಪ್ರದಕ್ಷಿಣೆಗಳನ್ನು ಮಾಡಿದ ಮೇಲೆ ತನ್ನ ಪೂರ್ವಪಥಕ್ಕೇ ಧುಮುಕಿ ವಿಶ್ರಮಿಸಿಕೊಳ್ಳುತ್ತದೆ. ಹೀಗೆ ಸಾಮಾನ್ಯ ಪಥದಲ್ಲಿ ಬೀಜದ ಪ್ರದಕ್ಷಿಣೆಗಳನ್ನು ಮಾಡುತ್ತ ಸಮಯ ಕಾಯುತ್ತಿರುವಾಗ ಪುನಃ ಸೂರ್ಯಕಿರಣಗಳನ್ನು ಹಿಡಿದು ಹೊರಗಣ ಪಥಕ್ಕೆ ನೆಗೆಯುತ್ತದೆ. ಈ ರೀತಿ ಸೆಕಂಡೊಂದಕ್ಕೆ ೨೦,೦೦೦ ಬಾರಿ ಕ್ಯಾಲ್ಷಿಯಂ ಪರಮಾಣುವು ಕುಣಿಯುತ್ತದೆ. ಒಂದೊಂದು ಕುಣಿತದ ಈ ಅತ್ಯಲ್ಪಕಾಲದಲ್ಲಿಯೂ ಹೊರಗಣ ಪಥದಲ್ಲಿ ಎಲೆಕ್ಟ್ರಾನ್ ಕಣವು ಕಳೆಯುವುದು ಒಂದು ಸೆಕೆಂಡಿನ ದಶಕೋಟ್ಯಂಶದಷ್ಟು ಕಾಲ ಮಾತ್ರ. ಆದರೂ ಈ ಅಲ್ಪತರ ಕಾಲದಲ್ಲಿ ಕಣವು ಸುಮಾರು ಒಂದುನೂರು ಕೋಟಿ ಪ್ರದಕ್ಷಿಣೆಗಳನ್ನು ಮಾಡಿರುತ್ತದೆ! ಸೂರ್ಯಕಿರಣವನ್ನು ಹೀರಿ ಎಲೆಕ್ಟ್ರಾನನ್ನು ಮೇಲಕ್ಕೆಸೆದು ಪುನಃ ಸಕಾಲದಲ್ಲಿ ಅದನ್ನು ಹಿಡಿದು ನೃತ್ಯವಾಡುವ ಚತುರತೆಯು ಕ್ಯಾಲ್ಷಿಯಂ ಪರಮಾಣುವಿಗಿರುವುದರಿಂದ ಅದು ಸೂರ್ಯನ ವಾಯುಮಂಡಲದೊಳಗೆ ಭಾರವಾಗಿದ್ದರೂ ಮುಳುಗದೆ ಮೇಲೆಯೇ ತೇಲುತ್ತಿರುತ್ತದೆ.

ಸಣ್ಣ ಮೂತಿಯ ನಾಳಿಯೊಳಗಿಂದ ನೆಟ್ಟಗೆ ಮೇಲಕ್ಕೆ ರಭಸವೇಗದಿಂದ ಚಿಮ್ಮುತ್ತಿರುವ ನೀರಿನ ಧಾರೆಯ ಮೇಲೆ ಅಥವಾ ಗಾಳಿಯ ಪ್ರವಾಹದ ಮೇಲೆ

[1] Ionised State. [2] Theory of Thermal Ionisation.

ಒಂದು ಪಿಂಗ್‌ಪಾಂಗ್ ಚೆಂಡನ್ನಿಟ್ಟರೆ ಅದು ಕೆಳಕ್ಕೆ ಬೀಳದೆ ಧಾರೆಯ ಮೇಲೆ ಕುಣಿಯುತ್ತಿರುತ್ತದೆ. ಕ್ಯಾಲ್ಷಿಯಂ ಪರಮಾಣುಗಳೂ ಹೀಗೆ ಸೂರ್ಯಕಿರಣಗಳನ್ನು ವಾಹನಮಾಡಿಕೊಂಡು ನರ್ತಿಸುತ್ತವೆಂದು ಹೇಳಬಹುದು. ಸೂರ್ಯಕಿರಣಗಳ ಯಾವ ವರ್ಣಭಾಗಗಳನ್ನು ಕ್ಯಾಲ್ಷಿಯಂ ಪರಮಾಣುಗಳು ಹೀರಿ ಅಪಹರಿಸುತ್ತವೆಯೋ ಆ ವರ್ಣಭಾಗಗಳು ಸೂರ್ಯನ ವರ್ಣಪಟಲದಲ್ಲಿ ಕಾಂತಿಹೀನವಾಗುತ್ತವೆ. ಇವೇ ಕ್ಯಾಲ್ಷಿಯಂ ಲೋಹದ ಕೃಷ್ಣರೇಖೆಗಳು. ವರ್ಣಪಟಲದ ಇತರ ಕೃಷ್ಣರೇಖೆಗಳಿಗೆ ಇತರ ಪರಮಾಣುಗಳ ನರ್ತನವೇ ಕಾರಣ.

ಕ್ಯಾಲ್ಷಿಯಂನಂತೆಯೇ ಇತರ ಪರಮಾಣುಗಳೂ ಏಕೆ ನರ್ತಿಸಬಾರದು? ಕಿರಣಗಳನ್ನು ಹೀರಿ ಮೇಲಕ್ಕೆ ನೆಗೆಯಲು ಅನುಕೂಲವಾಗಿರುವಂಥ ಸಮೀಪ ದೂರದ ಹೊರಪಥವು ಎಲ್ಲ ಪರಮಾಣುಗಳಿಗೂ ಒಂದೇ ಸಮನಾಗಿ ದೊರಕುವುದಿಲ್ಲ. ಹಗುರ ಪರಮಾಣುವಾದ ಜಲಜನಕಕ್ಕೆ ಈ ನರ್ತನ ಕೌಶಲವಿದ್ದರೂ ಸೂರ್ಯನ ವಾತಾವರಣದಲ್ಲಿಯ ಒತ್ತಡ ಉಷ್ಣಾಂಶಗಳ ಸನ್ನಿವೇಶವು ಕ್ಯಾಲ್ಷಿಯಂಗೆ ಜಲಜನಕಕ್ಕಿಂತ ಹೆಚ್ಚು ಹಿತಕರ. ಆದ್ದರಿಂದಲೇ ಆವರಣದಲ್ಲಿ ಕ್ಯಾಲ್ಷಿಯಂಗಿಂತ ಜಲಜನಕದ ಪರಮಾಣುಗಳು ಅಧಿಕ ಸಂಖ್ಯೆಯವಾದರೂ ವರ್ಣಪಟಲದಲ್ಲಿ ಕ್ಯಾಲ್ಷಿಯಂ ರೇಖೆಗಳದೇ ಹೆಚ್ಚು ಪ್ರಧಾನಪಾತ್ರ. ಅಂದಮೇಲೆ ವರ್ಣಪಟಲದಲ್ಲಿ ಯಾವ ಧಾತುವಿನ ರೇಖೆಗಳು ಎದ್ದು ಕಾಣುತ್ತವೆಯೋ ಅವೇ ಅಧಿಕಪ್ರಮಾಣದಲ್ಲಿ ನಕ್ಷತ್ರದ ಅಥವಾ ಸೂರ್ಯನ ವಾತಾವರಣದಲ್ಲಿವೆಯೆಂದು ಹೇಳಲಾಗುವುದಿಲ್ಲ. ವರ್ಣಪಟಲದ ಬೇರೆ ಬೇರೆ ಧಾತುಗಳ ರೇಖೆಗಳ ಕಾಂತಿಪ್ರಮಾಣಗಳನ್ನು ಅಳೆದು ಮೇಘನಾದ ಸಹನ ಈ ಔಷ್ಣಿಕ ವಿದ್ಯುತ್‌ಸ್ಥಿತಿ ವಾದದ ಸಹಾಯದಿಂದ ನಕ್ಷತ್ರಗಳ ಉಷ್ಣಾಂಶಗಳನ್ನು ನಿಷ್ಕೃಷ್ಟವಾಗಿ ನಿರ್ಧರಿಸಬಹುದು. ಹಿಂದೆ ತಿಳಿಸಿದ ಖಂಡವಾದದ ವಿಸರಣ ನಿಯಮಗಳ ವಿಧಾನಕ್ಕಿಂತ ಈ ಮಾರ್ಗವು ಹೆಚ್ಚು ಫಲಕಾರಿಯಾದ್ದು.

೧೦. ತಾರೆಗಳ ಗಾತ್ರಗಳ ತಾತ್ತ್ವಿಕ ನಿರ್ಣಯ

ನಕ್ಷತ್ರಗಳ ದೂರ, ಭಾರ ಮತ್ತು ಉಷ್ಣಾಂಶಗಳನ್ನು ನಿರ್ಣಯಿಸುವ ವಿಧಾನಗಳನ್ನು ಅವಲೋಕಿಸಿದ್ದಾಯಿತು. ಇನ್ನು ಅವುಗಳ ಗಾತ್ರವನ್ನು ನಿರ್ಣಯಿಸುವುದುಳಿದಿದೆ. ಇದು ಎಲ್ಲಕ್ಕಿಂತಲೂ ಶ್ರಮದ ಕೆಲಸ ಮತ್ತು ಅನೇಕ ವೇಳೆ ಅಸಾಧ್ಯವಾದದ್ದೂ ಆಗಿದೆ. ಸೂರ್ಯಬಿಂಬದ ಕೋನವ್ಯಾಸವನ್ನು ಅಳೆದು ಸೂರ್ಯನ ವ್ಯಾಸವನ್ನು ಗುಣಿಸಿದ್ದು ನಮಗೆ ನೆನಪಿದೆ. ಹಾಗೆಯೇ ನಕ್ಷತ್ರಗಳ ದೂರಗಳನ್ನು ಅಳೆಯುವುದನ್ನು ಕಲಿತಿರುವುದರಿಂದ, ಅವುಗಳ ಬಿಂಬಗಳ ಕೋನವ್ಯಾಸಗಳನ್ನು


ಷಷ್ಠ ಪಟ



ವ್ಯಾಧರಾಶಿಯ ಮಹಾಜ್ಯೋತಿರ್ಮೇಘ

—(ವಿಲ್ಸನ್ ಶಿಖರದ ಅವೇಕ್ಷಣಾಲಯದ ಅಧಿಕಾರಿಗಳ ಕೃಪೆಯಿಂದ)


ಸಪ್ತಮಪಟ (೧)



ಒಂದಡಿ ವ್ಯಾಸದ ದೂರದರ್ಶಿನಿಗೆ ಕೃತ್ತಿಕಾಪುಂಜವು ಕಾಣುವ ರೀತಿ

—(ಜುಲೈ ೧೯೫೦ ರ 'ಎಂಡೆವರ್' ಪತ್ರಿಕೆಯಿಂದ)

ಸಪ್ತಮಪಟ (೨)



ವಸಿಷ್ಠಯುಗ್ಮದ ವರ್ಣಪಟಲಗಳು

—(ಯರ್ಕೈಸ್ ಅವೇಕ್ಷಣಾಲಯ)

ಅಳೆದರೆ ವ್ಯಾಸಗಳನ್ನೂ ನಿರ್ಣಯಿಸಬಹುದು. ಆದರೆ ಗುರು, ಶನಿ, ಮಂಗಳ ಮುಂತಾದ ಗ್ರಹಗಳು ದೂರದರ್ಶಿನಿಗೆ ವೃತ್ತಾಕಾರದ ಬಿಂಬಗಳನ್ನು ಪ್ರದರ್ಶಿಸು ವಂತೆ ನಕ್ಷತ್ರಗಳು ಪ್ರದರ್ಶಿಸುವುದಿಲ್ಲ. ಅವು ಸೂರ್ಯನಷ್ಟೂ ಮತ್ತು ಸೂರ್ಯನಿಗಿಂತ ಅಧಿಕ ಗಾತ್ರದವುಗಳಾದರೂ ಬಹಳ ದೂರದಲ್ಲಿರುವುದರಿಂದ ಎಷ್ಟು ಅದ್ಭುತವಾದ ದೂರದರ್ಶಿನಿಯಲ್ಲಿ ನೋಡಿದರೂ ಬಿಂದುಗಳಾಗಿಯೇ ಉಳಿಯುತ್ತವೆ, ಬಿಲ್ಲೆಗಳಾಗಿ ಕಾಣುವುದಿಲ್ಲ. ಅಷ್ಟೇ ಅಲ್ಲ, ದೂರದರ್ಶಿನಿಯ ಸಾಮರ್ಥ್ಯ ಹೆಚ್ಚಿದಷ್ಟೂ ತಾರೆಗಳು ಚಿಕ್ಕ ಚಿಕ್ಕ ಬಿಂದುಗಳಾಗಿ, ಆದರೆ ಹೆಚ್ಚು ಸ್ಫುಟವಾದ, ಹೆಚ್ಚು ಕಾಂತಿ ಯುಕ್ತವಾದ ಬಿಂದುಗಳಾಗಿ ತೋರುತ್ತವೆ. ಏಕೆಂದರೆ ದೂರದರ್ಶಿನಿಯ ಗಾಜಿನ ದೋಷದಿಂದ ಬಿಂದುವು ಬಿಲ್ಲೆಯಾಗಿ ಹರಡುತ್ತದೆ. ಗಾಜು ದೊಡ್ಡದಾದಷ್ಟೂ, ಅದರ ರಚನೆಯಲ್ಲಿ ಹುಳುಕುಗಳು ಕಡಿಮೆಯಾದಷ್ಟೂ ಬಿಂದುವು ಬಿಲ್ಲೆಯಾಗಿ ಹರಡುವುದು ಕಡಿಮೆಯಾಗುತ್ತದೆ. ನಮ್ಮ ಕಣ್ಣಿಗೆ ಪ್ರಕಾಶತಾರೆಗಳು ಕಾಂತಿಹೀನ ತಾರೆಗಳಿಗಿಂತ ದೊಡ್ಡದಾಗಿ ತೋರುವುದೂ ಕಣ್ಣಿನ ದೃಷ್ಟಿದೋಷದಿಂದಲೇ.

ತಾರೆಯ ದೂರವನ್ನು ನೇರವಾದ ಪ್ರಯೋಗಮಾರ್ಗಗಳಿಂದ ನಿರ್ಣಯಿಸ ಲಿಕ್ಕಾಗದಿದ್ದರೆ ತಾತ್ತ್ವಿಕಮಾರ್ಗವೇನಾದರೂ ಉಂಟೇ ಎಂದು ಹುಡುಕಬೇಕಾ ಗುತ್ತದೆ. ಒಂದು ತಾರೆಯು ನಮ್ಮ ದಿಕ್ಕಿನಲ್ಲಿ ಕಳುಹಿಸುತ್ತಿರುವ ಉಷ್ಣಶಕ್ತಿಯು ಅತ್ಯಲ್ಪ. ಅದನ್ನು ಪತ್ತೆಮಾಡುವುದೇ ಕಷ್ಟವಾಗಿರುವಾಗ ಅಳೆಯುವುದಂತೂ ಆಗದ ಹೋಗದ ಕೆಲಸವೆಂದು ನಮಗನ್ನಿಸುತ್ತದೆ. ಆದರೆ ಭೌತವಿಜ್ಞಾನಿಯು ಒಂದೇ ತಾರೆಯಿಂದ ಬರುತ್ತಿರುವ ಉಷ್ಣಶಕ್ತಿಯನ್ನು ಪ್ರತ್ಯೇಕವಾಗಿ, ಸಾಕಷ್ಟು ನಿಷ್ಕೃಷ್ಟವಾಗಿ, ಅಳೆಯಬಲ್ಲ ಸೋಜಿಗದ ಸೂಕ್ಷ್ಮಸಾಧನವನ್ನು ತಯಾರಿಸಿ ದ್ದಾನೆ. ಗೊತ್ತಾದ ಒಂದು ನಕ್ಷತ್ರದಿಂದ ಈ ಉಪಕರಣದ ಪ್ರತಿಯೊಂದು ಚದರಂಗುಲದ ಮೇಲೆ ಒಂದು ಸೆಕಂಡಿನಲ್ಲಿ ಎಷ್ಟು ಉಷ್ಣಶಕ್ತಿಯು ಬೀಳುತ್ತ ದೆಂಬುದನ್ನು ಅಳೆಯುತ್ತಾನೆ. ನಕ್ಷತ್ರದ ದೂರವು ತಿಳಿದಿದ್ದರೆ ಆ ದೂರವನ್ನೇ ತ್ರಿಜ್ಯವಾಗುಳ್ಳ ಗೋಳದ ಮೈಯ ವಿಸ್ತೀರ್ಣವು ಎಷ್ಟು ಚದರಂಗುಲಗಳೆಂದು ಸುಲಭವಾಗಿ ಗುಣಿಸಬಹುದು. (೪ × ೩.೧೪ × ದೂರ × ದೂರ). ಈ ಸಂಖ್ಯೆಯನ್ನು ಒಂದು ಚದರಂಗುಲದ ಮೇಲೆ ಬಿದ್ದ ಶಕ್ತಿಯಿಂದ ಗುಣಿಸಿದರೆ ನಕ್ಷತ್ರವು ಒಂದು ಸೆಕಂಡಿನಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಒಟ್ಟು ಎಷ್ಟು ಶಕ್ತಿಯನ್ನು ವಿಸರಿಸುತ್ತದೆ ಎಂಬುದು ಗೊತ್ತಾಗುತ್ತದೆ. ಇದು ಮೊದಲನೆಯ ಹೆಜ್ಜೆ.

ತಾರೆಯ ಉಷ್ಣಾಂಶವು ತಿಳಿದಿದ್ದರೆ ಆ ಉಷ್ಣಾಂಶದ ಪದಾರ್ಥದ ಪ್ರತಿ ಯೊಂದು ಚದರಂಗುಲವೂ ಒಂದು ಸೆಕಂಡಿನಲ್ಲಿ ಎಷ್ಟು ಶಕ್ತಿಯನ್ನು ವಿಸರಿಸುತ್ತ

ದೆಂಬುದನ್ನು ಖಂಡವಾದದ ವಿಸರಣ ನಿಯಮಗಳು ನಿರ್ಣಯಿಸಿವೆ. ಆದ್ದರಿಂದ ಮೇಲಿನ ಒಟ್ಟು ಶಕ್ತಿಯನ್ನು ಈ ಚದರಂಗುಲವು ವಿಸರಿಸುವ ಶಕ್ತಿಯಿಂದ ಭಾಗಿಸಿದರೆ ತಾರೆಯ ಮೈ ವಿಸ್ತೀರ್ಣವು ಇಷ್ಟು ಚದರಂಗುಲಗಳು ಅಥವಾ ಚದರಮೈಲಿಗಳೆಂದು ತಿಳಿಯುತ್ತದೆ. ಮೈಯ ವಿಸ್ತೀರ್ಣವು ತಿಳಿದರೆ ತಾರೆಯ ವ್ಯಾಸವು ತಿಳಿದಂತೆಯೇ. ತಾರೆಯ ವ್ಯಾಸವನ್ನು ಹೀಗೆ ಗುಣಿಸಲು ಒಂದೊಂದು ತಾರೆಯೂ ಕಳಿಸುವ ಉಷ್ಣಶಕ್ತಿಯನ್ನು ಕೂಡ ಅಳೆಯಬೇಕಾಗಿಲ್ಲ. ಯಾವುದಾದರೊಂದು ನಿರ್ದಿಷ್ಟತಾರೆಯಿಂದ ನಮಗೆ ತಲಪುವ ಉಷ್ಣಶಕ್ತಿಯನ್ನು ಅಳೆದರೆ ಸಾಕು. ಸಹಜಕಾಂತಿ ಮತ್ತು ಉಷ್ಣಾಂಶಗಳು ನಿರ್ಣಯವಾಗಿರುವ ಇತರ ಯಾವ ತಾರೆಯ ವ್ಯಾಸವನ್ನಾದರೂ ಆ ಒಂದು ಅಳತೆಯಿಂದ ಸರಿಸುಮಾರಾಗಿ ಅಂದಾಜು ಮಾಡಬಹುದು.

ಹೆಚ್ಚುಕಡಿಮೆ ಇಂಥ ವಿಧಾನಗಳನ್ನನುಸರಿಸಿ ಎಡ್ಡಿಂಗ್‌ಟನ್ ಮೊದಲಾದ ಕೆಲವು ಖಗೋಳಜ್ಞರು ಬೃಹದ್ಗಾತ್ರದ ತಾರೆಯಿರಬೇಕೆಂದು ಅನುಮಾನಿಸಲಾಗಿದ್ದ ಆರ್ದ್ರಾ ತಾರೆಯ ಕೋನವ್ಯಾಸವು ಸುಮಾರು ೦.೦೪ (೧/೨೫) ಕೋನ ಸೆಕಂಡುಗಳೆಂದು ಗುಣಿಸಿದರು. ಇದು ಬಹಳ ಸಣ್ಣ ಕೋನ; ಇನ್ನೂರಂಗುಲ ವ್ಯಾಸದ ದೂರದರ್ಶಿನಿಯಿಂದ ಕೂಡ ಇದನ್ನು ಅಳೆಯಲು ಅಸಾಧ್ಯ. ಪ್ರಾಯಶಃ ಒಂದು ಉದಾಹರಣೆ ಕೊಟ್ಟರೆ ಈ ಕೋನವು ಎಷ್ಟು ಸಣ್ಣದೆಂಬುದು ಮನಸ್ಸಿಗೆ ಹಿಡಿದೀತು. ಒಂದು ರೂಪಾಯಿ ನಾಣ್ಯವನ್ನು ೧೦೦ ಮೈಲಿಗಳ ದೂರದಿಂದ ನೋಡಿದರೆ ಅದರ ಕೋನವ್ಯಾಸವು ನಮಗೆ $\frac{೧}{೨೫}$ ಕೋನ ಸೆಕಂಡುಗಳಾಗಿ ಕಾಣುತ್ತದೆ. ಇದು ಪೆಡಂಭೂತ[1]ತಾರೆಗಳ ಕೋನವ್ಯಾಸ. ಇನ್ನು ಸಾಧಾರಣ ತಾರೆಗಳ ಕೋನವ್ಯಾಸಗಳ ವಿಚಾರ ಹೇಳಬೇಕಾದ್ದೇನಿದೆ?


೧೧. ತಾರಾವ್ಯಾಸದ ಪ್ರಾಯೋಗಿಕ ನಿರ್ಣಯ

ತತ್ತ್ವಮಾರ್ಗಕ್ಕೆ ಭೌತವಿಜ್ಞಾನಿಯು ಸಲ್ಲಿಸುವ ಗೌರವವು ಗಾಢವಾದದ್ದೇನೋ ನಿಜ; ತತ್ತ್ವದ ಆಸರೆಯಿಲ್ಲದೆ ಭೌತವಿಜ್ಞಾನವು ಒಂದು ಹೆಜ್ಜೆಯನ್ನೂ ಮುಂದಿಡಲಾರದೆಂಬುದೂ ನಿಜ. ಆದರೂ ತತ್ತ್ವದ ಪೂಜ್ಯಸ್ಥಾನಕ್ಕೆ ಪ್ರಾಯೋಗಿಕ ಸಮರ್ಥನೆಯಿಂದಲೇ ಭದ್ರತೆ ದೊರಕಬೇಕೆಂಬುದು ಭೌತವಿಜ್ಞಾನದ ಕಟ್ಟಳೆ. ತತ್ತ್ವ ಮತ್ತು ಪ್ರಯೋಗಗಳ ಈ ಅನ್ಯೋನ್ಯ ಅವಲಂಬನ ಸಮನ್ವಯಗಳು ಭೌತವಿಜ್ಞಾನಮಾರ್ಗದ ಪ್ರಧಾನವೈಶಿಷ್ಟ್ಯಗಳು. ಆದಕಾರಣ ಎಡ್ಡಿಂಗ್‌ಟನ್‌ನ ತಾರಾವ್ಯಾಸನಿರ್ಣಯವು ಪ್ರಶಂಸನೀಯ ಪ್ರಯತ್ನವಾದರೂ ವಿಜ್ಞಾನಿಗಳು

[1] Giant Stars.

ಅಷ್ಟಕ್ಕೆ ತೃಪ್ತರಾಗಲಿಲ್ಲ. ಈ ಪರಿಸ್ಥಿತಿಯಲ್ಲಿ ಅಮೆರಿಕದ ಪ್ರಸಿದ್ಧ ಪ್ರಾಯೋಗಿಕ ಭೌತವಿಜ್ಞಾನಿಯಾದ ಮೈಕೆಲ್ಸನನು ಬೃಹತ್ತಾರೆಗಳ ವ್ಯಾಸಗಳನ್ನು ಅಳೆಯುವ ಒಂದು ಚಮತ್ಕಾರವಾದ ಮಾರ್ಗವನ್ನು ತೋರಿಸಿಕೊಟ್ಟನು.

ಮೈಕೆಲ್ಸನನ ಸಲಹೆಯನ್ನು ವಿಲ್ಸನ್ ಶಿಖರದ ವೀಕ್ಷಣಶಾಲೆಯ ಪೀಸ್ ಎಂಬ ಖಗೋಳಜ್ಞನು ಆಚರಣೆಗೆ ತಂದನು. ಪ್ರಯೋಗವು ಬಹಳ ಜಟಿಲವಾದದ್ದು. ವೀಕ್ಷಣಶಾಲೆಯ ನೂರಂಗುಲದ ದೂರದರ್ಶಿನಿಯ ಕೊಳವಿಯ ತುದಿಯ ಮೇಲ್ಭಾಗಕ್ಕೆ ಇಪ್ಪತ್ತಡಿ ಉದ್ದದ ಒಂದು ಉಕ್ಕಿನ ತೊಲೆಯನ್ನು ಅಡ್ಡಲಾಗಿ ಬಂಧಿಸಿದರು. (ಚಿತ್ರ ೧೪.) ತೊಲೆಯ ಎರಡು ತುದಿಗಳಿಗೂ ಒಂದೊಂದು ಕನ್ನಡಿಯನ್ನು ಅಂಟಿಸಿದರು. ಈ ಕನ್ನಡಿಗಳನ್ನು ತೊಲೆಯ ಉದ್ದಕ್ಕೂ ಸುಲಭವಾಗಿ ಜರುಗುವಂತೆ



ಚಿತ್ರ ೧೪. ಕೋನವ್ಯಾಸವನ್ನಳೆಯುವ ವಿಧಾನ

ಏರ್ಪಾಡುಮಾಡಿದರು. ದೂರದರ್ಶಿನಿಯನ್ನು ನಮಗೆ ಬೇಕಾದ ನಕ್ಷತ್ರದ ಕಡೆಗೆ ತಿರುಗಿಸಿದರೆ ನಕ್ಷತ್ರದಿಂದ ಬರುವ ಬೆಳಕಿನ ಕಿರಣಗಳು ಎರಡು ಕನ್ನಡಿಗಳ ಮೇಲೂ ಬೀಳುತ್ತವೆ. ಕನ್ನಡಿಗಳಿಂದ ಪ್ರತಿಫಲಿತವಾದ ಬೆಳಕಿನ ಕಿರಣಗಳ ಸಮೂಹಗಳೆರಡೂ ಸಂಧಿಸಿ ದೂರದರ್ಶಿನಿಯ ಕೊಳವಿಯನ್ನು ಪ್ರವೇಶಿಸುವಂತೆ ಕನ್ನಡಿಗಳನ್ನು ಸರಿಯಾಗಿ ಓರೆಮಾಡುತ್ತಾರೆ. ಒಂದೇ ನಕ್ಷತ್ರದಿಂದ ಎರಡು ಬೇರೆಬೇರೆ ಪಥಗಳ ಮಾರ್ಗವಾಗಿ ಪ್ರಯಾಣಮಾಡಿ ಹೀಗೆ ಪುನಃ ದೂರದರ್ಶಿನಿಯಲ್ಲಿ ಸಂಧಿಸಿದ ಕಿರಣಗಳ ಅಲೆಗಳು ಪರಸ್ಪರ ಒಂದರ ಕಾಲಿಗೊಂದು ತೊಡರಿಕೊಳ್ಳುತ್ತವೆಂದು ಹೇಳಬಹುದು. ದೂರದರ್ಶಿನಿಯ ಒಂದು ಭಾಗದಲ್ಲಿ ಎರಡು ಅಲೆಗಳೂ ಒಟ್ಟಿಗೆ ಹೆಜ್ಜೆ ಇಡುತ್ತಿದ್ದರೆ ಸಮೀಪದ ಮತ್ತೊಂದು ಭಾಗದಲ್ಲಿ ಒಂದು ಕನ್ನಡಿಯಿಂದ ಬಂದ ಬೆಳಕಿನ ಅಲೆಗಳು ಬಲಹೆಜ್ಜೆ ಇಡುತ್ತಿರುವಾಗ ಇನ್ನೊಂದರಿಂದ ಬಂದ ಅಲೆಗಳು ಎಡಹೆಜ್ಜೆ ಇಡುತ್ತಿರುತ್ತವೆ. ಇದರ ಕಾರಣದಿಂದ ದೂರದರ್ಶಿನಿಯಲ್ಲಿ ನಕ್ಷತ್ರವನ್ನು ನೋಡುತ್ತಿರುವ ವೀಕ್ಷಕನಿಗೆ ನಕ್ಷತ್ರದ ಬಿಂಬವು ಒಂದೇ ಸಮನಾಗಿ ಬೆಳಗುವುದರ ಬದಲು ಕ್ರಮವಾಗಿ ಬೆಳಕುನೆರಳು ಬೆಳಕುನೆರಳುಗಳ ಪಟ್ಟೆ ಪಟ್ಟೆಗಳಾಗಿರುವಂತೆ ಕಾಣುತ್ತದೆ. ಉಕ್ಕಿನ ತೊಲೆಗೆ ಅಂಟಿಸಿರುವ ಕನ್ನಡಿಗಳನ್ನು ಈಗ ಜರುಗಿಸುತ್ತಾ ಬಂದರೆ, ಅವು ಒಂದು ದೂರದಲ್ಲಿದ್ದಾಗ ಪಟ್ಟೆಗಳು ಮಾಯವಾಗುತ್ತವೆ. ಈ ದೂರವನ್ನು ಅಳೆದು ಕೆಲವು ಸಣ್ಣ ಲೆಕ್ಕಾಚಾರಗಳನ್ನು ಮಾಡಿದರೆ—ಗಣಿತಜ್ಞನ ದೃಷ್ಟಿಯಿಂದ ಸಣ್ಣ ಲೆಕ್ಕಾಚಾರ!—ನಕ್ಷತ್ರದ ಕೋನವ್ಯಾಸವು ನಮಗೆ ಸಿಗುತ್ತದೆ.

ಈ ವಿಧಾನವನ್ನನುಸರಿಸಿ ತಾರೆಯ ವ್ಯಾಸವನ್ನಳೆಯುವ ಅತಿಶಯ ಸಾಹಸ ಕಾರ್ಯವನ್ನು ೧೯೨೦ ರ ಡಿಸೆಂಬರ್ ತಿಂಗಳಲ್ಲಿ ಪೀಸ್ ಸಾಧಿಸಿದನು. ಅಲ್ಲಿಯವರೆಗೆ ಎಲ್ಲ ವಿಜ್ಞಾನಿಗಳೂ ಪ್ರಾಯೋಗಿಕ ತಾರಾವ್ಯಾಸನಿರ್ಣಯವು ಅಸಾಧ್ಯದ ಕೆಲಸವೆಂದು ಏಕಕಂಠದಿಂದ ಹೇಳುತ್ತಿದ್ದರು. ಆದಕಾರಣ ಮೈಕೆಲ್ಸನ್—ಪೀಸ್‌ರ ಪ್ರಯೋಗವು ವಿಜ್ಞಾನಲೋಕವನ್ನು ಬೆರಗುಮಾಡಿದ್ದು ಆಶ್ಚರ್ಯವಲ್ಲ. ಪೀಸ್ ತನ್ನ ಪ್ರಯೋಗಕ್ಕೆ ಆರಿಸಿಕೊಂಡ ಮೊದಲನೆಯ ತಾರೆಯು ಆರ್ದ್ರಾತಾರೆ. ಅದರ ಕೋನವ್ಯಾಸವು ೦.೦೪೭ ಕೋನ ಸೆಕಂಡುಗಳೆಂದು ಆತನು ನಿರ್ಧರಿಸಿದನು. ಎಡ್ಡಿಂಗ್‌ಟನ್‌ನ ನಿರ್ಣಯಕ್ಕೂ ಇದಕ್ಕೂ ಇರುವ ೦.೦೦೭ ಸೆಕಂಡುಗಳ ವ್ಯತ್ಯಾಸ ಗಮನಾರ್ಹವಲ್ಲ. ಆದ್ದರಿಂದ ಪೀಸ್‌ನ ಪ್ರಯೋಗವು ತತ್ತ್ವವಿಧಾನದ ಕೋನ ನಿರ್ಣಯವನ್ನು ಸಮರ್ಥಿಸಿತೆಂದೇ ಹೇಳಬೇಕು.

ಆರ್ದ್ರಾತಾರೆಯ ದೂರವೂ ತಿಳಿದಿರುವುದರಿಂದ ಅದರ ವ್ಯಾಸವನ್ನೂ ನಿರ್ಧರಿಸಿದಂತೆಯೇ ಆಯಿತು. ಈ ವ್ಯಾಸವು ೨೯ ಕೋಟಿ ಮೈಲಿಗಳು. ಇದು ಸೂರ್ಯನ

ವ್ಯಾಸದ ೩೩೦ ರಷ್ಟು. ಆದ್ರ್ರಾತಾರೆಯು ಸೂರ್ಯನ ಸ್ಥಾನದಲ್ಲಿದ್ದರೆ ನಮ್ಮ ಭೂಮಿಯು ಅದರ ಶರೀರದೊಳಗೇ ಮುಳುಗಿಹೋಗಿ ತಾರೆಯ ಹೊರಮೈ ಹೆಚ್ಚು ಕಡಿಮೆ ಅಂಗಾರಕನ ವರೆಗೂ ವ್ಯಾಪಿಸುತ್ತಿತ್ತು! ಇಂಥ ತಾರೆಗಳಿಗೆ ಪೆಡಂಭೂತ ಗಳೆಂದು ಹೆಸರಿಟ್ಟಿರುವುದು ಅನ್ವರ್ಥವೇ ಅಲ್ಲವೇ? ಪೀಸ್ ಹೀಗೆಯೇ ಇತರ ಪೆಡಂಭೂತ ತಾರೆಗಳ ವ್ಯಾಸಗಳನ್ನೂ ಅಳೆದಿದ್ದಾನೆ. ಅವುಗಳಲ್ಲಿ ಬ್ರಹ್ಮಹೃದಯ, ಸ್ವಾತೀ, ರೋಹಿಣೀ ಮತ್ತು ಪೂರ್ವಾಭಾದ್ರ (ನಕುಲ ದ್ವಿತೀಯ)ಗಳ ವ್ಯಾಸಗಳು ಕ್ರಮವಾಗಿ ಸೂರ್ಯನ ವ್ಯಾಸದ ೧೬, ೨೨, ೩೫ ಮತ್ತು ೧೧೩ ರಷ್ಟು, ಜ್ಯೇಷ್ಠಾ ಮತ್ತು ಭೀಮಪ್ರಥಮತಾರೆಗಳ ವ್ಯಾಸಗಳು ಸೂರ್ಯನ ವ್ಯಾಸದ ೩೩೦ ಮತ್ತು ೮೦೦ ರಷ್ಟೆಂದೂ ಕಂಡುಬಂದಿದೆ. ಈ ವಿಧಾನದಿಂದ ನಿರ್ಣಯವಾಗಿರುವ ತಾರಾ ವ್ಯಾಸಗಳಲ್ಲೆಲ್ಲಾ ಇವೇ ದೊಡ್ಡವು.

ಮೈಕೆಲ್ಸನ್—ಪೀಸ್ ವಿಧಾನವು ನೇರವಾಗಿ ಕೋನವ್ಯಾಸವನ್ನು ಅಳೆಯುತ್ತದೆ, ವ್ಯಾಸವನ್ನೇ ಅಲ್ಲ ಎಂಬುದನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ಕೋನ ವ್ಯಾಸವು ಚಿಕ್ಕದಾದಂತೆಲ್ಲ ಉಕ್ಕಿನ ತೊಲೆಯ ಉದ್ದಕ್ಕೂ ಜರುಗುವಂತೆ ಏರ್ಪಡಿ ಸಿರುವ ಕನ್ನಡಿಗಳ ದೂರ ದೊಡ್ಡದಾಗಬೇಕಾಗುತ್ತದೆ. ಆದ್ದರಿಂದ ಈಚೆಗೆ ೫೦ ಅಡಿ ಉದ್ದದ ಮತ್ತೊಂದು ಉಕ್ಕಿನ ತೊಲೆಯನ್ನು ವಿಲ್ಸನ್ ಶಿಖರದ ಅವೇಕ್ಷಣಶಾಲೆ ಯಲ್ಲಿ ಉಪಯೋಗಿಸುತ್ತಿದ್ದಾರೆ. ಇದರ ಸಹಾಯದಿಂದ $\frac{೧}{೧೨೫}$ ಕೋನ ಸೆಕಂಡಿನಷ್ಟು ಸಣ್ಣ ಕೋನಗಳನ್ನು ಅಳೆಯಬಹುದು. ಆದರೂ ಸಾಮಾನ್ಯ ತಾರೆಗಳ ಕೋನವ್ಯಾಸ ಗಳು ಈ ಅಲ್ಪಕ್ಕಿಂತ ಅಲ್ಪತರಗಳಾದ್ದರಿಂದ ಇಂಥ ಪರಮಸೂಕ್ಷ್ಮಪ್ರಯೋಗ ದಿಂದ ಕೂಡ ನಮಗೆ ಹತ್ತಿರದಲ್ಲಿರುವ ಬೃಹತ್ತಾರೆಗಳ ಗಾತ್ರಗಳನ್ನು ಮಾತ್ರ ನಿರ್ಣಯಿಸುವುದು ಸಾಧ್ಯ. ಇದುವರೆಗೆ ಹನ್ನೆರಡೇ ನಕ್ಷತ್ರಗಳ ವ್ಯಾಸಗಳನ್ನು ಹೀಗೆ ಅಳೆದಾಗಿದೆ. ಇವುಗಳಲ್ಲಿ ಆದ್ರ್ರಾತಾರೆಯ ವ್ಯಾಸವು ಸೂರ್ಯನ ವ್ಯಾಸದ ೩೩೦ ರಷ್ಟರಿಂದ ೫೪೦ರಷ್ಟರ ವರೆಗೆ ಆವರ್ತವಾಗಿ ಇಳಿದು ಏರುತ್ತದೆಂದು ತಿಳಿಯಬಂದಿದೆ.

ಈ ವಿಧಾನವನ್ನು ಬಿಟ್ಟರೆ ಹಿಂದೆ ತಿಳಿಸಿರುವ ಗ್ರಹಣಯುಗ್ಮಗಳ ಕಾಂತಿ-ದೃಷ್ಟಿಪಥವೇಗಗಳ ಪರಿಶೀಲನೆಯಿಂದ ಯುಗ್ಮತಾರೆಗಳ ವ್ಯಾಸಗಳನ್ನು ನಿರ್ಣಯಿಸ ಬಹುದು. ಯೌಧಿಷ್ಠಿರ ಚಂಚಲತಾರೆಗಳ ಕಾಂತಿ-ದೃಷ್ಟಿಪಥವೇಗಗಳ ಪರಿಶೀಲನೆ ಯಿಂದಲೂ ಆ ತಾರೆಗಳ ವ್ಯಾಸಗಳನ್ನು ನಿರ್ಧರಿಸಬಹುದು. ಇಂಥ ಮಾರ್ಗಗಳಿಂದ ವಿಜಯಸಾರಥಿ ರಾಶಿಯ ಪಂಚಮತಾರೆಯ ವ್ಯಾಸವು ಸೂರ್ಯನ ವ್ಯಾಸದ ೨,೮೦೦ ರಷ್ಟಿರಬೇಕೆಂದು ಗುಣಿಸಿದಾರೆ. ಈ ತಾರೆಯು ಗ್ರಹಣಚಂಚಲತಾರೆ. ಇದರ ಆವರ್ತಕಾಲ ೯,೯೦೦ ದಿನಗಳು. ಇದಕ್ಕಿಂತ ದೀರ್ಘ ಆವರ್ತಕಾಲದ ಚಂಚಲತಾರೆ

ಇದುವರೆಗೆ ಪತ್ತೆಯಾಗಿಲ್ಲ, ಇದಕ್ಕಿಂತ ಗಾತ್ರದಲ್ಲಿ ಹಿರಿದಾದ ತಾರೆಯೂ ಸಿಕ್ಕಿಲ್ಲ. ಅಂತೂ ಈ ಮೂರು ಮಾರ್ಗಗಳೂ ಕೆಲವು ವಿಶೇಷವರ್ಗದ ತಾರೆಗಳಿಗೆ ಮಾತ್ರ ಅನ್ವಯಿಸುತ್ತವೆ. ಆದಕಾರಣ ಅನೇಕ ತಾರೆಗಳ ವ್ಯಾಸಗಳನ್ನು ಇನ್ನೂ ತಾತ್ತ್ವಿಕ ವಿಧಾನಗಳಿಂದಲೇ ಗುಣಿಸಬೇಕಾಗಿದೆ.

೧೨. ತಾರೆಗಳ ಯಥಾರ್ಥ ಚಲನೆ[1]

ವರ್ಣಪಟಲದ ರೇಖೆಗಳ ಪಲ್ಲಟದಿಂದ ತಾರೆಗಳ ದೃಷ್ಟಿಪಥವೇಗಗಳನ್ನು ಮಾತ್ರ ನಿರ್ಣಯಿಸಬಹುದು, ದೃಷ್ಟಿಪಥಕ್ಕೆ ಅಡ್ಡವಾಗಿರಬಹುದಾದ ವೇಗವನ್ನು ನಿರ್ಣಯಿಸ ಲಾಗುವುದಿಲ್ಲ. ಈ ಅಡ್ಡವೇಗಕ್ಕೆ ಯಥಾರ್ಥವೇಗವೆಂದು ಹೆಸರು. ದೃಷ್ಟಿಪಥವೇಗವು ಎಷ್ಟಿದ್ದರೂ ನಕ್ಷತ್ರಮಂಡಲಕ್ಕೆ ಸಾಪೇಕ್ಷವಾಗಿ ತಾರೆಯ ಸ್ಥಾನದ ವ್ಯತ್ಯಾಸ ವಾಗುವುದಿಲ್ಲ, ಯಥಾರ್ಥವೇಗದಿಂದಾದರೆ ಸ್ಥಾನ ವ್ಯತ್ಯಾಸವಾಗುತ್ತದೆ. ಹಿಂದಿನ ಕಾಲದ ಖಗೋಳಜ್ಞರು ನಿರ್ಣಯಿಸಿರುವ ತಾರೆಗಳ ಸ್ಥಾನಗಳನ್ನು (ಅಕ್ಷಾಂಶ, ರೇಖಾಂಶಗಳು ಅಥವಾ ತಾರಾನಕ್ಷೆಗಳನ್ನು) ಇಂದಿನ ಸ್ಥಾನಗಳೊಂದಿಗೆ ಹೋಲಿಸಿ ದರೆ ಯಥಾರ್ಥವೇಗವನ್ನು ನಿರ್ಣಯಿಸಬಹುದು. ಆದರೆ ತಾರೆಗಳ ಯಥಾರ್ಥವೇಗ ಗಳು ಅಧಿಕವಾಗಿದ್ದರೂ, ಅವುಗಳು ಬಹಳ ದೂರದಲ್ಲಿರುವುದರಿಂದ ಕೆಲವು ಶತಮಾನ ಗಳ ಅಂತರದಲ್ಲಿಯೂ ಸಹ ತಾರೆಗಳ ಸಾಪೇಕ್ಷಸ್ಥಾನವ್ಯತ್ಯಾಸಗಳನ್ನು ಸೂಕ್ಷ್ಮ ಅನ್ವೇಷಣೆಗಳಿಂದ ಮಾತ್ರವೇ ಪತ್ತೆಮಾಡುವುದು ಸಾಧ್ಯ. ಅಂತೂ ಈ ವಿಧಾನದಿಂದ ಕೆಲವು ನಕ್ಷತ್ರಗಳ ಯಥಾರ್ಥವೇಗಗಳನ್ನು ನಿರ್ಣಯಿಸಿದ್ದಾರೆ.

ಪೂರ್ವಕಾಲದ ಖಗೋಳಜ್ಞರಿಗೆ ದೂರದರ್ಶಿನಿಯ ಸಹಾಯವಿದ್ದಿರಲಿಲ್ಲವಾದ ಕಾರಣ ಕಾಂತಿಯುತ ತಾರೆಗಳ ಯಥಾರ್ಥವೇಗಗಳನ್ನು ಮಾತ್ರ ಹೀಗೆ ಗೊತ್ತು ಮಾಡಬಹುದು. ಆಧುನಿಕ ಖಗೋಳಜ್ಞನು ಬೇರೊಂದು ಮಾರ್ಗವನ್ನು ಉಪ ಯೋಗಿಸುತ್ತಾನೆ. ಬಿಂಬಗ್ರಾಹಿಯ ಫಲಕಗಳ ಮೇಲೆ ನಕ್ಷತ್ರಮಂಡಲದ ಬೇರೆ ಬೇರೆ ಭಾಗಗಳ ಚಿತ್ರಗಳನ್ನು ತೆಗೆದು ಫಲಕಗಳನ್ನು ಸ್ಫುಟಗೊಳಿಸಿ[2] ಅವನ್ನು ಒಂದು ಶೀತಮಂದಿರದಲ್ಲಿ ಭದ್ರವಾಗಿ ಶೇಖರಿಸಿಡುತ್ತಾನೆ. ಈ ಶೀತಮಂದಿರದ ಉಷ್ಣಾಂಶವು ಯಾವಾಗಲೂ ಏಕರೀತಿಯಾಗಿರುವಂತೆ ಏರ್ಪಡಿಸುತ್ತಾನೆ. ಅದೇ ತರಹದ ಹೊಸ ಫಲಕಗಳನ್ನು ಬೆಳಕು ಅವಕ್ಕೆ ಸ್ವಲ್ಪವೂ ಸೋಕದಂತೆ ಮಾಡಿ ಅದೇ ಶೀತಮಂದಿರದಲ್ಲಿಯೇ ಇಟ್ಟಿರುತ್ತಾನೆ. ಹತ್ತು ಅಥವಾ ಇಪ್ಪತ್ತು ವರ್ಷಗಳ ವರೆಗೂ ಈ ಫಲಕಗಳನ್ನೂ ಸ್ವಲ್ಪವೂ ಅಲುಗಾಡಿಸದಂತಿಟ್ಟಿದ್ದು ಅನಂತರ, ಮೊದಲು ಉಪ ಯೋಗಿಸಿದ್ದ ದೂರದರ್ಶಿನಿ, ಬಿಂಬಗ್ರಾಹಿ ಸಾಧನಗಳಿಂದಲೇ ನಕ್ಷತ್ರಮಂಡಲದ

[1] Proper Motion. [2] Develop.

ಅದೇ ಭಾಗಗಳ ಚಿತ್ರಗಳನ್ನು ಸೌರವರ್ಷದ ಅದೇದಿನ ಅದೇಕಾಲದಲ್ಲಿ ಶೀತಮಂದಿರದಲ್ಲಿ ಶೇಖರಿಸಿಟ್ಟಿದ್ದ ಹೊಸ ಫಲಕಗಳ ಮೇಲೆ ಹಿಡಿಯುತ್ತಾನೆ. ಈಗ ಎರಡು ಜೊತೆ ಫಲಕಗಳನ್ನೂ ಒಟ್ಟಿಗೆ ಸ್ಫುಟಗೊಳಿಸುತ್ತಾನೆ. ಈ ಚಿತ್ರಗಳನ್ನು ಒಂದರ ಮೇಲೊಂದಿಟ್ಟು ಹೋಲಿಸಿ ಪರೀಕ್ಷಿಸಿದರೆ ಪ್ರತಿಯೊಂದು ಫಲಕದ ತಾರಾವ್ಯೂಹಕ್ಕೆ ಸಾಪೇಕ್ಷವಾಗಿ ಆ ಫಲಕದ ಒಂದೊಂದು ತಾರೆಯ ಯಥಾರ್ಥ ಚಲನೆಯು ಎಷ್ಟೆಂದು ತಿಳಿಯಬರುತ್ತದೆ.

ತಾರೆಗಳ ಯಥಾರ್ಥ ಚಲನೆಯು ಅತ್ಯಲ್ಪ ಪರಿಮಾಣದ್ದೆಂದು ಆಗಲೇ ತಿಳಿಸಿದೆ. ಅನೇಕ ತಾರೆಗಳ ಯಥಾರ್ಥ ಚಲನೆಯು ವರ್ಷಕ್ಕೆ ಒಂದು ಕೋನ ಸೆಕಂಡಿಗಿಂತ ಕಡಮೆ. ವರ್ಷಕ್ಕೆ ೧೦ ಕೋನ ಸೆಕಂಡುಗಳಿಗಿಂತ ಹೆಚ್ಚಾದ ಚಲನೆಯ ತಾರೆ ಪತ್ತೆಯಾಗಿರುವುದು ಒಂದೇ ಒಂದು. ಇದನ್ನು ೧೯೧೬ ರಲ್ಲಿ ಬಾರ್ನಾರ್ಡ್‌ಸು ಕಂಡುಹಿಡಿದದ್ದರಿಂದ ಈ ತಾರೆಗೆ "ಬಾರ್ನಾರ್ಡನ ಪಲಾಯನ ತಾರೆ"[1] ಎಂದು ಹೆಸರಿಟ್ಟಿದ್ದಾರೆ. ಇದರ ಯಥಾರ್ಥಚಲನೆಯು ವರ್ಷವೊಂದಕ್ಕೆ ೧೦⅓ ಕೋನ ಸೆಕಂಡುಗಳು. ಅಲ್ಲಿಗೆ ಅದರ ಅಡ್ಡವೇಗವು ಸೆಕಂಡೊಂದಕ್ಕೆ ೫೫ ಮೈಲಿಗಳಾಗುತ್ತದೆ. ಬಹು ದೂರದಲ್ಲಿರುವ ಎಷ್ಟೋ ತಾರೆಗಳು ಯಥಾರ್ಥಚಲನೆಯನ್ನು ತೋರಿಸಿಯೇ ಇಲ್ಲ. ೩೦ ವರ್ಷಗಳ ಅಂತರದಲ್ಲಿ ತೆಗೆದ ಚಿತ್ರಫಲಕಗಳಲ್ಲಿ ಸಿಕ್ಕಿರಿದಿದ್ದ ಎರಡೂವರೆ ಕೋಟಿ ನಕ್ಷತ್ರಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷೆಮಾಡಿದ್ದರ ಫಲವಾಗಿ ಎಂಬತ್ತು ಸಾವಿರ ಮಾತ್ರ ಯಥಾರ್ಥಚಲನೆಯಿದ್ದ ಚಿಹ್ನೆ ಕೊಟ್ಟವು. ಸಾಮಾನ್ಯವಾಗಿ ಕಾಂತಿ ತಾರೆಗಳು ಕ್ಷೀಣಕಾಂತಿ ತಾರೆಗಳಿಗಿಂತ ಹತ್ತಿರವಿರುವುದರಿಂದ ಅವುಗಳ ಯಥಾರ್ಥಚಲನೆಗಳು ಬೇಗ ವ್ಯಕ್ತವಾಗುತ್ತವೆ. ಚಲನೆಗಳನ್ನು ತೋರದಿರುವ ತಾರೆಗಳು ಖಗೋಳದಲ್ಲಿ ಸ್ಥಿರವಾಗಿವೆಯೆಂದು ತಿಳಿಯಬಾರದು. ಅವುಗಳು ಬಹಳ ದೂರದಲ್ಲಿರುವುದರಿಂದ ಅವುಗಳ ಚಲನೆಯು ವ್ಯಕ್ತವಾಗಲು ಇದುವರೆಗೆ ಸಾಧ್ಯವಾಗಿರುವ ವೀಕ್ಷಣಕಾಲವು ಸಾಲದು. ಡಾಪ್ಲರ್ ಪರಿಣಾಮದಿಂದ ಫಲಿಸುವ ದೃಷ್ಟಿಪಥವೇಗದ ನಿರ್ಣಯಕ್ಕೆ ದೂರವು ಹೀಗೆ ಪ್ರತಿಬಂಧಕವಾಗುವುದಿಲ್ಲ. ದೃಷ್ಟಿಪಥವೇಗ, ಯಥಾರ್ಥವೇಗಗಳೆರಡೂ ತಿಳಿದಿದ್ದರೆ ಆಕಾಶದಲ್ಲಿ ಆ ತಾರೆಯ ಸಹಜವೇಗ[2]ವೆಷ್ಟೆಂದು ಗುಣಿಸುವುದು ಸುಲಭ. ದೃಷ್ಟಿಪಥವೇಗದ ವರ್ಗಕ್ಕೆ ಯಥಾರ್ಥವೇಗದ ವರ್ಗವನ್ನು ಸೇರಿಸಿದರೆ ಬರುವ ಮೊತ್ತವು ಸಹಜವೇಗದ ವರ್ಗ.

[1] Barnard's Runaway Star. [2] True Velocity.

೧೩. ವರ್ಣಪಟಲಗ್ರಾಹಿಯು ಖಗೋಳಜ್ಞನ ಕಾಮಧೇನು

ಭೂಮಿಯು ತನ್ನ ಅಕ್ಷದ ಸುತ್ತಲೂ ೨೩ ಘಂಟೆ ೫೬ ನಿಮಿಷ ೪ ಸೆಕಂಡುಗಳಿಗೊಂದುಸಲ ತಿರುಗುತ್ತದೆಂಬುದು ಎಲ್ಲರಿಗೂ ತಿಳಿದಿರಬೇಕಾದ ಸಂಗತಿ. ಸೌರವ್ಯೂಹದ ಇತರ ಗ್ರಹಗಳಿಗೂ ಹೀಗೆಯೇ ಭ್ರಮಣವುಂಟು. ಭ್ರಮಣಕಾಲವೇನೋ ಗ್ರಹಗ್ರಹಕ್ಕೂ ಬೇರೆಬೇರೆ. ಸೂರ್ಯನೂ ತನ್ನ ಅಕ್ಷದ ಸುತ್ತ ೨೫⅓ ದಿನಗಳಿಗೊಮ್ಮೆ ಸುತ್ತುತ್ತಾನೆ. ಅಂದಮೇಲೆ ನಕ್ಷತ್ರಗಳಿಗೂ ಭ್ರಮಣವಿರಬೇಕೆಂದು ನಾವು ಅನುಮಾನಿಸುವುದು ಸಹಜ. ಆದರೆ ಈ ಅನುಮಾನಕ್ಕೆ ಆಧಾರವನ್ನೊದಗಿಸುವುದು ಹೇಗೆ? ಸೂರ್ಯನ ಭ್ರಮಣಕಾಲವನ್ನು ಹಲವು ವಿಧಗಳಿಂದ ನಿರ್ಣಯಿಸಬಹುದು. ಸೂರ್ಯನು ಸುತ್ತುತ್ತಿದ್ದರೆ ಅವನ ಒಂದು ಅಂಚು ನಮಗೆ ಅಭಿಮುಖವಾಗಿ ಬರುತ್ತಿದ್ದರೆ ಅದೇ ಕಾಲದಲ್ಲಿ ಇನ್ನೊಂದು ಅಂಚು ನಮಗೆ ವಿಮುಖವಾಗಿ ಓಡಿಹೋಗುತ್ತಿರುತ್ತದೆ. ಸೂರ್ಯನ ಈ ಎರಡು ಅಂಚುಗಳ ವರ್ಣಪಟಲಗಳನ್ನು ಪ್ರತ್ಯೇಕವಾಗಿ ನಾವು ಹಿಡಿದರೆ ಡಾಪ್ಲರ್ ಪರಿಣಾಮದಿಂದ ಒಂದು ವರ್ಣಪಟಲದ ರೇಖೆಗಳು ರಕ್ತಪಲ್ಲಟವನ್ನೂ, ಇನ್ನೊಂದರದವು ನೀಲಿಪಲ್ಲಟವನ್ನೂ ತೋರಿಸುತ್ತವೆ. ಇದರಿಂದ ಅಂಚುಗಳ ಅಭಿಮುಖ ವಿಮುಖ ವೇಗಗಳನ್ನು ಗುಣಿಸಬಹುದು. ಸೂರ್ಯನ ವ್ಯಾಸವು ತಿಳಿದಿರುವುದರಿಂದ ನಾವು ಭ್ರಮಣಕಾಲವನ್ನೂ ನಿರ್ಣಯಿಸಬಹುದು. ಹೀಗೆ ತೀರ್ಮಾನಿಸಿದ ಭ್ರಮಣಕಾಲವು ನೇರವಾದ ಇತರ ಮಾರ್ಗಗಳಿಂದ ನಿರ್ಧರಿಸಿದ ಭ್ರಮಣಕಾಲದಷ್ಟೇ ಆಗಿದೆ.

ಈ ಮಾರ್ಗವನ್ನು ನಕ್ಷತ್ರಗಳಿಗೆ ಅನ್ವಯಿಸುವುದು ಸಾಧ್ಯವಾಗುವಂತೆ ಕಾಣುವುದಿಲ್ಲ. ಏಕೆಂದರೆ ಪ್ರಬಲ ದೂರದರ್ಶಿನಿಗೂ ಬಿಂದುವಾಗಿ ಕಾಣುವ ನಕ್ಷತ್ರಕ್ಕೆ ಅಂಚುಗಳನ್ನೆಲ್ಲಿಂದ ತರುವುದು? ಆದರೆ ಖಗೋಳಜ್ಞರು ಇಷ್ಟಕ್ಕೇ ಸೋಲಲಿಲ್ಲ. ಒಂದುವೇಳೆ ನಕ್ಷತ್ರವು ಬುಗುರಿಯಂತೆ ತಿರುಗುತ್ತಿದ್ದರೆ ಅದರ ಒಂದು ಅಂಚು—ನಮಗೆ ಕಾಣಲಿ ಕಾಣದಿರಲಿ—ನಮ್ಮ ಕಡೆಗೆ ಧಾವಿಸುತ್ತಿರಬೇಕು, ಇನ್ನೊಂದು ನಮ್ಮಿಂದ ಆಚೆಗೆ ಧಾವಿಸುತ್ತಿರಬೇಕು. ಆದ್ದರಿಂದ ಅದರ ಒಂದು ಅಂಚಿನಿಂದ ಬರುವ ಬೆಳಕಿನ ವರ್ಣಪಟಲದಲ್ಲಿ ರೇಖೆಗಳ ರಕ್ತಪಲ್ಲಟವಾಗಬೇಕು, ಇನ್ನೊಂದರಿಂದ ಬರುವುದರ ವರ್ಣಪಲ್ಲಟದಲ್ಲಿ ರೇಖೆಗಳ ನೀಲಿಪಲ್ಲಟವಾಗಬೇಕು. ಆದರೆ ಇವೆರಡೂ ವರ್ಣಪಟಲಗಳು ಪ್ರತ್ಯೇಕವಾಗಿರದೆ ಮಿಳಿತವಾಗಿರುವುದರಿಂದ ರೇಖೆಗಳು ಸೂಕ್ಷ್ಮರೇಖೆಗಳಂತಿರುವುದರ ಬದಲು ಅಗಲವಾಗಿ ಕಾಣಬೇಕು. ರೇಖೆಗಳ ಈ ಅಗಲವನ್ನು ಅಳೆದು ಭ್ರಮಣವೇಗವನ್ನು ಗುಣಿಸಬಹುದು. ಈ ವಿಧಾನವು ಇಲ್ಲಿ ಬರೆದಿರುವಷ್ಟು ಸುಲಭವಲ್ಲ. ಏಕೆಂದರೆ ನಕ್ಷತ್ರದ ವಾತಾವರಣದ

ಒತ್ತಡದಿಂದಲೂ ರೇಖೆಗಳು ಅಗಲವಾಗುತ್ತವೆ, ವಾತಾವರಣದ ಪರಮಾಣುಗಳ ಅವ್ಯವಸ್ಥಿತ ವೇಗಗಳಿಂದಲೂ ಅಗಲವಾಗುತ್ತವೆ, ಸಾಲದ್ದಕ್ಕೆ ವರ್ಣಪಟಲಗ್ರಾಹಿಯ ದೋಷದಿಂದಲೂ ರೇಖೆಗಳು ಅಗಲವಾಗುತ್ತವೆ. ಇಷ್ಟೊಂದು ಕಾರಣಗಳಿರುವಾಗ ಭ್ರಮಣದಿಂದ ಉಂಟಾದ ಅಗಲವನ್ನು ಪ್ರತ್ಯೇಕಿಸಿ ನಕ್ಷತ್ರದ ಭ್ರಮಣವೇಗವನ್ನು ನಿರ್ಣಯಿಸುವ ಕೆಲಸಕ್ಕೆ ಕೈಹಾಕುವ ವಿಜ್ಞಾನಿಯು ಸಾಹಸಿಯೂ ಆಗಿರಬೇಕು, ದಕ್ಷನೂ ಆಗಿರಬೇಕು. B ಮತ್ತು A ವರ್ಣವರ್ಗಗಳ ಕೆಲವು ದೊಡ್ಡ ತಾರೆಗಳ ಭ್ರಮಣವನ್ನು ಈ ಜಟಿಲಮಾರ್ಗವನ್ನನುಸರಿಸಿ ಗುಣಿಸಿದ್ದಾರೆ. ಈ ತಾರೆಗಳ ಅಂಚಿನ ವೇಗವು ಸೆಕಂಡೊಂದಕ್ಕೆ ೧೦೦ ಮೈಲಿಗಳಿಗಿಂತ ಹೆಚ್ಚಾಗಿರುವಂತೆ ಕಂಡು ಬಂದಿದೆ. ಈ ವೇಗಕ್ಕೆ ಹೋಲಿಸಿದರೆ ಸೂರ್ಯನ ಭ್ರಮಣವೇಗವು ಅತಿ ಮಂದ—ಸೆಕೆಂಡೊಂದಕ್ಕೆ ಒಂದೂಕಾಲು ಮೈಲಿ. ನಮ್ಮ ಭೂಮಿಯ ಭ್ರಮಣವೇಗವು ಘಂಟೆಗೆ ಸುಮಾರು ಸಾವಿರ ಮೈಲಿ ಅಥವಾ ಸೆಕಂಡೊಂದಕ್ಕೆ ಕೇವಲ ಕಾಲುಮೈಲಿ.

ನಕ್ಷತ್ರದ ಭ್ರಮಣದ ಅಕ್ಷವು ನಮ್ಮ ನೋಟದ ದಿಕ್ಕಿನಲ್ಲಿಯೇ ಇದ್ದರೆ ಅದರ ಅಂಚಿನ ವೇಗವು ನಮ್ಮ ದೃಷ್ಟಿಪಥಕ್ಕೆ ಸಮಕೋನದಲ್ಲಿರುತ್ತದೆ. ಆಗ ಡಾಪ್ಲರ್ ಪರಿಣಾಮವು ಪ್ರಯೋಜನಕಾರಿಯಲ್ಲವಾದ್ದರಿಂದ ರೇಖೆಗಳು ಅಗಲವಾಗದೆ ಸೂಕ್ಷ್ಮವಾಗಿಯೇ ಕಾಣುತ್ತವೆ. ಇಂಥ ತಾರೆಗಳೂ ವೀಕ್ಷಣಕ್ಕೆ ಸಿಕ್ಕಿವೆ. ಇವುಗಳ ಭ್ರಮಣವನ್ನೂ ವರ್ಣಪಟಲದ ಪರೀಕ್ಷೆಯಿಂದ ಗೊತ್ತು ಹಚ್ಚಬಹುದು. ಅದು ಹೀಗೆ. ಆಕಾಶಕಾಯವು ಸುತ್ತುತ್ತಿದ್ದರೆ ಅದರಿಂದ ಕಾಂತ ಕ್ಷೇತ್ರವು[1] ಹುಟ್ಟುತ್ತದೆ. ಭೂಮಿ, ಸೂರ್ಯರ ಭ್ರಮಣದಿಂದಲೇ ಭೂಮಿಯ ಮತ್ತು ಸೂರ್ಯನ ಕಾಂತಕ್ಷೇತ್ರಗಳು ಉತ್ಪತ್ತಿಯಾಗಿವೆಯೆಂದು ನಂಬಲಾಗಿದೆ. ಬೆಳಕು ಪ್ರಬಲಕಾಂತಕ್ಷೇತ್ರವನ್ನು ತೂರಿಕೊಂಡು ಬಂದರೆ ಅದರ ವರ್ಣಪಟಲದ ರೇಖೆಗಳು ಒಂದೊಂದು ಸಲ ಎರಡಾಗಿ ಒಂದೊಂದುಸಲ ಮೂರಾಗಿ ಒಡೆಯುತ್ತವೆ. ಹೀಗೆ ಒಡೆದ ರೇಖೆಗಳಿಗಿರುವ ಅಂತರವು ಕಾಂತಕ್ಷೇತ್ರದ ಪರಿಮಾಣವನ್ನವಲಂಬಿಸುತ್ತದೆ. ಇದಕ್ಕೆ ಸ್ಲೀಮಾನ್ ಪರಿಣಾಮ[2]ವೆಂದು ಹೆಸರು. ಈಗ ವರ್ಣಪಟಲದಲ್ಲಿ ಸ್ಲೀಮಾನ್ ಪರಿಣಾಮದಿಂದುಂಟಾದ ಎರಡು ರೇಖೆಗಳ ಅಂತರವನ್ನು ಅಳೆದರೆ ಆ ನಕ್ಷತ್ರದ ಕಾಂತಕ್ಷೇತ್ರವನ್ನು ಗುಣಿಸಬಹುದು. ಕಾಂತಕ್ಷೇತ್ರದಿಂದ ನಕ್ಷತ್ರದ ಭ್ರಮಣವೇಗವು ಸಿದ್ಧಿಸುತ್ತದೆ. ಸೂರ್ಯನ ಕಾಂತಕ್ಷೇತ್ರಕ್ಕಿಂತ ೩೦ ರಷ್ಟು ಅಧಿಕ ಕಾಂತಕ್ಷೇತ್ರಗಳಿರುವ ಒಂದೆರಡು ನಕ್ಷತ್ರಗಳು ಸಿಕ್ಕಿವೆ.

ಸೂರ್ಯನಿಗಿರುವಂತೆ ಇತರ ನಕ್ಷತ್ರಗಳಿಗೂ ಗ್ರಹಪರಿವಾರಗಳಿವೆಯೇ ಎಂಬ

---

[1] Magnetic Field. [2] Zeeman Effect.

ಪ್ರಶ್ನೆ ಎಲ್ಲರ ಕುತೂಹಲವನ್ನೂ ಕೆರಳಿಸುವ ಪ್ರಶ್ನೆ. ನಕ್ಷತ್ರಗಳಿಗೆ ಗ್ರಹಗಳಿದ್ದರೂ ಗ್ರಹಗಳು ತೇಜಃಕಾಯಗಳಲ್ಲವಾದ್ದರಿಂದ ನಮಗೆ ಅವು ಕಾಣುವಂತಿಲ್ಲ. ಆದ್ದರಿಂದ ಈ ಪ್ರಶ್ನೆಗೆ ಪ್ರಯೋಗಪ್ರಮಾಣದ ಬೆಂಬಲವಿರುವ ಉತ್ತರ ದೊರುಕುವುದು ಅಸಾಧ್ಯವಾಗಿ ಕಾಣುತ್ತದೆ. ಕಳೆದ ಆರೇಳು ವರ್ಷಗಳಿಗೆ ಮುಂಚೆ ಪರಿಸ್ಥಿತಿ ಹಾಗೆಯೇ ಇತ್ತು. ಅಷ್ಟು ಹೊತ್ತಿಗೆ ರಾಜಹಂಸ ರಾಶಿಯಲ್ಲಿರುವ ದೃಷ್ಟಿಯುಗ್ಮವೊಂದರ (ರಾಜಹಂಸದ ೬೧ ನೆಯ ತಾರೆ) ಪಥಗಳ ವೀಕ್ಷಣೆಯಲ್ಲಿ ತೊಡಗಿದ್ದ ಸ್ಟ್ರಾಂಡ್ ಎಂಬಾತನು ಆ ಪಥಗಳು ಗುರುತ್ವಾಕರ್ಷಣ ನಿಯಮಗಳಿಂದ ಗುಣಿಸಿದ ಪಥಗಳಿಗಿಂತ ಬೇರೆಯಾಗಿದ್ದದ್ದನ್ನು ಮನಗಂಡನು. ಹೀಗೆ ಪಥವ್ಯತ್ಯಸ್ತವಾಗಿರುವುದಕ್ಕೆ ಮೂರನೆಯ ಆಕಾಶಕಾಯವೊಂದು ಅವುಗಳ ಸಮೀಪದಲ್ಲಿರುವುದೇ ಕಾರಣವಿರಬೇಕೆಂದು ಆತನು ತಿರ್ಮಾನಿಸಿದನು. ಆಡಮ್ಸ್ ಮತ್ತು ಲೆ ವೆರಿಯರ್ ರವರು ನೆಪ್ಚೂನ್ ಗ್ರಹದ ಪಥವನ್ನು ನಿರ್ಣಯಿಸಿದಂತೆ ಸ್ಟ್ರಾಂಡನು ಈ ದೃಷ್ಟಿಯುಗ್ಮದ ತಾರೆಯೊಂದನ್ನು ಪ್ರದಕ್ಷಿಣೆ ಮಾಡುತ್ತಿರುವ ಗ್ರಹದ ಪಥವನ್ನು ನಿರ್ಣಯಿಸಿದನು. ಈ ಅದೃಶ್ಯಗ್ರಹದ ಭಾರವು ಗುರುಗ್ರಹದ ಹದಿನಾರರಷ್ಟೆಂದು ಅವನ ಎಣಿಕೆ. ಇದಾದ ಸ್ವಲ್ಪ ಕಾಲದಲ್ಲಿಯೇ ಮತ್ತಿಬ್ಬರು ಖಗೋಳಜ್ಞರು ಉರಗಧರನ ೭೦ ನೆಯದಾದ ಮತ್ತೊಂದು ಯುಗ್ಮದ ಗ್ರಹವನ್ನೂ ಪತ್ತೆ ಹಚ್ಚಿದರು. ಪ್ರಾಯಶಃ ಆರೇಳು ನಕ್ಷತ್ರಗಳಲ್ಲೊಂದಕ್ಕಾದರೂ ಗ್ರಹಪರಿವಾರಗಳಿರಬೇಕೆಂದು ಈಗಿನ ಅನೇಕ ಖಗೋಳಜ್ಞರ ನಂಬಿಕೆ.

ಈ ಅಧ್ಯಾಯದ ಮತ್ತು ಇದರ ಹಿಂದಿನ ಅಧ್ಯಾಯಗಳ ವ್ಯಾಸಂಗದಿಂದ ತಾರೆಗಳ ದೂರ, ಭಾರ, ಗಾತ್ರ, ಉಷ್ಣಾಂಶ, ಅವುಗಳ ಭ್ರಮಣ, ಚಲನೆ, ಅವು ಒಂಟಿಗಳೇ, ಯುಗ್ಮಗಳೇ, ಅವಕ್ಕೆ ಗ್ರಹಗಳಿವೆಯೇ, ಅವುಗಳ ರಾಸಾಯನಿಕ ರಚನೆ ಏನು ಇತ್ಯಾದಿ ತಾರೆಗಳಿಗೆ ಸಂಬಂಧಿಸಿದ ಎಲ್ಲ ವಿಷಯ ಗ್ರಹಣಕ್ಕೂ ವರ್ಣಪಟಲ ಗ್ರಾಹಿಯು ಅನಿವಾರ್ಯ ಸಾಧನವಾಗಿರುವುದನ್ನು ಪಾಠಕರು ಗಮನಿಸಿರಬೇಕು. ವರ್ಣಪಟಲಗ್ರಾಹಿಯನ್ನು ಖಗೋಳವಿಜ್ಞಾನಿಯ ಕಾಮಧೇನುವೆಂದು ಕರೆದರೆ ಅತಿಶಯೋಕ್ತಿಯಲ್ಲ.

ಇಲ್ಲಿಗೆ ತಾರೆಗಳಿಗೆ ಸಂಬಂಧಿಸಿದ ವಿಷಯಗಳ ಪ್ರಾಯೋಗಿಕ ನಿರ್ಣಯ ವಿಧಾನಗಳನ್ನು ಪರಿಶೀಲಿಸಿದ್ದಾಯಿತು. ಇನ್ನು ಈ ಸಂಗತಿಗಳನ್ನು ಹೆಣೆದು ವಿಶ್ವ ಚಿತ್ರಕ್ಕೆ ಕಳೆಕೊಟ್ಟಿರುವ ತತ್ತ್ವಜ್ಞನ ಕೃತಿಯನ್ನು ಅವಲೋಕಿಸಿ ಬೆರಗಾಗ ಬೇಕಾಗಿದೆ.

ಆರ್. ಎಲ್. ನರಸಿಂಹಯ್ಯ.

ಕಾವ್ಯಾವಲೋಕನ

ಕೆಲವು ಹೊಸ ಕವನಸಂಗ್ರಹಗಳು

೧. ಹಿಗ್ಗು—ಲೇಖಕರು : 'ವಿನಾಯಕ'; ಪ್ರಕಾಶಕರು : ಕಾವ್ಯಪ್ರಕಾಶನ ಸಮಿತಿ, ಸಾಂಗಲಿ ; ಪುಟಗಳು ೪೯ ; ಬೆಲೆ, ರೂ. ೦-೧೨-೦.

೨. ನವ್ಯಕವಿತೆಗಳು—ಲೇಖಕರು : 'ವಿನಾಯಕ'; ಪ್ರಕಾಶಕರು : ಕಾವ್ಯಪ್ರಕಾಶನ ಸಮಿತಿ, ಸಾಂಗಲಿ ; ಪುಟಗಳು ೯೨ ; ಬೆಲೆ, ರೂ. ೧-೧೨-೦.

೩. ಹೃದಯವೀಣೆ—ಲೇಖಕರು : ಆಡಿಬಾಯಿ ರಾಮಣ್ಣ ಶೆಟ್ಟಿ, ಧರ್ಮಸ್ಥಳ ; ಪ್ರಕಾಶಕರು : ಲೇಖಕರೇ ; ಪುಟಗಳು ೭೬ ; ಬೆಲೆ, ರೂ. ೧-೦-೦.

೪. ನನ್ನ ಹಾಡು—ಲೇಖಕರು : ಬ. ಗಿ. ಯಲ್ಲಟ್ಟಿ ; ಪ್ರಕಾಶಕರು : ಶಾಂತಿಸೇವಾ ಸದನ, ಸೇಡಬಾಳ ; ಪುಟಗಳು xiv + ೨೫ ; ಬೆಲೆ, ರೂ. ೧-೮-೦.

೫. ಕನ್ನಡ ಕುಮಾರಸಂಭವ—ಲೇಖಕರು : ಅಮ್ಮೆಂಬಳ ಶಂಕರನಾರಾಯಣ ; ಪ್ರಕಾಶಕರು : ಸಾಹಿತ್ಯಾಂಜಲಿ ಗ್ರಂಥಮಾಲೆ, ಆನಂದಾಶ್ರಮ, ಕೋಟೆಕಾರ್, ದ.ಕ. ; ಪುಟಗಳು ೮ + ೭೪ ; ಬೆಲೆ, ರೂ. ೧-೪-೦.

೬. ಬಡವರ ಬಾಪೂಜಿ ಅಥವಾ ಗಾಂಧೀಗೀತೆ—ಲೇಖಕರು : ಎ. ಕೃಷ್ಣಭಟ್ಟ ; ಪ್ರಕಾಶಕರು ; ಲೇಖಕರೇ ; ಪುಟಗಳು ೯೩ ; ಬೆಲೆ, ರೂ. ೦-೧೨-೦.

೭. ಹೂದೋಣಿ—ಲೇಖಕರು : ಎಸ್. ಜಿ. ಪ್ರಭಾಚಂದ್ರ ; ಪ್ರಕಾಶಕರು : ಲೇಖಕರೇ ; ಪುಟಗಳು ೪೭ ; ಬೆಲೆ, ರೂ. ೦-೧೨-೦.

೮. ಕುಬೇರನ ಕವನಗಳು (ಸಂಚಿಕೆ ೧)—ಲೇಖಕರು : ಮತ್ತು ಪ್ರಕಾಶಕರು : ಎಚ್. ಡಿ. ನಾರಾಯಣರಾವ್, ಎಂ.ಸಿ.ಎಫ್., ಲಿಮಿಟೆಡ್, ಬೆಳಗುಳ ; ಬೆಲೆ, ೦-೨-೦.

ಕನ್ನಡ ಕವಿತೆಯ ಕ್ಷೇತ್ರದಲ್ಲಿ ಕೃಷಿಕರಿಗೇನೂ ಕೊರತೆಯಿಲ್ಲವೆನ್ನಲು ಈ ಮೇಲಿನ ಪಟ್ಟಿಯೇ ಸಾಕ್ಷಿ. ಎಲ್ಲ ಸಂಗ್ರಹಗಳಲ್ಲಿಯೂ ಏಕಜಾತೀಯವಾದ ಮತ್ತಾವ ಅಂಶವಿಲ್ಲದಿದ್ದರೂ ಆನಂದಜನಕತ್ವವಾದರೂ ಇರಬೇಕೆಂದು ಬಯಿಸುವುದು ಅತಿಯೆನಿಸಲಾರದು. ಆದರೆ ಇಲ್ಲಿ ಆ ಗುಣಕ್ಕೂ ಲೋಪ ಬಂದಿದೆ. ಮೊದಲ ಎರಡು ಸಂಗ್ರಹಗಳು ವಿಶಿಷ್ಟರೂಪದ ನವ್ಯತೆಯನ್ನು ಪ್ರದರ್ಶಿಸಿದರೆ, ಕೊನೆಯ ಎರಡು ಅಶಿಷ್ಟ ಪರಾನುಕರಣದಲ್ಲಿ ಪರ್ಯವಸಾನಹೊಂದಿವೆ. ಮೂರು ನಾಲ್ಕನೆಯ ಸಂಗ್ರಹಗಳಲ್ಲಿ ಬರೆದವರು ಇನ್ನೂ ಅಭ್ಯಾಸಿಗಳೆಂಬ ಭಾವನೆಯು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಸಂಸ್ಕೃತಸಾಹಿತ್ಯದಲ್ಲಿ ಸಾರ್ವಭೌಮಸ್ಥಾನಕ್ಕೆ ಯೋಗ್ಯನಾದ

ಕಾಳಿದಾಸಕವಿಯ ಮಹಾಕಾವ್ಯವೊಂದನ್ನು ಹಳ್ಳಿಯ ಹಾಡಿನ ಧಾಟಿಯಲ್ಲಿ ಬರೆಯುವ ಮಹಾಸಾಹಸವನ್ನು 'ಕನ್ನಡ ಕುಮಾರಸಂಭವ'ದಲ್ಲಿ ನೋಡಬಹುದು. ಹಳ್ಳಿಯ ಹಾಡುಗಳಿಗಿರುವ ಪ್ರಾಸಾದಿನಿಯಮಗಳನ್ನು ಕೂಡ ಮೀರಿರುವುದು ಮತ್ತೂ ವಿಶೇಷ. ಆರನೆಯದು ಶಿಶುಪಾಠಕ್ಕೆಂದೇ ಬರೆದ ರಚನೆ. ಗಾಂಧೀಜಿಯವರ ಸ್ತೋತ್ರವನ್ನು ನಾಲ್ಕು ಮಾತ್ರೆಯ ಷಟ್ಪದಿಗಳ ಮೂಲಕ ಸುಮಾರು ಇನ್ನೂರೈವತ್ತು ಪದ್ಯಗಳಲ್ಲಿ ಮಾಡಿದ್ದಾರೆ. ಪದ್ಯಗಳು ಬಾಯಿಪಾಠಕ್ಕೆ ಯೋಗ್ಯವಿರಬಹುದು; ಆದರೆ ಅವುಗಳ ಕಾವ್ಯಗುಣ ಶೂನ್ಯ.

ಈಗ ಒಂದೊಂದನ್ನೂ ಕುರಿತು ವಿವರವಾಗಿ ಕೆಲವು ಮಾತುಗಳನ್ನು ಹೇಳಬಹುದು. 'ಹಿಗ್ಗು' ಎಂಬ ಕವನಸಂಗ್ರಹಕ್ಕೆ ಮುನ್ನುಡಿಯನ್ನು ಬರೆಯುತ್ತಾ ಲೇಖಕರು ಹೀಗೆಂದಿದ್ದಾರೆ:—"ಹಿಗ್ಗು ವಿಕಾಸ, ವಿಸ್ತಾರ. ಆನಂದವೇ ವಿಸ್ತಾರ; ವಿಸ್ತಾರವೇ ಆನಂದ. ಹಿಗ್ಗಿದವ ಹಿರಿಯನಾಗುತ್ತಾನೆ. ಕುಗ್ಗಿದವ ಕಿರಿಯನಾಗುತ್ತಾನೆ. ಸೊಕ್ಕಿದವ ಅಸುರನಾಗುತ್ತಾನೆ. ಆನಂದದ ವಿಸ್ತಾರದಲ್ಲಿ ಸುಖ-ದುಃಖಗಳೆರಡೂ ನೆಳಲು-ಬೆಳಕಿನಂತೆ. ಅವಿಲ್ಲದೆ ವಿಸ್ತಾರವು ವಿಸ್ತೃತವಾಗಲಾರದು. ವಿಸ್ತೃತ ಪ್ರಜ್ಞೆಯೆಂದರೇ ಹಿಗ್ಗು. ಜಿಜ್ಞಾಸವು ಹಿಗ್ಗಿನ ದಾರಿಯಲ್ಲಿ ಸಾಧಕ. ಹಿಗ್ಗಿನ ಮೊಗ್ಗೆಯೇ ಜ್ಞಾನಿ. ಹಿಗ್ಗಿನ ಸುಗ್ಗಿಯೇ ದೇವರು. ಹಿಗ್ಗಿನ ದಾರಿಯಲ್ಲಿ ಬರೆದ ಕವನಗಳಿವು. ಆಂತರಿಕ ಪ್ರಜ್ಞೆಯ ವಿಕಾಸ, ಆ ವಿಕಾಸತಂದ ಅನುಭವ, ಸಾಮಾಜಿಕ ಪ್ರಜ್ಞೆ, ಅದರಿಂದ ಕಲಿತ ಪಾಠಗಳು, ಆಂತರಿಕಬಾಹ್ಯ ಪ್ರಜ್ಞೆಗಳು ಮೇಳವಿಸಲು ಜನಿಸುವ ಆದರ್ಶ ಸೃಷ್ಟಿ—ಇವೇ ಇಲ್ಲಿಯ ಕಾವ್ಯವಸ್ತುಗಳಾಗಿವೆ." ಸೂತ್ರಪ್ರಾಯವಾದ ಈ ಬರವಣಿಗೆಯಲ್ಲಿ ಲೇಖಕರ ವಿಚಾರಸಾರಸರ್ವಸ್ವವೂ ಗರ್ಭೀಕೃತವಾಗಿದೆ. ಆದರೂ ಇದನ್ನೋದಿದಮೇಲೆ ಕವನಗಳನ್ನೆಲ್ಲ ಪರಿಶೀಲಿಸಿದಾಗ ಒಂದೆರಡು ಸಂದೇಹಗಳು ಬಂದೊದಗುತ್ತವೆ—'ಬಾಹ್ಯಪ್ರಜ್ಞೆಯೂ ಸಾಮಾಜಿಕಪ್ರಜ್ಞೆಯೂ ಒಂದೇಯೊ ಇಲ್ಲವೆ ಬೇರೆ ಬೇರೆಯೋ?' 'ಆಂತರಿಕ ಪ್ರಜ್ಞೆಯ ವಿಕಾಸಕ್ಕೆ ಈ ಪ್ರಜ್ಞೆಗಳ ಸಹಾಯವೆಷ್ಟು?' 'ಹಿಗ್ಗಿನ ಸಾಧಕನಿಗೆ ಕ್ಲೇಶದಲ್ಲಿಯೂ ಹರ್ಷ ಕಾಣುವಂತಹ ಬಾಹ್ಯ-ಆಂತರಿಕ ಪ್ರಜ್ಞೆಗಳ ಸುಂದರ ಸಮ್ಮಿಲನವು ಸಿದ್ಧಿಸಿರಬಹುದು. ಆದರೆ ಇದರಿಂದ 'ಆದರ್ಶಸೃಷ್ಟಿ'ಯು ಜನಿಸಿಯೇ ತೀರುವುದೆಂದು ಹೇಳುವುದು ಸರಿಯೆ?' ಕಾವ್ಯವಸ್ತುವು ಬಾಹ್ಯಪ್ರಜ್ಞಾವಲಯಕ್ಕೆ ಸೇರಿರಲಿ, ಆಂತರಿಕಪ್ರಜ್ಞಾವಲಯಕ್ಕೆ ಸೇರಿರಲಿ, ತದುಭಯವಲಯಕ್ಕೆ ಸೇರಿರಲಿ, ಎಲ್ಲೆಡೆಗೂ ಕಾವ್ಯಧರ್ಮವು ಮಾತ್ರ ಒಂದೇ ಆಗಿರುವುದೆಂದು ಹೇಳಬೇಕು. ಕಾವ್ಯದ ವಸ್ತುಗಳು ಬೇರೆ ಬೇರೆಯಾಗಬಹುದು. ಆದರೆ ವಸ್ತುಗಳ ಪ್ರಕಟಣೆಯ ಕಾಲದಲ್ಲಿ ಕವಿಯು ಪರಂಪರಾಪ್ರಾಪ್ತವಾದ ಕೆಲವೊಂದು

ಕಾವ್ಯನಿಯಮಗಳನ್ನು ಗಮನದಲ್ಲಿಟ್ಟೇ ಇರಬೇಕಾಗುತ್ತದೆ. ಹಳೆಯ ನಿಯಮಗಳು ಬೇಡವಾದರೆ ಅವುಗಳ ಸ್ಥಾನದಲ್ಲಿ ಹೊಸ ನಿಯಮಗಳನ್ನಾದರೂ ಕಲ್ಪಿಸಿಕೊಳ್ಳ ಬೇಕಾಗುತ್ತದೆ. ಆದರೆ ಸಕಲ ನಿಯಮಗಳನ್ನು ಮೀರುವುದಕ್ಕೆ ವಸ್ತುವೈಲಕ್ಷಣ್ಯವು ಒಂದು ಸೋಗಾಗಿ ಪರಿಣಮಿಸಬಾರದು. ಕಾವ್ಯದಿಂದ ಜನರೆಲ್ಲರೂ ಒಂದು ಬಗೆಯ ಆನಂದವನ್ನಪೇಕ್ಷಿಸುತ್ತಾರೆ. ಯಾವುದೇ ಕಾರಣದಿಂದಾಗಲಿ, ಬಹುಜನರ ಆನಂದಕ್ಕೆ ಆಸ್ಪದವೀಯದ ಕಾವ್ಯವು ಉತ್ತಮ ಕಾವ್ಯದಲ್ಲಿ ಗಣ್ಯವೆನಿಸಲಾರದು. ತತ್ವ ಪ್ರತಿ ಪಾದನೆಗಿಂತಲೂ ಆನಂದಾಂಶಪ್ರಚೋದಕತ್ವವೇ ಕಾವ್ಯದ ಮುಖ್ಯಕರ್ಮ.

'ಹಿಗ್ಗ'ನ್ನು ಕುರಿತು ಹಾಡುವ ಪದ್ಯಗಳು—'ದೇವಕಂಠ,' 'ಆನಂದ,' 'ಆನಂದಮಯ,' 'ಹಿಗ್ಗು', 'ಬೆಳಕು,' 'ಆರೋಹಣ,' 'ಬಿಳಿದಾವರೆ' ಇತ್ಯಾದಿ— ಈ ಸಂಗ್ರಹದಲ್ಲಿ ವಿಪುಲವಾಗಿವೆ. ಆ ಹಿಗ್ಗಿನ ಸಾಧನೆಗೆ ನೆರವಾದ ಸನ್ನಿವೇಶಗಳನ್ನು ಮೊದಲು ಪದ್ಯಗಳು ವರ್ಣಿಸುತ್ತವೆ. ಕವಿಯು ತನ್ನ ಮೆಚ್ಚಿನ ನಾಡಿನಿಂದ ದೂರ ಹೋಗಿ ವೀಸಸಗರದಲ್ಲಿರಬೇಕಾಗಿಬಂದ ಘಟನೆ; ಆದರಿಂದ ಮನಸ್ಸಿನ ಮೇಲಾದ ವಿವಿಧ ಪರಿಣಾಮಗಳು, ಪ್ರಕೃತಿಮಾತೆಯ ಸುಮಧುರಪ್ರಭಾವ—ಇವುಗಳನ್ನು ಮೊದಲನೆಯ ಪದ್ಯವು ಚಿತ್ರಿಸುತ್ತದೆ. ಅನಿರೀಕ್ಷಿತ ಆಘಾತಗಳಿಂದ ಹಣ್ಣಾದ ಮನೋಭಾವವನ್ನು "ವಿಷ-ಅಮೃತ'ವೆಂಬ ಕವನವು ಪ್ರಕಟಿಸುತ್ತದೆ.

> "ಅಲ್ಲಿ ವಿಷ, ಇಲ್ಲಿ ವಿಷ,
> ಎಲ್ಲಿಡೆಗೂ ಆಮಿಷ,
> ರಾಗ, ದ್ವೇಷ, ಕಿಲ್ಮಿಷ."

'ತಲೆಯಲೆಲ್ಲ ರಣರಣ, ಮನದಲೆಲ್ಲ ಭಣಭಣ"—ಇದು ಈ ಕವನದ ಭಾವ. ಆದರೆ ಅದು ಮುಗಿಯುವುದು 'ಬೆಂದು ನೊಂದು ಚಿನ್ನವಾಗು, ಘನ್ನ (Sic)ವಾಗು, ಭಾವವೆ!' ಎಂಬ ನಿರ್ಧಾರದಲ್ಲಿ. ಮತ್ತೆ ಕಡೆಯ ಕವಿತೆಯಲ್ಲಿ ಬಾಹ್ಯಪ್ರಜ್ಞೆಯ ಪ್ರದರ್ಶನವಿದೆ. ಉಳಿದೆಲ್ಲ ಕವಿತೆಗಳಲ್ಲಿಯೂ ಶ್ರೀ ಅರೊಬಿಂದೊರವರ ದರ್ಶನ ಪ್ರಣಾಲಿಯು ಸುಸ್ಪಷ್ಟ. ಮಾನವಕುಲವು ಸರ್ವರ ಕಲ್ಯಾಣದೆಡೆಗೆ ಸಾಗುತ್ತಿರುವು ದೆಂಬ ಶ್ರದ್ಧೆ, ದೇವಾನುಗ್ರಹದ ನಂಬಿಕೆ, ಮೋಹಾಂಧಕಾರದಿಂದ ಪಾರಾಗಿಸುವ ಜ್ಞಾನ ಸೂರ್ಯನ ಉದಯವಾಗಿರುವುದೆಂಬ ಸಮಾಧಾನ, ದಿವ್ಯಜ್ಞಾನದ ಸೋಪಾನಗಳನ್ನೇರಿ ಜನ್ಮಸಾರ್ಥಕ್ಯ ಕಲ್ಪಿಸಿಕೊಳ್ಳಬೇಕೆಂಬ ತೀವ್ರಾಭಿಲಾಷೆ, ಅಡ್ಡ ಬರುವ ಸಂದೇಹ ಮತ್ತು ಸಮಸ್ಯೆಗಳಿಗೆ ಪರಿಹಾರ—ಇವುಗಳು ಕಾವ್ಯಕ್ಕೆ ಸ್ಫೂರ್ತಿ ಯನ್ನಿತ್ತು ಅನೇಕ ಪ್ರೌಢೋಕ್ತಿಗಳಿಗೆ ಕಾರಣವಾಗಿವೆ.

ಅಧ್ಯಾತ್ಮಸುಖದ ಅಪರೋಕ್ಷಾನುಭೂತಿಯು ವಾಗತೀತವೆಂದೂ ಕಾವ್ಯ

ಸಾಮಗ್ರಿಯಲ್ಲವೆಂದೂ ಪ್ರಾಚೀನರ ಭಾವನೆಯಾಗಿತ್ತು. ಆತ್ಮಾನಂದವು ಅಲೌಕಿಕ ಮತ್ತು ಅಸಾಮಾನ್ಯವೆಂದೂ ಕಾವ್ಯದಲ್ಲಿ ಸರ್ವರ ಹೃದಯಸಂವಾದಿಯಾದ ವಸ್ತುಗಳಷ್ಟೇ ರಸಪ್ರತೀತಿಗೆ ಕಾರಣಗಳಾಗುವುವೆಂದೂ ಅವರು ತಿಳಿದಿದ್ದರು. ನಿರ್ವೇದ ಪ್ರಧಾನವಾದ ಶಾಂತರಸಕ್ಕೆ ಅಸ್ತಿತ್ವವನ್ನು ಕೂಡ ಮೊದಮೊದಲು ಒಪ್ಪಿರಲಿಲ್ಲ. ಅಂತೆಯೇ ಭಾರತವರ್ಷವು ಯೋಗಿಗಳ ತವರಾದರೂ ಯೋಗಿಗಳು ತಮ್ಮ ಅಖಂಡಾನಂದವನ್ನು ಕಾವ್ಯರೂಪದಲ್ಲಿ ಹೆಚ್ಚಾಗಿ ತೋರಿಸಿಲ್ಲ. ಭಗವದ್ಗೀತೆಯೇ ಮೊದಲಾದುವನ್ನು ಕೂಡ ಕಾವ್ಯವೆನ್ನುವುದಕ್ಕಿಂತಲೂ ಶಾಸ್ತ್ರವೆನ್ನುವುದೇ ಹೆಚ್ಚು. ಆದರೆ ಇಂದಿನ ವಿಚಾರಸರಣಿಯಲ್ಲಿ ಪರಿಶುದ್ಧ ಕಾವ್ಯವೆಂದರೆ ಆಧ್ಯಾತ್ಮಿಕ ಅನುಭವದ ವಾಹಿನಿಯೆಂಬ ತತ್ವವೂ ಮುಂದೆ ಬಂದಿದೆ; ಜೀವನದ ವಿವಿಧ ದ್ವಂದ್ವಗಳನ್ನು ಗಮನಿಸಿ ಅದರ ರಹಸ್ಯವನ್ನು ಭೇದಿಸುವವನೇ ಕವಿಯೆಂಬ ಭಾವನೆ ತಲೆದೋರಿದೆ. ಈ ಕೆಲಸವನ್ನು ಹಿಂದಿನವರು ದಾರ್ಶನಿಕರಿಗೆ ಬಿಟ್ಟಿದ್ದರು. ಕವಿಯು ಆ ಕೆಲಸವನ್ನು ಮಾಡಲುಳ್ಳವನೆಂದೊಪ್ಪಿದರೂ ಅದನ್ನು ಅವನು ಪರ್ಯಾಯವಾಗಿ, ಲೋಕಾನುರಂಜಕವಾದ ಪುರಾಣಕಥೆಗಳ ಮೂಲಕ ಮಾಡಬಹುದೆಂದರೇ ಹೊರತು ನೇರವಾಗಿ ಶಬ್ದಜಾಲಗಳಿಂದ ಮಾಡಬಹುದೆಂದು ಬಗೆಯಲಿಲ್ಲ. ಅನೇಕರಿಗೆ ಕಾವ್ಯದ ಅರ್ಥವು ಸುಸ್ಪಷ್ಟವಾಗಿರುವುದನ್ನೇ ಅವರು ಕಾವ್ಯದ ಮೊದಲ ಲಕ್ಷಣವೆಂದುಕೊಂಡಿದ್ದರು. ಇಂದು ಕವಿಯ ದರ್ಶನವು ಸ್ವಚ್ಛವಾಗಿದ್ದಷ್ಟೂ, ಅದನ್ನು ಅವನು ಸೂಚಿಸುವಂತಹ ನೂತನ ಶಬ್ದಸೃಷ್ಟಿಗೈದಷ್ಟೂ ಉತ್ತಮಕವಿಯಾಗುವನೆಂಬ ಆಶಯವು ಮೊಳೆತಿದೆ. ಕಾವ್ಯದ ವಾಚ್ಯಾರ್ಥ, ಛಂದಸ್ಸು, ರೀತಿ, ಎಲ್ಲವೂ ಕವಿಯ ದರ್ಶನ ಪ್ರಕಟನೆಗೆ ಮಾತ್ರ ಇರುವುದೆಂದೂ, ಆದುದರಿಂದ ಅವಕ್ಕೆ ಯಾವ ಬಗೆಯ ನಿರ್ಬಂಧಕವಾದ ಪ್ರಾಧಾನ್ಯವೂ ಇರಲಾರದೆಂದೂ ಸ್ವೀಕೃತವಾಗುತ್ತಿದೆ. ವಿನಾಯಕರ ಈ ಪದ್ಯಗಳಲ್ಲಿ ನೂತನಪದಸೃಷ್ಟಿಗಿಂತಲೂ ಹೆಚ್ಚಾಗಿ ಪ್ರಕರಣಾಂತರ ಪ್ರಸಿದ್ಧವಾದ ಪದಗಳಿಗೆ—ಉದಾ: ಪರಾಪ್ರಕೃತಿ, ಅನ್ನಮಯ, ಪ್ರಾಣಮಯ, ಮನೋಮಯ, ಪುರುಷ, ರಾಜಸ, ತಾಮಸ, ತುರೀಯ, ಹಂಸ, ದೇವಿ, ನಿರ್ಮಾಣಕಾಯ, ಇತ್ಯಾದಿ—ಅಪಾರವಾದ 'ಧ್ವನಿ'ಯು ತುಂಬಿಬರುವುದನ್ನು ನೋಡಬಹುದು. ಹಾಗೆಯೇ 'ಅರುಣ,' 'ಮಹಾಲಕ್ಷ್ಮಿ,' 'ಮಹಾಕಾಳಿ,' 'ಸನತ್ಕುಮಾರ,' ಯೋಗಮಾಯೆ, 'ಮುಕ್ಕಣ್ಣ,' 'ಸಪ್ತಾಶ್ವ,' ಮೊದಲಾದ ಪುರಾಣಪ್ರಸಿದ್ಧಪದಗಳಿಗೂ ಒಂದು ನೂತನ ವಿಶಾಲಾರ್ಥವು ಆವರಿಸಿಕೊಳ್ಳುವುದನ್ನು ನೋಡಬಹುದು. ಈ ಬಗೆಯ ಕಾವ್ಯರಚನೆಯಲ್ಲಿ ಕವಿವಿವಕ್ಷಿತವಾದ ಅಪರೋಕ್ಷಾನುಭೂತಿಯು ಸಹೃದಯವೇದ್ಯವಾಗಿದ್ದರೆ ಉತ್ತಮ ಕವಿತೆಯಾಗುತ್ತದೆ. ಅದಿಲ್ಲದೆ ಅದು ಕವಿಮಾತ್ರ ವೇದ್ಯವಾಗಿ ಸಹೃದಯರಿಗೆ

ಅಗೋಚರವಾದರೆ ದೊಡ್ಡ ದೋಷವಾಗುತ್ತದೆ. ಪ್ರಕೃತಗ್ರಂಥದಲ್ಲಿ ಗುಣಬಾಹುಲ್ಯ ವಿದೆಯೇ ಇಲ್ಲವೇ ಎಂಬುದನ್ನು ಕಾಲವು ನಿರ್ಧರಿಸಬೇಕು.

ಇದೇ ಲೇಖಕರ 'ನವ್ಯಕವಿತೆ'ಗಳಲ್ಲಿ ಇದಲ್ಲದೆ ಇನ್ನೊಂದು ಜಾತಿಗೆ ಸೇರುವ ಹದಿನೇಳು ಕವನಗಳಿವೆ. ವ್ಯಾವಹಾರಿಕ ಜೀವನದಲ್ಲಿ ಪ್ರಮುಖಪಾತ್ರವನ್ನು ವಹಿಸುವ ನೂತನ ವೈಜ್ಞಾನಿಕ ಸಾಮಗ್ರಿಗಳೂ, ಜನಜೀವನವನ್ನು ವಿಷಮಯ ವಾಗಿ ಮಾಡುತ್ತಿರುವ ಪ್ರವೃತ್ತಿಗಳೂ, ಶಾಂತಿಸುಖವು ಸಾಧಿಸಬೇಕಾದರೆ ಅಗತ್ಯ ವಾದ ಮನೋಧರ್ಮವೂ ಕವನಗಳಿಗೆ ಪ್ರಚೋದನೆಯನ್ನಿತ್ತಿವೆ. ಇಲ್ಲಿ ಮಾತ್ರ ಲೇಖಕರ ಅಭಿಪ್ರಾಯಗಳು ಪ್ರಸಿದ್ಧ ಛಂದಸ್ಸುಗಳ ಮತ್ತು ಪ್ರಸಿದ್ಧ ಶಬ್ದಾರ್ಥಗಳ ಪರಿಮಿತಿಯನ್ನು ಲೀಲಾಜಾಲವಾಗಿ ಮೀರಿ ಹರಿಯುತ್ತವೆ. ಪದ್ಯಬಂಧಕ್ಕೆ ಅನಿ ವಾರ್ಯವಾದ ಅಂಗವೆಂದು ಸಂಪ್ರದಾಯವು ಹೇಳುವ ಛಂದಸ್ಸು, ಲಯ, ಗತಿ ಗಳೆಲ್ಲವೂ ಗಾಳಿಯಲ್ಲಿ ತೂರಿಹೋಗುತ್ತವೆ. ತಾನೇ ತಾನಾದ ಶುದ್ಧ ಕವಿತೆಯ ನೈಜಸ್ವರೂಪವೇ ಇದೆಂದೂ ಅಸಾಧಾರಣವಾದ ಕವಿಮನೋಧರ್ಮದ ಸಹಜಾ ವಿಷ್ಕಾರವೇ ಇದೆಂದೂ ಹೇಳುವವರು ಹೇಳಬಹುದು. ಆದರೆ ಕನ್ನಡದಲ್ಲಿ ಇನ್ನೂ ಜನರ ಕಿವಿ ಈ ರಚನೆಗಳ ಅರ್ಥಗಾಂಭೀರ್ಯವನ್ನು ಆಸ್ವಾದಿಸುವಷ್ಟು ಪಳಗಿಲ್ಲ ವೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಮುದ್ರಣವಿನ್ಯಾಸಗಳಂತೆ ಸಂಕೇತ ಸಂದೋಹಗಳಿಂದಲೂ, ನೇಯಾರ್ಥಪರಂಪರೆಗಳಂತೆ ಸಂದಿಗ್ಧ ಶಬ್ದಸಮೂಹ ಗಳಿಂದಲೂ, ಕಿಕ್ಕಿರಿದು ತುಂಬಿರುವ ಈ ನವ್ಯಪ್ರಯೋಗಗಳು ಎಷ್ಟರಮಟ್ಟಿಗೆ ಕವಿತೆಯ ಕ್ಷೇತ್ರವನ್ನು ವಿಸ್ತಾರಗೊಳಿಸುವುವೆಂಬುದನ್ನು ಈಗಲೇ ತೀರ್ಮಾನಿ ಸುವುದು ಅಸಾಧ್ಯ, ಅನುಚಿತ. ವಾಚಕರ ಅವಗಾಹನೆಗಾಗಿ ಒಂದು ಉದಾಹರಣೆ ಯನ್ನೆತ್ತಿಕೊಂಡಿದೆ—

ಗಮು ! ಗಮು ! ಗಮು !
ಉದ್ಯಮದ ಉದ್ಗಮ, ಉಗಮು !
ಗಮುಕಿಸುವ ಗಮುಕಿ,
ಗಮುನಿಸುವ ಗಮುನಿ,
ಗಮುನೋದ್ಯುಕ್ತ ಗಮುನೆ,
ಗಮುಕಸಪ್ತಕದ ಗಭೀರೆ,
ಗಮ್ಯವಿಹ ಗಮ್ಮತುಗಂಪೆ,
ಚಮುಕಿಸುವ ಚಮ್ಮಟಿಗೆ:—
ಗಮು ! ಗಮು ! ಗಮು !
ಉದ್ಯಮದ ಉದ್ಗಮು, ಉಗಮು !

—("ಜೀವನ")

ವಿಡಂಬನೆಗಾಗಿ ಹೊರಟ ಕವನಗಳಲ್ಲಿ ಒಂದುಬಗೆಯ ಚಮತ್ಕೃತಿಯಿರುವುದನ್ನು ಎಲ್ಲರೂ ನೋಡಬಹುದು; ಕವಿಗಳ ಕಲ್ಪನಾಪಟಲದ ಮೇಲೆ ಚಿರಪರಿಚಿತಾರ್ಥಗಳು ಬಿಂಬಿಸುವ ವಿವಿಧ ಚಿತ್ರಗಳಲ್ಲಿ ಅಪೂರ್ವತೆಯ ರಮಣೀಯತೆಯಿದೆ; 'ಸಾಮಾಜಿಕಪ್ರಜ್ಞೆ'ಯ ಆವಿಷ್ಕಾರದಲ್ಲಿ ಬೆಡಗಿನ ನುಡಿಗಳು ಕಿಡಿಗೊಂಡು ಹೊರಡುತ್ತವೆ. ಒಟ್ಟಿನಲ್ಲಿ, ಒಂದು ಕಡೆಗೆ ಆಡುವ ಮಾತುಗಳಿಂದಲೇ ಪ್ರೌಢಾರ್ಥಪ್ರಕಟನೆಯ ಪ್ರಯತ್ನವೂ, ಇನ್ನೊಂದು ಕಡೆಗೆ ಪದಪದಗಳ ಪ್ರಸುಪ್ತಾರ್ಥವನ್ನು ಪ್ರಬುದ್ಧಗೊಳಿಸುವ ಪ್ರಯತ್ನವೂ, ಇವೆರಡಕ್ಕಿಂತಲೂ ಮೇಲಾಗಿ, ವಿಶ್ವದ ಪರಮರಹಸ್ಯವನ್ನು ಸಾಕ್ಷಾತ್ಕರಿಸುವಾಗ ಸಾಧಕದಲ್ಲಿ ಬರುವ ಭಾವನಾತರಂಗಗಳ ಅನಿರ್ವಚನೀಯಲೋಕವನ್ನು ಶಬ್ದಸಂಗೀತದಿಂದಲೇ ಚಿತ್ರಿಸುವ ಪ್ರಯತ್ನವೂ ಇಲ್ಲಿ ನಡೆದಿದೆ. ಇಲ್ಲಿ ಸಾಂಪ್ರದಾಯಿಕವಾದ ಕೃತ್ರಿಮತೆಯಿಲ್ಲ; ಸಾಂಪ್ರದಾಯಿಕವಾದ ಅರ್ಥನೈರ್ಮಲ್ಯವೂ ಇಲ್ಲ. ಸರಸೋಕ್ತಿಗಿಂತ ವಕ್ರೋಕ್ತಿ ಹೆಚ್ಚು; ಸ್ಪಷ್ಟೋಕ್ತಿಗಿಂತ ಅಸ್ಪಷ್ಟೋಕ್ತಿ ಹೆಚ್ಚು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ 'ವಿನಾಯಕ'ರ ಕಾವ್ಯಪ್ರಯೋಗಗಳು ಮನನೀಯವಾಗಿವೆ; ವೈಶಿಷ್ಟ್ಯಪೂರ್ಣವಾಗಿವೆ. ಜನರ ಅಭಿರುಚಿಯನ್ನು ಸಂಸ್ಕರಿಸಲು ಬಗೆಬಗೆಯ ಪ್ರಯೋಗಗಳು ಕನ್ನಡಸಾಹಿತ್ಯದಲ್ಲಿ ಇನ್ನೂ ಬರಬೇಕಾಗಿವೆ. ಈ ಕೆಲಸವನ್ನು ನಿರ್ವಹಿಸಲು ಶ್ರೀ ವಿನಾಯಕರು ಅತ್ಯಂತ ಸಮರ್ಥರೆಂಬ ಭರವಸೆಯು ನಾಡಿಗೇ ಇದೆ, ಇವರ ಲೇಖನಿಯಿಂದ ಇನ್ನೂ ಹೆಚ್ಚು ಹೆಚ್ಚಾಗಿ ಕವಿತೆಗಳು ಹರಿಯಲೆಂದು ಹಾರೈಸುತ್ತೇವೆ. ನೂತನ ಕವನಗಳ ಪ್ರಕಾಶನಕ್ಕಾಗಿಯೇ ಮೀಸಲಾದ ಸಮಿತಿಯೊಂದನ್ನು ರಚಿಸಿರುವ ಪ್ರೊ|| ರಂ. ಶ್ರೀ ಮುಗಳಿಯವರೂ ಅಭಿನಂದನಾರ್ಹರು.

'ಹೃದಯವೀಣೆ'ಯ ಕಾವ್ಯವಸ್ತುಗಳು ಚಿರಪ್ರಸಿದ್ಧವಾದುವುಗಳು—ಧರ್ಮ, ಸುರಚಾಪ, ಮನದನ್ನ, ಚಿಂತೆ, ಚಂದ್ರೋದಯ, ಮನಸು, ಮನವಿ, ಬಯಕೆ, ಹೆಣ್ಣು, ಇತ್ಯಾದಿ. ಪ್ರಕೃತಿಮಾತೆಯ ಆರಾಧನೆ, ಭಗವದ್ಭಕ್ತಿ, ವಿಭಿನ್ನಾವಸ್ಥೆಗಳಲ್ಲಿ ಮನಸ್ಸಿನಲ್ಲಂಕುರಿಸುವ ಆಸೆ, ನಿರಾಸೆಗಳು, ನೀತಿಬೋಧೆ, ಇವೇ ಈ ಭಾವಗೀತೆಗಳಿಗೆ ಪ್ರೇರಕಗಳು. 'ನನ್ನ ಜೀವನಯಾತ್ರೆ'ಯೆಂಬ ಪದ್ಯದಲ್ಲಿ ತಮ್ಮ ಜೀವನಚರಿತ್ರೆಯನ್ನೂ ಲೇಖಕರು ಸಂಗ್ರಹವಾಗಿ ಕೊಟ್ಟಿದ್ದಾರೆ. ಲೇಖಕರ ವಸ್ತುಗಳು ಪ್ರಸಿದ್ಧ, ಭಾವನೆಗಳು ಕ್ಷುಣ್ಣ, ಶೈಲಿಯು ಪೇಲವ. ಛಂದಸ್ಸಿನಲ್ಲಿ ವೈವಿಧ್ಯವಿದ್ದರೂ ಕಲ್ಪನೆಯಲ್ಲಿ ವೈವಿಧ್ಯವಿಲ್ಲ. ಶ್ರೀ ಗೋವಿಂದ ಪೈಗಳು ಮುನ್ನುಡಿಯಲ್ಲಿ ಹೇಳುವಂತೆ ಇವು "ನಡುವಣ ಹಾಗೂ ಮೇಲಣ ತರಗತಿಗಳ ಮಕ್ಕಳ ಅಭ್ಯಾಸಕ್ಕಂತೂ ಬಹಳ ಹಿತಾವಹವಾಗಿವೆ;" ಕೆಲವು ಪ್ರಕೃತಿಯ ಚಿತ್ರಗಳು ರಮ್ಯವಾಗಿ ಬಂದಿವೆ; ಉದಾ.—

ನೀರದನಿಕರಾಚ್ಛಾದಿತ ಗಗನವು
ಧಾರಿಣಿಯನೆ ಬೆಕ್ಕಸಗೊಳಿಸೇ |
ಭೋರೆನುತಲಿ ಸುರಿವಾ ಮಳೆಗಾಳಿಯು
ಕಾರ ಸೊಬಗನಿಮ್ಮಡಿಗೊಳಿಸೇ ||—(ಸುರಚಾಪ)

'ನನ್ನ ಹಾಡು' ಎಂಬುದೂ ಆದರ್ಶದೃಷ್ಟಿಯಿಂದಲೇ ಹೊರಟ ಕವನಸಂಗ್ರಹ. ಜೀವನದ ಇಂದಿನ ಪ್ರಕ್ಷುಬ್ಧ ವಾತಾವರಣವು ಎಂತಹವರನ್ನಾದರೂ ನಿರಾಶರನ್ನಾಗಿ ಮಾಡುವಂತಿದೆ. ಸಾಮಾನ್ಯವಾಗಿ ತರುಣಕವಿಗಳಲ್ಲಿ ಈ ಭಾವನೆಯುಕ್ಕುವುದೇ ಹೆಚ್ಚು. ಆದರೆ ಶ್ರೀ ಬ. ಗಿ. ಯಲ್ಲಟ್ಟಿಯವರ ಹಾಡುಗಳಲ್ಲಿ ಶ್ರೀ ಅರೊಬಿಂದೊರವರ ಸಂದೇಶದಲ್ಲಿರುವ ಅಚಲಶ್ರದ್ಧೆಯನ್ನು ಕಾಣಬಹುದು. ಹಾಡುಗಳ ಭಾವವು ತಿಳಿಯಾಗಿದೆ, ಓಟವು ಹೃದ್ಯವಾಗಿದೆ, ಭಾಷೆಯು ಸರಲವಾಗಿದೆ. ಯಲ್ಲಟ್ಟಿಯವ ಆಧ್ಯಾತ್ಮಿಕ ಆಶಾವಾದಕ್ಕೆ ಹಿನ್ನೆಲೆಯಂತೆ ಬಾಲ್ಯದಲ್ಲೇ ಮಾತೃವಿಯೋಗ ಮತ್ತು ತಂದೆಯ ಪುನರ್ವಿವಾಹದಿಂದಾದ ನಿರಾಶೆಗಳು ಚಿತ್ರಿತವಾಗಿವೆ. ಇವರ ಕಾವ್ಯ ಶಕ್ತಿಯು ಮತ್ತೂ ಬೆಳೆದು ಇನ್ನೂ ಸಾರವತ್ತಾದ ಕವಿತೆಗಳು ಬರಲೆಂದು ಹಾರೈಸುತ್ತೇವೆ.

ಅಮ್ಮೆಂಬಳ ಶಂಕರನಾರಾಯಣರ 'ಕನ್ನಡ ಕುಮಾರಸಂಭವ'ದ ವಿಮರ್ಶೆಗೆ ಪೂರ್ವದಲ್ಲಿ ಸಂಸ್ಕೃತ ಮಹಾಕಾವ್ಯಗಳ ಪರಿವರ್ತನದ ಬಗೆಗೆ ಒಂದು ಮಾತನ್ನು ಹೇಳಬೇಕು. ಕಾಳಿದಾಸನ ಮಹಾಕಾವ್ಯಗಳಿಗೆ ಮಹಾಕಾವ್ಯತ್ವ ಪ್ರತಿಷ್ಠೆಯಿರುವುದಕ್ಕೆ ಕೇವಲ ಅರ್ಥಮಹತ್ವವಷ್ಟೇ ಕಾರಣವಲ್ಲ; ಕಿರಿದರಲ್ಲಿ ಪಿರಿದರ್ಥವನ್ನು ಹೇಳುವ ಶಬ್ದಸೌಷ್ಠವವೂ ಒಂದು ಕಾರಣ; ಅಂತೆಯೇ ಯತಿನಿಷ್ಠವಾದ ನಿರ್ದಿಷ್ಟತೆಯ ಮಾತಳಿಯುಳ್ಳ ಛಂದೋವೈವಿಧ್ಯವೂ ಇನ್ನೊಂದು ಕಾರಣ. ಒಂದು ಕಡೆ ಕಾಳಿದಾಸನ ಶಬ್ದಾರ್ಥ ಲಾಲಿತ್ಯಗಳ ಫಲವಾಗಿ ಸಂಸ್ಕೃತಾಭ್ಯಾಸಿಗಳು ಕೂಡ ಅವನ ಕಾವ್ಯಗಳನ್ನೋದಿ ವಾಚ್ಯಾರ್ಥವನ್ನು ಗ್ರಹಿಸಬಹುದು. ಇನ್ನೊಂದು ಕಡೆ ಅವನ ಶಬ್ದಾರ್ಥಗಳ ಔಚಿತ್ಯವನ್ನೂ ಅಲಂಕಾರಗಳ ಸಾರ್ಥಕ್ಯವನ್ನೂ, ತಾತ್ಪರ್ಯದ ಮಹತ್ವವನ್ನೂ ನೋಡಿ, ಸಾಹಿತ್ಯ ಪಾರಾವಾರಾಪಾರೀಣರೂ ಕೂಡ ವಿಸ್ಮಿತರಾಗಬಹುದು. ಮೊದಲನೆಯದನ್ನು ಮಾತ್ರ ದೃಷ್ಟಿಯಲ್ಲಿಟ್ಟರೆ ಸುಲಭವಾಗಿ ಸಂಸ್ಕೃತದಿಂದ ಇನ್ನೊಂದು ಭಾಷೆಗೆ ಮಹಾಕಾವ್ಯಗಳನ್ನು ಪರಿವರ್ತಿಸಿಬಿಡಬಹುದು. ಸ್ಥೂಲಾರ್ಥವನ್ನು ಆಡುವ ಮಾತಿನಿಂದಲೇ ಮಾತ್ರಾಬದ್ಧವಾಗಿ ಹೆಣೆದುಬಿಡಬಹುದು. ಈ ಕೆಲಸವನ್ನು ಲೇಖಕರು ಸಮರ್ಪಕವಾಗಿ ಮಾಡಿದ್ದಾರೆ. ಆದರೆ ಈ ಪರಿವರ್ತನವನ್ನು ಮಾತ್ರ ಓದಿ ಕಾಳಿದಾಸನ ಮೂಲದಲ್ಲಿರುವುದು ಇಷ್ಟೇ

ಎಂದು ಯಾರೂ ತಿಳಿಯಬಾರದು. ಸೂರ್ಯನಿಗೆ ಕರಿಯ ಕನ್ನಡಿ ಹಿಡಿದರೆ ಅದರ ಬಿಂಬ ಕಂಡರೂ ಜ್ಯೋತಿಯು ಲುಪ್ತವಾಗುತ್ತದೆ. ಈ ಪರಿವರ್ತನದಲ್ಲಿಯೂ ಕೂಡ ಕಾಳಿದಾಸನ ಮಹಾಕಲ್ಪನೆಯಂತೆ ಅವನ ಶಬ್ದ ಯೋಗಸಾರ್ಥಕ್ಯಕ್ಕೂ ಛಂದೋ ವಿನ್ಯಾಸ ವೈಚಿತ್ರ್ಯದಂತೆ ರಸಪ್ರತಿಪಾದನಕೌಶಲಕ್ಕೂ ಎಷ್ಟೋ ಅನ್ಯಾಯವಾಗಿದೆ. ತ್ರಿಪದಿ ಚೌಪದಿಗಳೂ, ಬಳಕೆಯ ಮಾತುಗಳೂ ಕಾಳಿದಾಸನ ಸಂಪೂರ್ಣ ಪ್ರತಿಭೆಯನ್ನು ಪ್ರತಿಬಿಂಬಿಸಲಾರವು. ಯತಿಶೂನ್ಯವಾದ ಇಂತಹ ಬಂಧಗಳಿಂದ ಒಂದು ಬಗೆಯ ಲಾಘವವು ಬಂದುಹೋಗುತ್ತದೆ. ಒಂದೆರಡು ಉದಾಹರಣೆ ಗಳನ್ನು ನೋಡೋಣ—

ತುಷಾರಸಂಘಾತ ಶಿಲಾಃ ಖುರಾಗ್ರೈ-
ಸ್ಸಮುಲ್ಲಿಖನ್ ದರ್ಪಕಲಃ ಕಕುದ್ಮಾನ್ |
ದೃಷ್ಟಃ ಕಥಂಚಿದ್ಗವಯೈರ್ವಿವಿಗ್ನೈ
ರಸೋಢ ಸಿಂಹಧ್ವನಿರುನ್ನನಾದ ||

(ಕುಮಾರಸಭವ I ೫೬)

ಘನವಾದ ಹಿಮಶಿಲೆಗಳನ್ನವಡುಗಳ ತುದಿಗ
ಳಿಂದ ಬಿರಟುತ, ದರ್ಪ ಮಧುರವಾಗಿ
ಗುಟುರು ಹಾಕಿತು,—ಸಿಂಗ ದನಿಯು ಸಹಿಸದೆ ಬಸವ
ಬಿದರಿರುವ ಕಾಡೆತ್ತುಗಳು ನೋಡುತಿರಲು

(ಪರಿವರ್ತನ)

ಸ ಹಿ ದೇವಃ ಪರಂಜ್ಯೋತಿಃ ತಮಃ ಪಾರೇ ವ್ಯವಸ್ಥಿತಮ್ |
ಪರಿಚ್ಛಿನ್ನಪ್ರಭಾವರ್ಧಿಃ ನ ಮಯಾ ನ ಚ ವಿಷ್ಣುನಾ ||

(II. ೫೮)

ಅ ಪರಂಜ್ಯೋತಿ ದೇವನು ತಮೋಗುಣದಿಂದ
ಆಚೆಯಾದವನಷ್ಟೆ! ವಿಷ್ಣುವೂ ನಾನೂ
ಅವನ ಮಹಿಮಾತಿಶಯವನು ತಿಳಿಯದಿಹೆವು

(ಪರಿವರ್ತನ)

ಅಥ ಮೋಹಪರಾಯಣಾ ಸತೀ
ವಿವಶಾ ಕಾಮವಧೂರ್ವಿಬೋಧಿತಾ |
ವಿಧಿನಾ ಪ್ರತಿಪಾದಯಿಷ್ಯತಾ
ನವವೈಧವ್ಯಮಸಹ್ಯವೇದನಂ ||

(IV. ೧)

ಬಳಿಕ ಸಹಿಸಲಸಾಧ್ಯವಾದ ವೇದನೆಯುಳ್ಳ
ನವ್ಯವೈಧವ್ಯವನ್ನುಂಟುಮಾಡಿರುವ
ವಿಧಿಯು, ಮುರ್ಛಾಕ್ರಾಂತೆಯಾಗಿ ಚೇಷ್ಟಾರಹಿತೆ
ಯಾದ ಕಾಮನ ಪತ್ನಿಯನ್ನೆಬ್ಬಿಸಿತ್ತು.

(ಪರಿವರ್ತನ)

ದ್ವಯಂ ಗತಂ ಸಂಪ್ರತಿ ಶೋಚನೀಯತಾಂ
ಸಮಾಗಮಪ್ರಾರ್ಥನಯಾ ಕಪಾಲಿನಃ |
ಕಲಾ ಚ ಸಾ ಕಾಂತಿಮತೀ ಕಲಾವತಃ
ತ್ವಮಸ್ಯ ಲೋಕಸ್ಯ ಚ ನೇತ್ರಕೌಮುದೀ || (V. ೭೧)

ಶಿವನ ಪಡೆಯುವ ಬಯಕೆಯಿಂದಾಗಿ ಎರಡೀಗ
ದುಃಖಕೆಡೆಯಾಗಿ ಪರಿಣಮಿಸಿ ನಿಂತಿಹುದು.—
ಶೀತಕಿರಣನ ಕಾಂತಿಯುತವಾದ ಕಲೆ ಬಳಿಕ
ಈ ಲೋಕನೇತ್ರಕೌಮುದಿಯಾದ ನೀನು (ಪರಿವರ್ತನ)

ಮೂಲದ ಭವ್ಯತೆಯೆಲ್ಲವೂ ಪರಿವರ್ತನದಲ್ಲಿ ಅಲ್ಪತೆಯನ್ನೈದುತ್ತದೆ. ಚಿರಮಹಾ ಕಾವ್ಯದ ಪರಿವರ್ತನವು ನೂತನ ಕಾವ್ಯಸೃಷ್ಟಿಗಿಂತಲೂ ಕಷ್ಟತರವಾದ ಕೆಲಸ. ಲೇಖಕರು ಮುಂದಿನ ಸರ್ಗಗಳ ಭಾಷಾಂತರದಲ್ಲಿಯಾದರೂ (ಈಗ ಪರಿವರ್ತಿತ ವಾಗಿರುವುವು ಐದೇ) ಕೇವಲ ಸರಲತೆಯನ್ನು ಮಾತ್ರ ಹೆಗ್ಗುರಿಯಾಗಿಟ್ಟುಕೊಳ್ಳದೆ ಸ್ವಾರಸ್ಯವನ್ನೆಲ್ಲ ತರಲು ವಿಶೇಷ ಶ್ರಮವಹಿಸುವರೆಂದು ಹಾರೈಸುತ್ತೇವೆ. ಈಗಿನ ಭಾಷಾಂತರವು ಮೂಲದ ಅನುಗತಾರ್ಥವನ್ನು ಮಾತ್ರ ತಿಳಿಯಲೆಳಸುವ ಅಭ್ಯಾಸಿ ಗಳಿಗೆ ಉಪಯುಕ್ತವಾಗಿದೆಯೆನ್ನಲಡ್ಡಿಯಿಲ್ಲ.

ಇನ್ನುಳಿದ ಮೂರು ಕವನಸಂಗ್ರಹಗಳನ್ನು ಕುರಿತು ಮೊದಲು ಹೇಳಿದುದಕ್ಕಿಂತ ಹೆಚ್ಚಿಗೆ ಹೇಳಬೇಕಾದುದೇನೂ ಕಾಣುವುದಿಲ್ಲ. ವಿಮರ್ಶಿಸಬೇಕಾದ ಕಾವ್ಯಗುಣ ಗಳೊಂದೂ ಅಲ್ಲಿಲ್ಲ.

ಡಾ || ಕೆ. ಕೃಷ್ಣಮೂರ್ತಿ

***

ಐರಾವತ—ಸಂಪಾದಕರು : ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ.ಎ. ; ಪ್ರಕಾಶಕರು : ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ ; ಪುಟಗಳು ಡೆಮಿ ೧೬+೧೦೦+೭+೨ ; ಬೆಲೆ, ರೂ ೧-೮-೦

ಗಾಂಧಾರಿ ತನ್ನ ಮಕ್ಕಳ ನೆರವಿನಿಂದ ಐರಾವತ ವ್ರತವನ್ನು ಆಚರಿಸಿದಳು ; ಆದರೆ ಸಿರಿತನದಿಂದ ಬೀಗಿ, ಬಡತನದಲ್ಲಿದ್ದ ಕುಂತಿಯನ್ನು ಈ ವ್ರತಾಚರಣೆಯಲ್ಲಿ

ಭಾಗವಹಿಸಲು ಆಕೆ ಕರೆಯಲಿಲ್ಲ. ಇದರಿಂದ ಕುಂತಿಯ ಮನಸ್ಸಿಗೆ ತುಂಬ ನೋವಾಯಿತು. ತಾಯಿಯ ಬಯಕೆಯನ್ನು ತೀರಿಸಲು ಲೋಕೈಕವೀರನಾದ ಅರ್ಜುನನು ತನ್ನ ಬಲಪರಾಕ್ರಮದಿಂದ ಐರಾವತ ಕಾಮಧೇನು ಕಲ್ಪವೃಕ್ಷಗಳನ್ನು ಸ್ವರ್ಗದಿಂದ ಭೂಮಿಗೆ ತರಿಸಿದನು. ಗಾಂಧಾರಿ ಮೃತ್ತಿಕೆಯ ಐರಾವತವನ್ನು ಪೂಜಿಸಿದರೆ ಕುಂತಿ ಮಗನ ಮಹಿಮೆಯಿಂದ ನಿಜವಾದ ಐರಾವತವನ್ನೇ ಬಹು ವೈಭವದಿಂದ ಪೂಜಿಸಿದಳು. ಈ ಕಥೆಯೇ ಈ ಕಾವ್ಯದ ವಸ್ತು. ಈ ಕಾವ್ಯವನ್ನು ಸುಪ್ರಸಿದ್ಧ ಸಂಶೋಧಕರಾದ ಶ್ರೀ ಆರ್. ಎಸ್. ಪಂಚಮುಖಿಯವರು ಮೂರು ಕಾಗದಗಳ ಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಸಂಪಾದಿಸಿದ್ದಾರೆ. ಕಾವ್ಯಕರ್ತೃ, ಅವನ ಕಾಲ, ಐರಾವತದ ಮೂಲ, ಐರಾವತದ ಭಾಷೆ ಬಂಧ ಇವೇ ಮೊದಲಾದ ವಿಷಯುಗಳನ್ನೊಳಗೊಂಡ ಉಪೋದ್ಘಾತದಿಂದ ಕೂಡಿದೆ ಈ ಗ್ರಂಥ. ಹಳೆಯ ಗ್ರಂಥವೊಂದನ್ನು ವಿದ್ವಾಂಸರ ಸಹಾಯದಿಂದ ಪ್ರಕಟಿಸಿರುವ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಕಾರ್ಯ ಸ್ತುತ್ಯವಾದದ್ದು.

ಐರಾವತದ ಕರ್ತೃ ಕುಮಾರವ್ಯಾಸನೆಂದು ಕವಿಚರಿತ್ರೆಯ ಎರಡನೆಯ ಸಂಪುಟದಲ್ಲಿ ಹೇಳಿದೆ. ಈ ಹೇಳಿಕೆಗೆ ಜನಪ್ರತೀತಿಯ ಬೆಂಬಲವೂ ಇದೆಯಂತೆ? ಹಸ್ತಪ್ರತಿಗಳ ಕೊನೆಯಲ್ಲಿ ಕುಮಾರವ್ಯಾಸನ ಮನೆದೇವರಾದ ಗದುಗಿನ ವೀರನಾರಾಯಣ ಸ್ವಾಮಿಯ ಅಂಕಿತವಿದೆ. ಮೈಸೂರಿನ ಪ್ರಾಚ್ಯಕೋಶಾಗಾರದಿಂದ ಅಚ್ಚಾದ ಸಂಭವಪರ್ವದ ಇಪ್ಪತ್ತನೆಯ ಸಂಧಿಯಲ್ಲಿ ಈ ಕಥೆ ಬರುತ್ತದೆ. ಒಂದು ಸಂಧಿಯ ಕಥೆ ಇಲ್ಲಿ ಎಂಟು ಸಂಧಿಗಳ ಕಥೆಯಾಗಿ ಪ್ರತ್ಯೇಕ ಪ್ರಬಂಧವಾಗಿ ವಿಸ್ತಾರವಾಗಿದೆ.

ಐರಾವತದ ಕರ್ತೃ ಕುಮಾರವ್ಯಾಸನೆಂಬುದನ್ನು ಸ್ಥಾಪಿಸಲು ಸಂಪಾದಕರು ಮೇಲೆ ಕೊಟ್ಟಿರುವ ಕಾರಣಗಳನ್ನು ಒಪ್ಪಲಾಗುವುದಿಲ್ಲ. ಕನ್ನಡ ಮಹಾಭಾರತ ತುಂಬ ಜನಪ್ರಿಯವಾದ ಗ್ರಂಥ. ಅದರಲ್ಲಿ ಅನೇಕ ಪ್ರಕ್ಷಿಪ್ತಭಾಗಗಳಿವೆ. ಅಂಥ ಭಾಗಗಳಲ್ಲಿ ಐರಾವತದ ಭಾಗವೂ ಒಂದು. ಹೀಗೆ ಹೇಳಲು ಮುಖ್ಯವಾದ ಕಾರಣ ಇದು. ಕನ್ನಡ ಮಹಾಭಾರತದ ಅತ್ಯಂತ ಪ್ರಾಚೀನವಾದ ಕ ಎಂಬ ಕೈಬರಹದ ಪ್ರತಿಯಲ್ಲಿ ಈ ಭಾಗವೇ ಇಲ್ಲ! ಕೇವಲ ಜನಪ್ರತೀತಿಯಿಂದಲೇ ಕಾವ್ಯಕರ್ತೃತ್ವವನ್ನು ನಿರ್ಧರಿಸುವುದು ಕಷ್ಟ. ಮಿಕ್ಕಾವ ಕವಿಗಳೂ ಐರಾವತ ಕರ್ತೃ ಕುಮಾರವ್ಯಾಸನೆಂದು ಹೇಳಿಲ್ಲ. ಸಾಮಾನ್ಯ ಕವಿಯೊಬ್ಬನು ಗದುಗಿನ ವೀರನಾರಾಯಣಸ್ವಾಮಿಯ ಅಂಕಿತದಲ್ಲಿ ಈ ಕಾವ್ಯವನ್ನು ರಚಿಸಿ, ಅದನ್ನು ಕುಮಾರವ್ಯಾಸನ ತಲೆಗೆ ಕಟ್ಟಿರಬೇಕು. ಕಾವ್ಯದಲ್ಲಿ ಎಲ್ಲಿಯೂ ಕುಮಾರವ್ಯಾಸನೆಂಬ ಪದವನ್ನು ಉಪಯೋಗಿಸದಿರುವುದು

ಕರ್ತೃತ್ವದ ವಿಷಯವಾದ ಸಂದೇಹಕ್ಕೆ ಎಡೆಕೊಡುತ್ತದೆ. ಕನ್ನಡ ಮಹಾಭಾರತದ ಆದಿ ಅಂತ್ಯಗಳಲ್ಲಿ ಈ ಪದವನ್ನು ಅನೇಕಭಾರಿ ಬಳಸಿದೆ. ಇನ್ನೂ ಭಾಷೆ ಬಂಧಗಳ ವಿಷಯ. ಭಾಷೆ, ಭಾವ, ಬಂಧ, ಅಲಂಕಾರ, ಛಂದಸ್ಸಿನ ಪ್ರಯೋಗ ಈ ದೃಷ್ಟಿಯಿಂದ ನೋಡಿದರೂ ಈ ಕಾವ್ಯ ಕುಮಾರವ್ಯಾಸ ಭಾರತದ ಬಳಿ ಸುಳಿಯಲೂ ಕೂಡ ಅರ್ಹವಾಗಿಲ್ಲ. ಇನ್ನು ಹೋಲಿಕೆಯ ಮಾತೆಲ್ಲಿ ಬಂತು ? ಈ ಕಾರಣಗಳಿಂದ ಈ ಕಾವ್ಯ ಖಂಡಿತವಾಗಿ ಕುಮಾರವ್ಯಾಸನದಲ್ಲ.

ಈ ಕಾವ್ಯದಲ್ಲಿ ಬಳಸಿರುವ ಭಾಷೆ ಕುಮಾರವ್ಯಾಸ, ಕನಕ, ಪುರಂದರರ ಕಾಲಕ್ಕೆ ಸಂಬಂಧಿಸಿದ್ದು. 'ಕೆಲವು ಶಬ್ದಪ್ರಯೋಗಗಳು ವ್ಯಾಕರಣದೃಷ್ಟಿಯಿಂದ ಅಸಾಧುವಾಗಿದ್ದರೂ ಆಗಿನ ಮಾತಿನ ಸ್ವರೂಪವನ್ನು ತಿಳಿಸಿಕೊಡುವುದರಿಂದ ಅವುಗಳನ್ನು ತಿದ್ದದೆ' ಎಂದು ಸಂಪಾದಕರು ಹೇಳಿದ್ದರೂ 'ಜೆಯ್ಯ' 'ಕೌರುವರಾಯ' 'ದುಶ್ಶಾಸ' 'ಕರುನ' 'ಯುಧಿಷ್ಠರ' 'ಶಾಶಿ' 'ಸಂಭ್ರಮ್ಮ' 'ಬಾಲೆರು' 'ವನುತೆ' ಇವೇ ಮೊದಲಾದ ರೂಪಗಳು ಕವಿಯಿಂದ ಉಪಯೋಗಿಸಲ್ಪಟ್ಟ ರೂಪಗಳಲ್ಲ; ಲಿಪಿಕಾರನವು. ಇವುಗಳನ್ನು ಪರಿಷ್ಕರಿಸಿ ಉಪಯೋಗಿಸಿದ್ದರೆ ಗ್ರಂಥ ಹೆಚ್ಚು ನಿರ್ದೋಷವಾಗುತ್ತಿತ್ತು.

ಮುದ್ರಿತಪ್ರತಿಗೂ (ಕನ್ನಡ ಮಹಾಭಾರತ—ಆದಿಪರ್ವ) ಕೈಬರಹದ ಪ್ರತಿಗಳಿಗೂ ಇರುವ ಪದ್ಯಗಳ ವ್ಯತ್ಯಾಸವನ್ನು ಪರಿಶಿಷ್ಟದಲ್ಲಿ ತೋರಿಸಿದೆ. ಶಬ್ದಕೋಶ, ಕಾವ್ಯದ ವಿಮರ್ಶೆ, ಪದ್ಯಗಳ ಅಕಾರಾದಿ—ಇವುಗಳಿಂದ ಗ್ರಂಥದ ಉಪಯುಕ್ತತೆ ಇನ್ನೂ ಹೆಚ್ಚುತ್ತಿತ್ತು. ಎರಡು ಪುಟಗಳ ಶುದ್ಧಾಶುದ್ಧ ಪತ್ರಿಕೆ ಈ ತೆರನಾದ ಗ್ರಂಥಗಳಿಗೆ ಹೆಚ್ಚೆಂದು ತೋರುತ್ತದೆ.

ಗ್ರಂಥದ ಮುದ್ರಣವೂ ಅಚ್ಚುಕಟ್ಟೂ ಆಕರ್ಷಕವಾಗಿವೆ. ಈ ಗ್ರಂಥದ ಪ್ರಕಟನೆಯಿಂದ ಹಳಗನ್ನಡ ಸಾಹಿತ್ಯಪ್ರೇಮಿಗಳ ಗ್ರಂಥಭಂಡಾರಕ್ಕೆ ಮತ್ತೊಂದು ರತ್ನ ಸೇರಿದಂತಾಯಿತು. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಈ ತೆರನಾದ ಪ್ರಾಚೀನ ಗ್ರಂಥಗಳನ್ನು ಹೆಚ್ಚುಹೆಚ್ಚಾಗಿ ಪ್ರಕಟಿಸಲಿ.

ಎಚ್. ಎಂ. ಶಂಕರನಾರಾಯಣರಾವ್.

***

ಗೋಮುಖವ್ಯಾಘ್ರ—ಲೇಖಕರು : ಶ್ರೀಪತಿ ಮತ್ತು ತಾ. ರಾ. ನಾಗರಾಜ ; ಪ್ರಕಾಶಕರು : ಸುದರ್ಶನ ಪ್ರಕಟನಾಲಯ, ಬೆಂಗಳೂರು; ಕ್ರೌ ೧೬ ಅ. ಪು. ೬೯ ; ಬೆಲೆ, ರೂ. ೧-೦-೦

ಒಂಭತ್ತು ಸಣ್ಣ ಕತೆಗಳ ಸಂಕಲನವಿದು. "ಸಾಹಿತ್ಯ ಕೇವಲ ಮನರಂಜನೆಗಾಗಿಯೇ ಅಲ್ಲ; . . . ಯಾವುದು ಸಮಾಜದ ನಗ್ನ ಸತ್ಯತೆಯಮೇಲೆ ಕಲ್ಪನಾ

ಲೋಕದ ತೆರೆಯನ್ನು ಹಾಕದೆ ಪ್ರತಿಬಿಂಬಿಸುವುದೋ ಅದೇ ಜೀವಂತಸಾಹಿತ್ಯ; ಸಾರ್ಥಕಸಾಹಿತ್ಯ" ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ. ಎಲ್ಲ ಕತೆಗಳೂ ಹೆಚ್ಚು ಕಡಿಮೆ ಸಮಾಜದ ಕುಂದುಕೊರತೆಗಳನ್ನೇ ಚಿತ್ರಿಸುತ್ತವೆ. ಇಂತಹ ಧ್ಯೇಯವಾದಿ ಮತ್ತು ಸತ್ಯದೃಷ್ಟಿಯ ಬರಹಗಳು ನಾಡಿಗೆ ಬೇಕು. ಆದರೆ ಎಲ್ಲ ಕತೆಗಳಲ್ಲೂ ಒಂದೇ ಶ್ರುತಿ. ಒಂದೆರಡು ಕತೆಗಳನ್ನೋದಿದಮೇಲೆ ಮುಂದಿನ ಕತೆಗಳ ಆದಿ-ಅಂತಗಳನ್ನು ಊಹಿಸಬಹುದು. ಮುದ್ರಣ ತಪ್ಪುಗಳಿಲ್ಲದೆ ಅಂದವಾಗಿದೆ. ಇವರಿಂದ ಇನ್ನೂ ಉತ್ತಮ ಕೃತಿಗಳನ್ನು ನಿರೀಕ್ಷಿಸುತ್ತೇವೆ.

ಗೋ. ಕ.

***

ಪಠಾಕ್ಷಿ—ಲೇಖಕರು : ಹೊಯಿಸಳ; ಪ್ರಕಾಶಕರು : ಕಾವ್ಯಾಲಯ, ಮೈಸೂರು.

ಶಿಶುಲೋಕಕ್ಕೆ, ತಮ್ಮ ಹಲವಾರು ಕೃತಿಯಿಂದ ಪರಿಚಿತರಾಗಿರುವ ಶ್ರೀ ಹೊಯಿಸಳರ ಪುಸ್ತಕ ಇದು. ಮಕ್ಕಳ ಮನಸ್ಸನ್ನೆ ಸೆರೆಹಿಡಿದು, ಅರಳಿಸುವ ಗುಣ ಇವರ ಲೇಖನಿಯಲ್ಲಿದೆ.

ದೊಡ್ಡವರು, ಮಕ್ಕಳಿಗಾಗಿ ಬರೆಯುವುದು ಸುಲಭವಲ್ಲ. ಮಕ್ಕಳೊಡನೆ ಮಕ್ಕಳಾಗಿ ಅವರ ಹೃದಯವನ್ನರಿತವರಿಗೆ ಮಾತ್ರ ಇಂತಹ ಕಲೆ ಸಾಧ್ಯ. ಅಂತಹ ಕಲೆಗಾರಿಕೆ ಹೊಯ್ಸಳರಿಗೆ ಸಿದ್ಧಿಸಿದೆ ಎನ್ನುವುದಕ್ಕೆ ಮಕ್ಕಳು ಅವರ ಕೃತಿಯ ಬಗ್ಗೆ ತೋರುವ ಅಕ್ಕರೆಯೇ ಸಾಕ್ಷಿ.

ಮಗುವಿನ ಮನಸ್ಸು ಬೆಣ್ಣೆಯಂತೆ. ಅದನ್ನು ಯಾವ ರೂಪಿಗೆ ಬೇಕಾದರೆ ತಿರುಗಿಸಬಹುದು. ಹಾಗೆ ತಿರುಗಿಸಲು 'ಪಠಾಕ್ಷಿ'ಯಂತಹ ಕೃತಿಗಳು ಬೇಕು. ಮಕ್ಕಳಿಗೆ ಮನರಂಜನೆಯ ನೆಪದಲ್ಲಿ ಶಿಕ್ಷಣವನ್ನು ಕೊಡುತ್ತವೆ, ಪಠಾಕ್ಷಿ; ಚಿಂತಾಮಣಿ, ಶಂಕರಸ್ಕೌಟು, ಇತ್ಯಾದಿ ಇದರಲ್ಲಿರುವ ಕಥೆಗಳು.

ಇಂತಹ ಸರಳ, ಸುಂದರವಾದ 'ಪಠಾಕ್ಷಿ'ಯನ್ನೇ ಹಾರಿಸಿದ್ದಕ್ಕಾಗಿ ಹೊಯ್ಸಳರು ಅಭಿನಂದನಾರ್ಹರು—

ಜಿ. ಎಸ್. ಶಿ.

ವಸ್ತುಕೋಶ

ವಿವೇಕಾಭ್ಯುದಯದ ಈ ವರುಷದ ವಿಶೇಷ ಸಂಚಿಕೆಯಲ್ಲಿ "ಕರ್ನಾಟಕದಲ್ಲಿಯ ಗೊಮ್ಮಟ ಮಹಾಮೂರ್ತಿಗಳು" ಎಂಬ ವಿಷಯದ ಮೇಲೆ ಶ್ರೀ ಎಂ. ಗೋವಿಂದ ಪೈ ಯವರು ವಿದ್ವತ್ಪ್ರಚುರವಾದ ಲೇಖನವನ್ನು ಬರೆದು ಕನ್ನಡಿಗರನ್ನು ಸಾಮಾನ್ಯವಾಗಿಯೂ ಜೈನರನ್ನು ವಿಶೇಷವಾಗಿಯೂ ಉಪಕೃತರನ್ನು ಮಾಡಿದ್ದಾರೆ. ಆ ಲೇಖನದಲ್ಲಿ ಬಾಹುಬಲಿ ವಿಗ್ರಹಗಳ ಐತಿಹಾಸಿಕ ಸಂಗತಿಗಳನ್ನು ಸಂಶೋಧನಾತ್ಮಕವಾಗಿ ವಿವೇಚಿಸಿ ಕೊನೆಯಲ್ಲಿ 'ಗೊಮ್ಮಟ' ಶಬ್ದದ ವ್ಯುತ್ಪತ್ತಿಯನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಾರೆ. ಅದು ಮಾತ್ರ ಸಮಂಜಸವಾಗಿ ತೋರಲಿಲ್ಲ.

ಗೊಮ್ಮಟ ಶಬ್ದದ ವ್ಯುತ್ಪತ್ತಿ

'ಗೊಮ್ಮಟ' ಶಬ್ದವು ಕ್ರಿ. ಶ. ೧೦ ನೆಯ ಶತಮಾನದಿಂದೀಚೆ ಸಾಹಿತ್ಯದಲ್ಲಿ ಪ್ರಚಾರಗೊಂಡಿರುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರಂತೆ ಬಾಹುಬಲಿಸ್ವಾಮಿಗೆ 'ಮನ್ಮಥ' ಎಂಬ ಹೆಸರಿರುವುದನ್ನು ಎಲ್ಲರೂ ಒಪ್ಪಲೇ ಬೇಕು. ಈ ಸಂದರ್ಭದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. ಶ್ರೀ ಪೈ ಯವರು 'ಗೊಮ್ಮಟ' ಪದವು 'ಮನ್ಮಥ' ಪದದಿಂದ ಅಪಭ್ರಂಶವಾಗಿ ಬಂದಿದೆಯೆಂದು ಮೊದಲು ಊಹಿಸಿ ಆಮೇಲೆ ಅದಕ್ಕೆ ಪ್ರಮಾಣಗಳನ್ನು ಪ್ರಯತ್ನಪೂರ್ವಕವಾಗಿ ಕೊಟ್ಟಿದ್ದಾರೆ. ಅದು ಹೀಗೆ:—

೧. ನ್ಮಕಾರವು ಕನ್ನಡದಲ್ಲಿ ಮ್ಮಕಾರವಾಗುವುದು. ಉದಾ: ಉನ್ಮತ್ತ= ಉಮ್ಮಚ್ಚ, ಸನ್ಮಾನ= ಸಮ್ಮಾನ ಮುಂ.

ಪ್ರಾಕೃತದಲ್ಲಿಯೂ ಇದರಂತೆ ಬದಲಾವಣೆಯಾಗುತ್ತದೆ. ಉದಾ: ಮನ್ಮಥ= ವಮ್ಮಹ.

೨. ಸಂಸ್ಕೃತ ಥಕಾರಕ್ಕೆ ಕನ್ನಡದಲ್ಲಿ ಟಕಾರಾದೇಶವಾಗುವುದು. ಉದಾ: ಗ್ರಂಥಿ= ಗಂಟು, ಪಾರ್ಥಿವ= ಪರುಟವ ಮುಂ.

ಇದರಿಂದ ಮನ್ಮಥಶಬ್ದದೊಳಗಿನ ಕೊನೆಯ ಎರಡು ಅಕ್ಷರಗಳು "ಮ್ಮಟ" ಎಂದು ವಿಕಾರಗೊಳ್ಳುತ್ತವೆ. ಈ ತರುವಾಯ ಆದಿಮಕಾರವು ಗಕಾರವೋ ದುಕಾರವೋ ಗೋಕಾರವೋ ಆದರೆ ಸಾಕು ಎಂದು ಶೋಧಿಸ ಹೊರಡುತ್ತಾರೆ. ದೈವಯೋಗದಿಂದ 'ಸಂಸ್ಕೃತಪದದೊಳಗಿನ ಮಕಾರಕ್ಕೆ ಕನ್ನಡದಲ್ಲಿ ಗಕಾರಾದೇಶ ಇದೆ' ಯೆಂಬ ನಿರ್ಣಯಕ್ಕೆ ಬರಲು ಕೆಲವು ಉದಾಹರಣೆಗಳು ಅವರಿಗೆ ಈ ಸಂದರ್ಭ

ದಲ್ಲಿ ದೊರೆತಿವೆ. ಅವು ಯಮುನಾ=ಜಗುನೆ, ದ್ರಮಿಲ= ತಿಗುಳ, ಭ್ರಮರಿ=ಬೊಗರಿ. ಅತ ಏವ **ಮನ್ಮಥ=ಗಮ್ಮಟೆ.** ಆಮೇಲೆ ಗಕಾರವೂ ಗುಕಾರವೂ ಗೊಕಾರವೂ ಆಗುವುದೆಂದು ಉದಾಹರಣೆಗಳಿಂದ ಸಿದ್ಧಪಡಿಸಿದ್ದಾರೆ.

ಶ್ರೀ ಪೈ ಯವರ ಈ ನಿರ್ಣಯವು ನನಗೆ ಸಮಂಜಸವೆನಿಸಲಿಲ್ಲ. ಯಾಕೆಂದರೆ ಕೇಶಿರಾಜನು ತನ್ನ ಶಬ್ದಮಣಿದರ್ಪಣದ ಅಪಭ್ರಂಶ ಪ್ರಕರಣದಲ್ಲಿ ಮಕಾರಕ್ಕೆ ಗಕಾರಾದೇಶವಾಗುವ ಸೂತ್ರವನ್ನು ಹೀಗೆ ಹೇಳಿದ್ದಾನೆ:

ಸಮನಿಸುಗುಂ ಗತ್ವಂಶ
ಬ್ದಮಧ್ಯಮತ್ವಕ್ಕಂ . . . || ೨೭೬ || ಕ. ಸಾ. ಪ. ಪ್ರ.

ಈ ಸೂತ್ರದಲ್ಲಿ ಶಬ್ದಮಧ್ಯದ ಮಕಾರಕ್ಕೆ ಗಕಾರಾದೇಶವಾಗುತ್ತದೆಯೆಂದು ಹೇಳಿದೆಯೇ ಹೊರ್ತು ಪದಾದಿಯ ಮಕಾರಕ್ಕೆ ಗಕಾರಾದೇಶವೆಂದು ಹೇಳಿಲ್ಲ. ಇಷ್ಟೇ ಅಲ್ಲದೆ ಕೇಶಿರಾಜನಾದರೂ ಯಮುನಾ=ಜಗುನೆ ಎಂಬ ಉದಾಹರಣೆಯನ್ನೇ ಕೊಟ್ಟಿದ್ದಾನೆ. ಶ್ರೀ ಪೈ ಯವರು ಎರಡು ಉದಾಹರಣೆಗಳನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಆದುದರಿಂದ ಕೇಶಿರಾಜನ ಸೂತ್ರದ ಮೇರೆಗೆ ಮನ್ಮಥಶಬ್ದವು ಅಪಭ್ರಂಶಗೊಂಡು **ಗಮ್ಮಟೆ** ಎಂದಾಗದೆ **ಮಮ್ಮಟೆ** ಎಂದು ಆಗಬಹುದು. ಜನರ ಬಾಯಲ್ಲಿ ಮಮ್ಮಟ, ಮೊಮ್ಮಟ ಎಂಬ ಪ್ರಯೋಗಗಳು ಈಗಲೂ ಇವೆ.

ಶ್ರಿ ಪೈ ಯವರು ಗೊಮ್ಮಟಪದದ ವ್ಯುತ್ಪತ್ತಿಯನ್ನು ಸಾಧಿಸುವಲ್ಲಿ ಮಾಡಿದ ದೀರ್ಘಪ್ರಯತ್ನದಲ್ಲಿ ದಾರಿ ತಪ್ಪಿದಂತಾಗಿದೆ. ಅವರ ಇಷ್ಟು ಪ್ರಯತ್ನದ ಅವಶ್ಯಕತೆಯೇ ಇರಲಿಲ್ಲ. ಪಂಡಿತರತ್ನ ಶ್ರೀ ಎ. ಶಾಂತಿರಾಜಶಾಸ್ತ್ರಿಯವರು "ಶ್ರೀ ಬಾಹುಬಲಿಸ್ವಾಮಿ ಚರಿತ್ರೆ" ಎಂಬ ಪುಸ್ತಕವನ್ನು ವಿವೇಕಾಭ್ಯುದಯ ಕಾರ್ಯಾಲಯದ ಮುಖಾಂತರ ಇದೇ ವರುಷ ಪ್ರಕಟಿಸಿದ್ದಾರೆ. ಅದರ ೧೬ ನೆಯ ಪುಟದಲ್ಲಿ ಗೊಮ್ಮಟಪದದ ವ್ಯುತ್ಪತ್ತಿಯನ್ನು ಅವರು ಪ್ರಾಕೃತ ಸೂತ್ರಗಳ ಆಧಾರದಿಂದ ಕೊಟ್ಟಿದ್ದಾರೆ. ಅದು ಹೀಗೆ:

"ಅವರು (ನೇಮಿಚಂದ್ರಾಚಾರ್ಯರು) ರಚಿಸಿರುವ ಗ್ರಂಥಗಳೆಲ್ಲ ಪ್ರಾಕೃತ ಭಾಷೆಯಲ್ಲೇ ಇರುತ್ತವೆ. ಆ ಭಾಷೆಯ ತ್ರಿವಿಕ್ರಮ ವ್ಯಾಕರಣದ "ಗುಮ್ಮಗುಮ್ಮಡೌ ಮುಹೇಃ ೩-೪-೧೩೧" ಎಂಬ ಸೂತ್ರಾನುಸಾರವಾಗಿ "ಮೋಹಗೊಳಿಸುವವನು" ಎಂದು ಣಿಜಂತಾರ್ಥದಲ್ಲಿ "ಮುಹ" ಧಾತುವಿಗೆ "ಗುಮ್ಮಡ" ಎಂದು ಆದೇಶವಾಗುವದು. ಈ ಶಬ್ದದ ಡಕಾರಸ್ಥಾನದಲ್ಲಿ ಅದೇ ವ್ಯಾಕರಣದ "ಗಜಡದಬ ಘಝಢಧಭಾಂ ಕಚಟತಪ . . . ರಥಫಾಲ್ ೩-೨-೬೫" ಎಂಬ ಸೂತ್ರಾನುಸಾರವಾಗಿ ಟಕಾರವು ಬಂದು "ಗುಮ್ಮಟ" ಎಂದಾಗುವುದು. ಈ

ಮೂಲರೂಪದಿಂದಲೇ ಉಚ್ಚಾರಭೇದದಿಂದ ಗೋಮಟ—ಗೊಮ್ಮಟ ಶಬ್ದಗಳುಂಟಾಗಿರುವುವು. ತುಳುನಾಡಿನಲ್ಲಿ "ಗುಮ್ಮಡದೇವರ್" ಎಂದು ಹೇಳುವ ರೂಢಿಯೂ ಈ ಮಾತನ್ನು ಸಮರ್ಥಿಸುವುದು.

ಶ್ರೀಶಾಂತಿರಾಜಶಾಸ್ತ್ರಿಯವರು ತೋರಿದ ಮೊದಲನೆಯ ಸೂತ್ರವು ಫಲಕಾರಿಯಾಗಿದೆ. 'ಗುಮ್ಮ' ಶಬ್ದವು ಪ್ರಾಕೃತದಲ್ಲಿರುವಂತೆ ಕನ್ನಡದಲ್ಲಿಯೂ ಇದೆ. ಅದರರ್ಥ ಭ್ರಮೆಗೊಳಿಸುವವನು, ಭೂತ. ಈ ಅರ್ಥದಲ್ಲಿ ಅದನ್ನು ಶ್ರೀ ಬೆಟಗೇರಿ ಕೃಷ್ಣಶರ್ಮರವರು ತಮ್ಮ 'ಮುದ್ದನ ಮಾತು' ಎಂಬ ಕವನದಲ್ಲಿ ಉಪಯೋಗಿಸಿದ್ದಾರೆ. ಇದಲ್ಲದೆ 'ನೆಲಗುಮ್ಮ' ಎಂಬ ಸಮಸ್ತಪದವೂ ರೂಢಿಯಲ್ಲಿದೆ.

ಡಕಾರಕ್ಕೆ ಟಕಾರಾದೇಶವನ್ನು ಸಾಧಿಸಲು ಶ್ರೀ ಶಾಸ್ತ್ರಿಯವರು ತೋರಿದ ಆಧಾರಸೂತ್ರವು ಸಮಂಜಸವಾದುದಲ್ಲ; ಆ ಸೂತ್ರವು ಚೂಳಿಕಾ ಪೈಶಾಚೀಭಾಷೆಗೆ ಮಾತ್ರ ಅನ್ವಯಿಸುತ್ತದೆಂಬ ಡಾ. ಆ. ನೇ. ಉಪಾಧ್ಯೆಯವರ ಅಭಿಪ್ರಾಯ. ನೋಡಿ:

"To explain the change of ḍ to ṭ in the word gummaḍa, he quotes Sūtra No. III, ii, 65 from Trivikrama Prākrit grammar, but I must point out that it is a specific sūtra meant only for the Sālikā-Paiśāci dialect and it cannot be applied any where and everywhere". *Bhāratīya Vidyā*, Vol. II, Part I, p. 58.

ಆದುದರಿಂದ ಡಕಾರಕ್ಕೆ ಟಕಾರಾದೇಶಸಮಸ್ಯೆ ಶ್ರೀ ಶಾಸ್ತ್ರಿಯವರು ಭಾವಿಸಿರುವಂತೆ ತೃಪ್ತಿಕರವಾಗಿ ಪೂರ್ಣವಾಗದೆ ಹೋಯಿತು. ಅದರ ಪೂರ್ಣತೆಗೆ ಒಂದೇ ಒಂದು ಮಾರ್ಗವಿದೆ. ಅದು ಹೀಗೆ:

ದೇಶ್ಯಶಬ್ದಗಳಾಗಲಿ ಪ್ರಾಕೃತ ಪದಗಳಾಗಲಿ ಸಂಸ್ಕೃತದಲ್ಲಿ ಸೇರ್ಪಡೆಗೊಳ್ಳುವಾಗ ಅವುಗಳ ಡಕಾರಕ್ಕೆ ಟಕಾರಾದೇಶವಾಗುವುದು. ಉದಾ:

ಕಡು → ಕಟು (Caldwell's Com. Gram. p. 441)
ಗುಡಿ → ಕುಟಿ (,, ,, ,, 442)
ವಟ → ವಡ → ವಟ.

ಇವುಗಳಂತೆ ಪ್ರಾಕೃತ ಗುಮ್ಮಡಪದವು ಗೊಮ್ಮಟ ಎಂಬ ಸಂಸ್ಕೃತ ರೂಪು ಧರಿಸಿ ಗೊಮ್ಮಟಸಾರ ಎಂಬ ಸಂಸ್ಕೃತ ಸಮಸ್ತಪದದಲ್ಲಿ ಪ್ರಯುಕ್ತವಾಗಿದೆ.

ಈ ಆಧಾರಗಳಿಂದ ಗೊಮ್ಮಟಶಬ್ದವು ಮುಹ್ ಧಾತುವಿನಿಂದ ಬಂದಿದೆಯೆಂದು ಸಿದ್ಧವಾಗುತ್ತಿದೆಯೇ ಹೊರ್ತು ಮನ್ಮಥ ಶಬ್ದದಿಂದಲ್ಲವೆಂಬುದು ಸ್ಪಷ್ಟವಾಗಿದೆ. ಶ್ರೀ ಪೈ ಯವರು ಶ್ರೀ ಶಾಂತಿರಾಜಶಾಸ್ತ್ರಿಯವರ ಆ ಚಿಕ್ಕ ಹೊತ್ತಿಗೆಯನ್ನು ಅವಲೋಕಿಸಿದ್ದರೆ ತಮ್ಮ ನಿರ್ಣಯಕ್ಕೆ ಬರುತ್ತಿದ್ದಿಲ್ಲವೆಂದು ಊಹಿಸಬಹುದಾಗಿದೆ.

ಕೆ. ಜಿ. ಕುಂದಣಗಾರ.

ಸಂಪಾದಕೀಯ

ಕಂಬನಿ

ತಾ ೨೨-೬-೫೧ ರ ದಿನ ಪ್ರಸಿದ್ಧ ಆಂಧ್ರಭಾಷಾ ವಿದ್ವಾಂಸರಾದ ಮಹಾ ಮಹೋಪಾಧ್ಯಾಯ ಚಿಲುಕುರಿ ನಾರಾಯಣರಾಯರು ತಮ್ಮ ೬೧ ನೆಯ ವಯಸ್ಸಿನಲ್ಲಿ ನಿಧನರಾದರೆಂದು ಕೇಳಲು ವಿಷಾದಿಸುತ್ತೇವೆ. ದಿವಂಗತರು ಉದ್ದಾಮ ಪಂಡಿತರೂ ಗ್ರಂಥಕರ್ತರೂ ಆಗಿದ್ದರು. ಅವರು ತೆಲುಗಿನಲ್ಲಿ ಅನೇಕ ಕವನಗಳನ್ನೂ ನಾಟಕಗಳನ್ನೂ ಕಾದಂಬರಿಗಳನ್ನೂ ರಚಿಸಿದ್ದಾರೆ. ಅವರು ಅಥರ್ವವೇದವನ್ನು ತೆಲುಗಿಗೆ ಭಾಷಾಂತರಿಸಿದ್ದಾರೆ. ಅವರ ಆಂಧ್ರಭಾಷಾಸಾಹಿತ್ಯ ಚರಿತ್ರೆಗಳು ವಿಶೇಷ ಪ್ರಖ್ಯಾತವಾಗಿವೆ. ಭಾಷಾಶಾಸ್ತ್ರಸಂಬಂಧವಾಗಿ ಅವರು ವಿಶೇಷ ಪರಿಶೋಧನೆಯನ್ನು ನಡೆಸಿದ್ದಾರೆ. ಅವರಿಗೆ ಸಂಸ್ಕೃತ, ತೆಲುಗು, ಅರಬ್ಬೀ ಭಾಷೆಗಳಲ್ಲಿ ಹೆಚ್ಚು ಪರಿಶ್ರಮವಿತ್ತು. ಪ್ರಾಚೀನವಾದ ತೆಲುಗು ಮತ್ತು ಬೌದ್ಧಗ್ರಂಥಗಳನ್ನು ಅವರು ಸಂಪಾದಿಸಿ ಪ್ರಕಟಿಸಿದ್ದಾರೆ.

ಅವರು ರಾಜಮಹೇಂದ್ರ ಮತ್ತು ಅನಂತಪುರದ ಪ್ರೌಢಶಾಲೆಯಲ್ಲಿ ಆಂಧ್ರಭಾಷಾ ಉಪನ್ಯಾಸಕರಾಗಿದ್ದರು. ಆಂಧ್ರಸಾಹಿತ್ಯದಲ್ಲಿ ಸರಳವಾದ ಮಾತನಾಡುವ ಶೈಲಿಯನ್ನು ಬಳಕೆಗೆ ತರಲು ದಿವಂಗತ ಗಿಡಗು ರಾಮಚಂದ್ರಪಂತಲುವರೊಡನೆ ವಿಶೇಷ ಶ್ರಮಿಸಿದರು. ಅವರು ಇಂಗ್ಲೀಷಿಗೆ ಭಾಷಾಂತರಿಸಿರುವ ತ್ಯಾಗರಾಜರ ಕೀರ್ತನೆಗಳು ಜನಪ್ರಿಯವಾಗಿವೆ. ೧೯೪೭ ರಲ್ಲಿ ಸರ್ಕಾರದವರು ಅವರ ಪಾಂಡಿತ್ಯದ ಕುರುಹಾಗಿ ಮಹಾ ಮಹೋಪಧ್ಯಾಯ ಪ್ರಶಸ್ತಿಯನ್ನು ದಯಪಾಲಿಸಿದರು. ಆಂಧ್ರ ವಿಶ್ವವಿದ್ಯಾನಿಲಯದವರು ಕಲಾಪ್ರಪೂರ್ಣ ಎಂಬ ಬಿರುದನ್ನಿತ್ತರು. ಶ್ರೀ ನಾರಾಯಣ ರಾಯರು ಅನೇಕ ವರ್ಷಕಾಲ ಆಂಧ್ರ ಇತಿಹಾಸ ಪರಿಶೋಧಕ ಮಂಡಲಿಯ ಅಧ್ಯಕ್ಷರಾಗಿದ್ದರು. ಅವರ ನಿಧನದಿಂದ ಸಾಹಿತ್ಯಪ್ರಪಂಚಕ್ಕೆ ವಿಶೇಷ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ.

ಸಾದರ ಸ್ವೀಕಾರ

೧. **ಒಲಿದುಬಂದ ಹೆಣ್ಣು**—ಬರೆದವರು: ಶ್ರೀ ತ್ರಿವಿಕ್ರಮ ಅವರು; ಪ್ರಕಾಶಕರು: ಅನಂದ್ ಬ್ರದರ್ಸ್, ಬೆಂಗಳೂರು—೨; ಕ್ರೌ ಅ. ಪು. ೨೬೭; ಬೆಲೆ, ರೂ. ೩-೮-೦.

೨. **ಅರ್ಧನಾರೀಶ್ವರ** (ಸಾಮಾಜಿಕ ಕಥೆ)—ಬರೆದವರು: ಶ್ರೀ ಚಿ. ಸದಾಶಿವಯ್ಯ; ಪ್ರಕಾಶಕರು: ಅನಂದ್ ಬ್ರದರ್ಸ್, ಬೆಂಗಳೂರು—೨; ಕ್ರೌ ಅ. ಪು. ೭೦; ಬೆಲೆ, ರೂ. ೧-೦-೦.

೩. **ಕನ್ಯಾಸೆರೆ** (ಸಾಮಾಜಿಕ ನಾಟಕ)—ಬರೆದವರು: ಶ್ರೀ ಚಿ. ಸದಾಶಿವಯ್ಯ; ಪ್ರಕಾಶಕರು: ಅನಂದ್ ಬ್ರದರ್ಸ್, ಬೆಂಗಳೂರು—೨; ಕ್ರೌ ಅ. ಪು. ೫೬; ಬೆಲೆ, ರೂ. ೧-೦-೦.

೪. **ಕರಿಯ ಕಂಬಳಿ**—ಬರೆದವರು: ಶ್ರೀ ಜಿ. ಪಿ. ರಾಜರತ್ನಂ; ಪ್ರಕಾಶಕರು: ಅನಂದ್ ಬ್ರದರ್ಸ್, ಬೆಂಗಳೂರು—೨; ಕ್ರೌ ಅ. ಪು. ೧೪೭; ಬೆಲೆ, ರೂ. ೧-೧೨-೦.

೫. **ಮಾತಿನಮಲ್ಲಿ**—ಬರೆದವರು: ಶ್ರೀ ಜಿ. ಪಿ. ರಾಜರತ್ನಂ; ಪ್ರಕಾಶಕರು: ಅನಂದ್ ಬ್ರದರ್ಸ್, ಬೆಂಗಳೂರು—೨; ಕ್ರೌ ಅ. ಪು. ೧೩೭: ಬೆಲೆ, ರೂ. ೧-೧೨-೦.

೬. **ಭಾರತೀಯ ಪೌರರು**—ಲೇಖಕರು ಮತ್ತು ಪ್ರಕಾಶಕರು: ಶ್ರೀ ಎ. ಶೇಷ ಅಯ್ಯಂಗಾರ್ ಮತ್ತು ಶ್ರೀ ಮಿರ್‌ಮುರ್ತುಸಾ ಹುಸೇನ್; ಟೀಚರ್ಸ್ ಕಾಲೇಜ್, ಮೈಸೂರು; ಕ್ರೌ ಅ. ಪು. ii+vii+೨೦೦; ಬೆಲೆ, ರೂ. ೧-೧೫-೦.

೭. **ರಕ್ತಾಂಜಲಿ**—ಮೂಲಲೇಖಕ: ಜೂಲಿಯಸ್ ಫೂಚಿಕ್; ಅನುವಾದಕರು: ಶ್ರೀ ವಾಸುದೇವ; ಪ್ರಕಾಶಕರು: ಪುರೋಗಾಮಿ ಪ್ರಕಾಶನ, ನಂ. ೧೬, ೩ ನೆಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು—೨; ಕ್ರೌ ಅ ಪು. ೧೭೦; ಬೆಲೆ, ರೂ. ೧-೮-೦.

೮. **ಸಂಸ್ಕೃತ ವ್ಯಾಕರಣಚಂದ್ರಿಕಾ**—ಲೇಖಕ: ವಾ. ಗ. ಮುಳಗುಂದ; ಪ್ರಕಾಶಕರು: ವಾ. ಹು. ನಾಗರಹಳ್ಳಿ, ಮುಖ್ಯಾಧ್ಯಾಪಕ, ಪಿ.ಡಿ.ಜಿ. ಹೈಸ್ಕೂಲ್, ವಿಜಾಪುರ; ಅ. ಪು. ಕ್ರೌ, iv+೧೦೬; ಬೆಲೆ, ರೂ. ೦-೧೪-೦.

೯. **ಅಪಾರ ಕರುಣೆ**—ಬರೆದವರು: ಶ್ರೀ ರಸಿಕರಂಗ; ಪ್ರಕಾಶಕರು: ಪ್ರೊ. ರಂ. ಶ್ರೀ ಮುಗುಳಿ, ವಿಲಿಂಗ್‌ಡನ್ ಕಾಲೇಜ್, ವಿಶ್ರಾಮ ಬಾಗ, ಸಾಂಗಲಿ; ಕ್ರೌ ಅ. ಪು. ೨+೯೪; ಬೆಲೆ, ಸಾದಾ ರೂ. ೧-೦-೦; ಉತ್ತಮ, ರೂ. ೧-೮-೦.

೧೦. **ಓಂ ಅಶಾಂತಿಃ**—ಬರೆದವರು: ಶ್ರೀ ರಸಿಕರಂಗ; ಪ್ರಕಾಶಕರು: ಪ್ರೊ. ರಂ. ಶ್ರೀ ಮುಗುಳಿ, ವಿಲಿಂಗ್‌ಡನ್ ಕಾಲೇಜ್, ವಿಶ್ರಾಮ ಬಾಗ, ಸಾಂಗಲಿ; ಕ್ರೌ ಅ. ಪು. vi+೮೬; ಬೆಲೆ, ಸಾದಾ ರೂ. ೧-೦-೦; ಉತ್ತಮ, ರೂ. ೧-೮-೦.

೧೧. **ಯೋಗಸಾರ**—ಸಂಪಾದಕರು: ಶ್ರೀ ಎಂ. ಪದ್ಮನಾಭಶರ್ಮ, ನ್ಯಾಯತೀರ್ಥ; ಪ್ರಕಾಶಕರು: ಎನ್. ನಾಗರಾಜ ಬ್ರಹ್ಮದೇವಶರ್ಮ, ಮದ್ದೂರು ಮತ್ತು ಜೈನಸಾಹಿತ್ಯಪ್ರಚಾರ ಸಂಘ, ಮೈಸೂರು; ಕ್ರೌ ಅ. ಪು. ೨೮; ಬೆಲೆ, ರೂ. ೦-೪-೦.

೧೨. **ತತ್ವಾರ್ಥಸೂತ್ರ**—ಸಂಪಾದಕರು: ಶ್ರೀ ಯಂ. ಸಿ. ಪದ್ಮನಾಭಶರ್ಮ; ಪ್ರಕಾಶಕರು: ಜೈನಸಾಹಿತ್ಯಪ್ರಚಾರ ಸಂಘ, ಮೈಸೂರು; ಕ್ರೌ ಅ. ಪು. xv+೪೪; ಬೆಲೆ, ರೂ. ೦-೪-೦.

೧೩. **ಯಶೋಧರ ಕಾವ್ಯಂ**—ಸಂಪಾದಕರು: ಶ್ರೀ ಎಸ್. ಬೊಮ್ಮರಸ ಪಂಡಿತರು; ಪ್ರಕಾಶಕರು: ಜೈನಸಾಹಿತ್ಯಪ್ರಚಾರ ಸಂಘ, ಮೈಸೂರು; ಕ್ರೌ ಅ. ಪು. xxi+೯೭; ಬೆಲೆ, ರೂ. ೧-೦-೦.

೧೪. **ಶಾಂತಶೃಂಗಾರವಿಲಾಸ**—ರಚಿಸಿದವರು: ವಿದ್ಯಾಭೂಷಣ ಶ್ರೀ ಪಂ|| ಕೆ. ಬುಜಬಲಶಾಸ್ತ್ರಿಗಳವರು; ಪ್ರಕಾಶಕರು: ಜೈನಸಾಹಿತ್ಯಪ್ರಚಾರ ಸಂಘ, ಮೈಸೂರು; ಕ್ರೌ ಅ. ಪು. ೩೬; ಬೆಲೆ, ರೂ. ೦-೫-೦.

೧೫. **'ವೀಣಾ'**—ಬರೆದವರು: ಶ್ರೀ ಟಿ. ಎನ್. ಮಹದೇವಯ್ಯ; ಪ್ರಕಾಶಕರು: ಹಿಂದೂಸ್ಥಾನ್ ಪ್ರೆಸ್, ಮೈಸೂರು; ಕ್ರೌ. ಅ. ಪು. ೩೮; ಬೆಲೆ, ರೂ. ೦-೮-೦.

೧೬. **ಭರತೇಶವೈಭವ ಶೋಭನಸಂಧಿಗಳು**—ಸಂಪಾದಕ: ಶ್ರೀ ಮಿರ್ಜಿ ಅಣ್ಣಾರಾಯ; ಪ್ರಕಾಶಕರು: ಶಾಂತಿಸೇವಾಸದನ, ಸೇಡಬಾಳ; ಕ್ರೌ ಅ. ಪು. ೨+೪೬; ಬೆಲೆ, ರೂ. ೧-೦-೦.

ಪ್ರಾಚ್ಯಲೇಖನಮಾಲೆ

೧. **ಶರಣ ಸಾಹಿತ್ಯ**—ಸಂಪುಟ ೧೪, ಸಂಚಿಕೆ ೨ (೧೯೫೧ ನೇ, ಮೇ ತಿಂಗಳು)

'ಶಕ್ತಿವಿಶಿಷ್ಟಾದ್ವೈತ ದರ್ಶನ'—ಲೇ. : ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು.

ತತ್ವವಿಕಾಸದ ದೃಷ್ಟಿಯಿಂದ ಶಕ್ತಿವಿಶಿಷ್ಟಾದ್ವೈತದರ್ಶನವು ಭಾರತೀಯ ವೇದಾಂತ ದರ್ಶನಗಳಲ್ಲಿ ಕಡೆಯದೆಂದು ಹೇಳಬೇಕಾಗುತ್ತದೆ. ಶಕ್ತಿವಿಶಿಷ್ಟಾದ್ವೈತದರ್ಶನದಲ್ಲೂ ಶಕ್ತಿಗೆ ವಿಶಿಷ್ಟಸ್ಥಾನವಿದೆ. 'ವೀರಶೈವ'ದಲ್ಲಿ ಶಕ್ತಿವಿಶಿಷ್ಟಾದ್ವೈತದರ್ಶನವಿದೆ.

೨. **ಕನ್ನಡನುಡಿ**—ಸಂಪುಟ ೧೪, ಸಂಚಿಕೆ ೫, ಮೇ, ೧೯೫೧.

'ಕೇಶಿರಾಜನು ಜೈನನೆ?' ಲೇ. : ಶ್ರೀ ಜಯಂತ.

'ಶಬ್ದಮಣಿದರ್ಪಣ'ದ ಸೂತ್ರವೊಂದರಿಂದ (ಕಂದ ೯) ಕೇಶಿರಾಜ ಜೈನನೆಂದು ತಿಳಿದುಬರುತ್ತದೆ. 'ಶಬ್ದದ್ರವ್ಯ' ಎಂಬ ಪದ ಜೈನಪರಿಭಾಷೆಯದು. ಶಬ್ದಕ್ಕೆ ಜೈನಮತದಲ್ಲಿ ಮಾತ್ರ ದ್ರವ್ಯತ್ವವನ್ನು ಹೇಳಿರುವುದರಿಂದ ಕೇಶಿರಾಜ ಜೈನನಿರಬೇಕು.

೩. **ಜಯಂತಿ**—ಜೂನ್, ೧೯೫೧.

'ಅಂದಮಾನ'—ನಿಕೋಬಾರ ನಡುಗಡ್ಡೆಗಳು—ಲೇ. : 'ವಿದ್ಯಾರತ್ನ' ರಾ. ಸ್ವಾ. ಪಂಚಮುಖಿ ಎಂ.ಎ., ಧಾರವಾಡ.

ಅಂದಮಾನದ ಮೂಲ ಹೆಸರು 'ಹಂದುಮಾನ' ಆಗಿರಬೇಕು. 'ಹನುಮಾನ್' ಇದರ ಮಲಯಾಭಾಷೆಯ ಉಚ್ಚಾರಣೆಯ ಮೂಲರೂಪ ಎಂದು ಪಂಡಿತರ ಅಭಿಪ್ರಾಯ. ಹಿಂದೂಸ್ಥಾನದ ವಾನರ ಸಂಸ್ಕೃತಿಯ ಅವಶೇಷ ಇಲ್ಲಿ ಕಾಣುತ್ತದೆ. ಅಲ್ಲಿನವರ ಭಾಷೆ ಅಲ್ಪಶಬ್ದಗಳುಳ್ಳದ್ದು. ಉತ್ತಮ ಪುರುಷಪ್ರಧಾನವಾದ ವ್ಯವಹಾರವಿದೆ. ಭಾಷೆಯಲ್ಲಿ ಸಂಶ್ಲೇಷದ ಲಕ್ಷಣಗಳಿವೆ. ಶೀರಕಾಡ್ ಸ್ಥಿತಿಯಂತೆ ಇದ್ದರೂ ಆ ಭಾಷೆಯ ಪ್ರಕೃತಿ ಪ್ರತ್ಯಯಗಳನ್ನೆ ವಿಂಗಡಿಸಬಹುದು, ಇದರಿಂದ ಅದು ಅನೇಕ ಪೂರ್ವದ ಅವಸ್ಥೆಗಳನ್ನ ದಾಟಿ ಇಲ್ಲಿಗೆ ಬಂದಂತೆ ತೋರುತ್ತದೆ.

'ಜೋಗಿ ಮತ್ತು ಗೊಂದಲಿಗರ ಕಥೆಗಳು'—ಲೇ. : ಶ್ರೀ ಪಾಟೀಲ ಬಳವಂತರಾಯರು, ಬೆಟಗೇರಿ.

ಜನಸಾಮಾನ್ಯದ ಸಾಮೂಹಿಕ ಶಿಕ್ಷಣಕ್ಕೆ ಪುರಾಣಕಾರರು, ಕೀರ್ತನಕಾರರು, ಪ್ರವಚನಕಾರರು, ಜಂಗಮರು, ಶರಣರು, ಇತ್ಯಾದಿಗಳಂತೆ ಗೊಂದಲಿಗರು, ಜೋಗಿಗಳು; ಇದ್ದಾರೆ. ಗೊಂದಲಿಗರ ಕಥೆಗಳು ಜನರ ಸುಖಸಂಕಥಾವಿನೋದಕ್ಕೆ ಮೆರಗು ಕೊಡುತ್ತವೆ. ರಾಮಾಯಣ ಮಹಾಭಾರತ ಕತೆಗಳನ್ನು ತಮ್ಮದೇ ಆದ ಧಾಟಿಯಲ್ಲಿ ಹಾಡುತ್ತಾರೆ. ಅಷ್ಟೇ ಅಲ್ಲದೆ ಪ್ರಾಚೀನ ಮಹಾವ್ಯಕ್ತಿಗಳ ಕಥೆಯನ್ನು ಹಾಡುತ್ತಾರೆ. ಅಚ್ಚಕನ್ನಡದ ನುಡಿಕಟ್ಟುಗಳಿಂದ, ಬ್ರಹ್ಮ ವಿಷ್ಣು ರುದ್ರ ಗಣಗಳಿಂದ ಘಟಿತವಾದ ಗೊಂದಲಿಗರ ಹಾಡುಗಳು ಜಾನಪದ ಚಂಪೂಕಾವ್ಯಗಳು.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

ಇನ್ನುಮುಂದೆ 'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಡ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ. ೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ. ೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ. ೨	೮	೦

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳಿಹಿಸಬಹುದು.)

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨½ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವರು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦ ; ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
- ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ ರ ವರೆಗೆ
- ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೨ ರಿಂದ ೧೯೪೬ರ ವರೆಗೆ
- ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೬ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨.* **ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩.* **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪.* **ಸಾಕ್ರೆಟೀಸನ ಕೊನೆಯ ದಿನಗಳು**(ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫.* **ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦.* **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. **ಯಶೋಧರ ಚರಿತೆಯ ಸಂಗ್ರಹ**—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. ***ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ**—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. ***ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧.*ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩.*ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪.*ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫.*ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯.*ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧.*ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨.*ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪.*ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧.*ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨.*ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫.*ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬.*ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦.*ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. *ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. *ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. *ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. *ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. *ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. *ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦. *ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ
೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. *ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

ಸಾಧಾರಣ ಪ್ರತಿ ೩ ಆಣೆ.
ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ,
ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಣ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ವಿದ್ಯುಚ್ಛಕ್ತಿಯ ಉಪಯೋಗ—ಮ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೨. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೩. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೪. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ' ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)— ಬೆಲೆ ರೂ. ೧—೦—೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧—೮—೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)— ಕ್ಯಾಲಿಕೊ ಪ್ರತಿ ರೂ. ೧—೮—೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦—೧೨—೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, M.A.
Published by The University of Mysore, Mysore. Printed by J. Brown
at the Wesley Press and Publishing House, Mysore City